kids around the world

KIDStory™

# ಮೂಲ ತರಬೇತಿಯ ಕೈಪಿಡಿ

“ಜನರು ಪಾರಂಪರ್ಯವಾಗಿ ನಿನ್ನ ಕೃತ್ಯಗಳನ್ನು ಹೊಗಳುವರು; ನಿನ್ನ ಮಹಾತ್ಕಾರ್ಯಗಳನ್ನು ವರ್ಣಿಸುವರು.”
(ಕೀರ್ತನೆ 145:4)

# ಅನುಕ್ರಮಣಿಕೆ


| | ಪುಟಗಳು |
|---|---|
| **ಮಕ್ಕಳ ಕಥೆ ತರಬೇತಿಯ ಹೊರನೋಟ** | 4–5 |
| **ಅಧಿವೇಶನ 1** | |
| • ಸ್ವಾಗತ | 6 |
| • ಯೇಸು ಮಕ್ಕಳನ್ನು ಆಶೀರ್ವದಿಸಿದನು | 6–7 |
| **ಅಧಿವೇಶನ 2: ಸತ್ಯವೇದ ಕಥೆ ಹೇಳುವುದು/ಕಥೆಯನ್ನು ಕಲಿಯುವುದು ಎಂದರೇನು?** | |
| • ಸಾರ್ವತ್ರಿಕ | 8 |
| • ಸತ್ಯವೇದ ಕಥೆ ಹೇಳುವುದು ಏನಾಗಿದೆ | 8 |
| • ಪಾಠದ ಕ್ರಮ | 9–10 |
| • ವ್ಯತ್ಯಾಸವೇನಾಗಿದೆ/ಯಾಕೆ ಸತ್ಯವೇದ ಕಥೆ ಹೇಳುವುದು? | 11 |
| • ಕಥೆಯನ್ನು ಕಲಿಯುವುದು | 12–16 |
| **ಅಧಿವೇಶನ 3: ಕಥೆಯನ್ನು ಹೇಳಿರಿ** | |
| • ದೇವರ ಶೈಲಿಯಲ್ಲಿ | 17 |
| • ಪ್ರಸ್ತುತಪಡಿಸುವುದು | 18–19 |
| • ವ್ಯಕ್ತಪಡಿಸುವ ಹಾಳೆ | 20 |
| **ಮನೆಪಾಠದ ಚಟುವಟಿಕೆ** | 21 |
| **ಅಧಿವೇಶನ 4: ಭಕ್ತಿಯುಳ್ಳ** | 22–23 |
| **ಅಧಿವೇಶನ 5: ಕಥೆಯನ್ನು ಪುನಃ ಹೇಳಿರಿ** | |
| • ಆಟಗಳು | 24 |
| • ಕಲೆ, ನಾಟಕ ಮತ್ತು ಸಂಗೀತ | 25 |
| **ಅಧಿವೇಶನ 6: ಕಳೆದುಹೋದ ಕುರಿ** | 26 |
| **ಅಧಿವೇಶನ 7: ಪ್ರಶ್ನೆಗಳನ್ನು ಕಂಡುಹಿಯಿರಿ ಮತ್ತು ಪ್ರತ್ಯುತ್ತರ ಕೊಡಿರಿ** | 27–31 |
| • ಮಾದರಿ ಪ್ರಶ್ನೆಗಳು | 29–31 |
| **ಅಧಿವೇಶನ 8: ಅಂತಿಮ ನಿಯೋಜನೆ** | 32–33 |
| • ಪಾಠದ ಯೋಜನಾ ಹಾಳೆ | 33 |
| **ಅಧಿವೇಶನ 9: ಮುಕ್ತಾಯ ಮತ್ತು ಪ್ರತಿಷ್ಠೆ** | 34 |
| **ಅನುಬಂಧ** | 35 |


© Kids Around the World 2015

# ಮಕ್ಕಳ ಕಥೆ ತರಬೇತಿಯ ಹೊರನೋಟ

| |
|---|
| ರತ್ನಾಭರಣ<br>ಕಥಾಫಲಕ<br>ಚೆಂಡು |

ಅಧ್ಯಾಯ #1: ಸ್ವಾಗತ ಮತ್ತು *ಯೇಸು ಮಕ್ಕಳನ್ನು ಆಶೀರ್ವದಿಸುವದು* **ಪುಟ 6**

- – ಸ್ವಾಗತ
- – ಭಾಗವಹಿಸುವವರಿಗೆ ಮಾರ್ಗದರ್ಶನಗಳು ಮತ್ತು ಆರಂಭ
- – ಕಥೆ ಹೇಳುವುದಕ್ಕೆ ಪರಿಚಯ
- – ಕಥಾಫಲಕದಿಂದ ತಿರಿಗಿ ಹೇಳುವುದು
- – ಆಟ ತಿರಿಗಿ ಹೇಳುವುದು
- – ಪ್ರಶ್ನೆಗಳು

ಅಧಿವೇಶನ #2: ಸತ್ಯವೇದ ಕಥೆ ಹೇಳುವುದು ಏನಾಗಿದೆ **ಪುಟ 8**

| |
|---|
| ವೆಲ್‌ಕ್ರೋ |

- – ಕಥೆ ಹೇಳುವುದರಲ್ಲಿ ಮತ್ತು ಎಸ್.ಎಸ್. ವ್ಯತ್ಯಾಸ
- – ಪಾಠದ ರೂಪ
- – ಕಥೆ ಹೇಳುವುದು ಏನಾಗಿದೆ ಮತ್ತು ಯಾಕೆ
- – ಕಥೆ ಹೇಳುವುದು ಮತ್ತು *ನೀರಿನ ಮೇಲೆ ನಡೆಯುವುದು–ಪರಿಚಯ*
- – ಕಥೆಯನ್ನು ಕಲಿಯುವುದು
- – ಕಥೆಯನ್ನು ರೂಪಿಸುವುದು

ಅಧಿವೇಶನ #3: ಕಥೆ ಹೇಳುವುದು **ಪುಟ 17**

| |
|---|
| ಕಾಲಮಾಪಕ<br>ವಸ್ತ್ರಗಳು |

- – ದೇವರ ಶೈಲಿ
- – ಪ್ರಸ್ತುತಪಡಿಸುವುದು

ಅಧಿವೇಶನ #4: ಭಕ್ತಿಯುಳ್ಳ **ಪುಟ 22**

ಅಧಿವೇಶನ #5: ಕಥೆಯನ್ನು ತಿರಿಗಿ ಹೇಳುವುದು **ಪುಟ 24**

- – ವಿಷಯವನ್ನು ಪರಿಚಯಮಾಡಿ
- – ಹಗ್ಗ/ಆಟವನ್ನು ಉಪಯೋಗಿಸುವದು
- – ಕಥಾವಸ್ತುವಿನ ಆಟ
- – ಅಭ್ಯಾಸಮಾಡಲು ಎರಡು ಗುಂಪುಗಳಾಗಿ ವಿಂಗಡವಾಗಿರಿ ಮತ್ತು ತಿರಿಗಿ ಹೇಳುವ ವಿವಿಧ ವಿಧಾನಗಳನ್ನು ಉಪಯೋಗಿಸಿ
  - ಹಾಡನ್ನು ಬರೆಯಿರಿ
  - ಕಥಾಫಲಕಗಳು
  - ಕೈಗೊಂಬೆಗಳು
  - ನಾಟಕ/ನಟಿಸಿರಿ
  - ಪ್ರಟಕನೆ ಪತ್ರಿಕೆ
  - ನೃತ್ಯ/ಮೂಖಾಭಿನಯ
  - ಪೈಪ್ ಸ್ವಚ್ಚಮಾಡುವವರು/ಡಿಓಹೆಚ್ ಆಡಿರಿ
  - ಆಟ

ಕಾಲಮಾಪನ
ಹಗ್ಗ(ಗಳು)
ಕಥೆಗೆರೆಯ ಹಾಳೆಗಳು
ಬಳಪಗಳು
ಪ್ರಕಟನಾ ಫಲಕ
ಡಿಓಹೆಚ್ ಆಡಿರಿ
ಪೈಪ್ ಸ್ವಚ್ಚಮಾಡುವವರು
ಕಥಾಫಲಕದ ಕಥೆ

ಅಧಿವೇಶನ #6: ಕಳೆದುಹೋದ ಕುರಿ **ಪುಟ 26**

ಅಧಿವೇಶನ #7: ಕಂಡುಹಿಯುವ ಮತ್ತು ಪ್ರತ್ಯುತ್ತರದ ಪ್ರಶ್ನೆಗಳು **ಪುಟ 27**

- – ತಲೆ ಮತ್ತು ಹೃದಯ
- – ಪ್ರತಿಕ್ರಿಯೆ: ಗಮನ

ಬೀಚ್ ಬಾಲ್

ಅಧಿವೇಶನ #8: ಅಂತಿಮ ನಿಯೋಜನೆಗಳು **ಪುಟ 32**

ಮುಕ್ತಾಯ ಮತ್ತು ಪ್ರತಿಷ್ಠೆ **ಪುಟ 34**

# ಅಧಿವೇಶನ #1
# ಸ್ವಾಗತ ಮತ್ತು ಯೇಸು ಮಕ್ಕಳನ್ನು ಆಶೀರ್ವದಿಸುವದು

**ಸ್ವಾಗತ:** *ನಾವು ಮಕ್ಕಳಕಥೆಯ ತರಬೇತಿಗೆ ಎಲ್ಲರನ್ನು ಸ್ವಾಗತಿಸುತ್ತೇವೆ. ನಿಮ್ಮನ್ನು ಪರಿಚಯ ಮಾಡಿಕೊಳ್ಳಿರಿ ಮತ್ತು ಗುಂಪು ಚಿಕ್ಕದಾಗಿದ್ದರೆ, ಪ್ರತಿಯೊಬ್ಬರು ತಮ್ಮನ್ನು ಪರಿಚಯ ಮಾಡುವಂತೆ ನಡೆಸಿರಿ ಮತ್ತು ತರಬೇತಿಗೆ ಅವರು ಯಾಕೆ ಬಂದಿದ್ದಾರೆಂದು ಹಂಚಿಕೊಳ್ಳಿರಿ. ಮಕ್ಕಳು ಪ್ರಾಮುಖ್ಯವಾದವರು ಎಂದು ನಾವು ನಂಬುವದರಿಂದ ನಾವು ಇಲ್ಲಿದ್ದೇವೆ ಮತ್ತು ಅವರು ಸಹ ಹಾಗೆಯೇ ಎಂದು ದೇವರು ಆಲೋಚಿಸುತ್ತಾನೆ. ಮಕ್ಕಳು ಮತ್ತು ದೊಡ್ಡವರು ಪ್ರತಿಯೊಬ್ಬರೂ ಆತನನ್ನು ವೈಯಕ್ತಿಕವಾಗಿ ತಿಳಿದುಕೊಳ್ಳಬೇಕೆಂದು ಆತನು ಬಯಸುತ್ತಾನೆ. ನಾನು ಕಾರ್ಯಮಾಡುವುದಕ್ಕೆ ಮುಂಚೆ ಈ ಸಮಯದಲ್ಲಿ ನಾನು ನಿಮಗೆ ಕಥೆಯನ್ನು ಹೇಳುತ್ತೇನೆ, ನೀವು ಸಹಪಾಟಿಗಳನ್ನು ಕಂಡುಕೊಳ್ಳಿರಿ ಮತ್ತು ನೀವು ಚಿಕ್ಕವರಾಗಿರುವಾಗ ನಿಮ್ಮನ್ನು ಸ್ವಾಗತಿಸದೆ ಇದ್ದ ಅಥವಾ ಪ್ರೀತಿಸದೆ ಇದ್ದ ಅನುಭವದ ಸಮಯವನ್ನು ಹಂಚಿಕೊಳ್ಳಿರಿ.*

**ಯೇಸು ಮಕ್ಕಳನ್ನು ಆಶೀರ್ವದಿಸುವ ಸತ್ಯವೇದದ ಕಥೆಯನ್ನು ಹೇಳುವದು**

**ಆರಂಭ:** ಭಾಗವಹಿಸುವವರು ಜೊತೆಜೊತೆಯಾಗಿ ಇರಲು ಮತ್ತು ಅವರನ್ನು ಸ್ವಾಗತಿಸದೆ ಇದ್ದ ಅಥವಾ ಪ್ರೀತಿಸದೆ ಇದಂತ್ತ ಅನುಭವದ ಸಮಯವನ್ನು ಹಂಚಿಕೊಳ್ಳಲು ಹೇಳಿರಿ.

**ಭಾಗವಹಿಸುವವರಿಗೆ ಮಾರ್ಗದರ್ಶನಗಳು** (ಪುಟ 37) ನೋಡಿರಿ, ಜನರು ಹೇಗೆ ತಮ್ಮ ಕಲ್ಪನೆಗಳನ್ನು ಉಪಯೋಗಿಸಬೇಕೆಂದು ನೀವು ಬಯಸುವಿರೆಂಬುದನ್ನು ಗುರುತಿಸಿರಿ ಮತ್ತು ಕಥೆಯು ನಡೆಯುತ್ತಿರುವಾಗ ಅವರು ಅಲ್ಲಿದ್ದಾರೆಂದು ನಟಿಸಲಿ. ಅವರು ಯಾರನ್ನು ಮತ್ತು ಏನನ್ನು ನೋಡುತ್ತಿದ್ದಾರೆ? ನಡೆಯುತ್ತಿರುವ ಘಟನೆಗೆ ಕಥೆಯಲ್ಲಿರುವ ಜನರು ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ? *ಅವರಿಗೆ ಯಾವುದಾದರು ವಾಸನೆ ಬರುತ್ತಿದೆಯಾ? ಅವರಿಗೆ ಏನಾದರು ಅನುಭವವಾಗುತ್ತಿದೆಯಾ? ಹಾಗೂ ನಿಮ್ಮ ಆಶೆಯು ಪ್ರತಿಯೊಬ್ಬರೂ ಭಾಗವಹಿಸಬೇಕು ಎಂಬದೇ. (ಒಂದು ವೇಳೆ ನಮಲ್ಲಿ ವಜ್ರ ಇರುವುದಾದರೆ, ಪ್ರತಿಯೊಬ್ಬರಿಗೂ ಕಥೆಗೆ ಒಂದು ಅದ್ವಿತೀಯ ದೃಷ್ಟಿಕೋನ ಇರತ್ತದೆ ಎಂಬುದನ್ನು ದೃಷ್ಟಾಂತವಾಗಿ ತೋರಿಸಲು ನೀವು ಅದನ್ನು ಇಲ್ಲಿ ಉಪಯೋಗಿಸಬಹುದು ಇದು ಸಜೀವವಾಗಿ ಬರುವಂತೆ ಮಾಡುತ್ತದೆ). ನಮ್ಮ ದೃಷ್ಟಿಕೋನಗಳನ್ನು ಹಂಚಿಕೊಳ್ಳುವಾಗ ನಾವು ಒಬ್ಬರಿಂದೊಬ್ಬರು ಕಲಿಯುತ್ತೇವೆ. ನಾವು ಈ ದಿನದ ಕಥೆಯನ್ನು ಹಿಡಿದುಕೊಳ್ಳೋಣ ಮತ್ತು ನಮಗೆ ತಿಳಿದಿರುವ ಸತ್ಯವೇದದ ಬೇರೆ ಕಥೆಗಳನ್ನು ತರದೆ ಇರೋಣ. ಈ ಸಮಯಕ್ಕೆ ಕೇವಲ ಕಿವಿಗೊಡಿರಿ ಮತ್ತು ಕಲ್ಪಿಸಿಕೊಳ್ಳಿರಿ – ನೀವು ತಂದಿರುವ ಸತ್ಯವೇದವನ್ನು ನೋಡುವ ಅಗತ್ಯವಿರುವದಿಲ್ಲ, ಈಗ ಅದನ್ನು ಮುಚ್ಚಿಡಬಹುದು.*

**ಪರಿಚಯ:** *ಯೌವನಸ್ಥರಾಗಲಿ ಹಿರಿಯರಾಗಲಿ, ಯೇಸು ಎಲ್ಲಾ ವಿಧವಾದ ಜನರೊಂದಿಗೆ ಒಂದೇ ರೀತಿಯಲ್ಲಿ ಮಾತಾಡುವದನ್ನು ನಾವು ನೋಡುತ್ತೇವೆ. ತನ್ನನ್ನು ಜನರು ಬಹಳ ಹೆಚ್ಚಾಗಿ ಇಷ್ಟಪಟ್ಟವರು ಮತ್ತು ಇನ್ನು ಕೆಲವರು ಇಷ್ಟಪಡದೆ ಇರುವಂತ ಜನರನ್ನು ಸಂದಿಸುತ್ತಾನೆ. ತನ್ನನ್ನು ಹಿಂಬಾಲಿಸಲು ಯೇಸು ಕೆಲವು ಜನರನ್ನು ಆರಿಸಿಕೊಂಡನು. ಅವರನ್ನು ಶಿಷ್ಯರೆಂದು ಕರೆದರು. ಅವರು ಆತನಂತೆಯೇ ಜೀವಿತವನ್ನು ನಡೆಸಲು ಕಲಿತುಕೊಳ್ಳುತ್ತಿದ್ದರು. ಈ ಕಥೆಯನ್ನು ಕೇಳಿರಿ ಮತ್ತು ಯೇಸು ಹಾಗೂ ಶಿಷ್ಯರು ಒಂದು ನಿರ್ಧಿಷ್ಟವಾದ ಜನರ ಗುಂಪನ್ನು ಹೇಗೆ ನಡಿಸಿಕೊಂಡರೆಂದು ಕೇಳೋಣ. ಈ ಕಥೆಯು ಸತ್ಯವೇದದಿಂದ ಬರುತ್ತದೆ, ಆದುದರಿಂದ ಇದು ನಿಜವೆಂದು ನಾವು ತಿಳಿದಿದ್ದೇವೆ.* (ನೀವು ಕಥೆ ಹೇಳುವಾಗ ನಿಮ್ಮ ಸತ್ಯವೇದವನ್ನು ಮುಚ್ಚಿಟ್ಟು ಪಕ್ಕದಲ್ಲಿಡಬಹುದು).

**ಕಥೆಯನ್ನು ಹೇಳಿರಿ: ಮಾರ್ಕ 10:13–16**

*ಒಂದು ದಿವಸ ತಂದೆತಾಯಿಗಳು ತಮ್ಮ ಮಕ್ಕಳನ್ನು ಯೇಸುವಿನ ಬಳಿಗೆ ತಂದರು, ಇದರಿಂದ ಆತನು ಅವರನ್ನು ಮುಟ್ಟಿ ಆಶೀರ್ವದಿಸಬಹುದಾಗಿತ್ತು. ಆದರೆ ಆತನಿಗೆ ತೊಂದರೆ ಉಂಟುಮಾಡುತ್ತಿದ್ದಾರೆಂದು ಶಿಷ್ಯರು ತಂದೆತಾಯಿಗಳನ್ನು ಬೈದರು.*

*ಯೇಸು ಜರುಗಿದ ಸಂಗತಿಯನ್ನು ನೋಡಿದಾಗ, ಆತನು ತನ್ನ ಶಿಷ್ಯರೊಂದಿಗೆ ಕೋಪಗೊಂಡನು. "ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ. ಅವುಗಳಿಗೆ ಅಡ್ಡಿಮಾಡಬೇಡಿರಿ! ದೇವರ ರಾಜ್ಯವು ಇಂಥವರದೇ. ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ಶಿಶುಭಾವದಿಂದ ದೇವರ ರಾಜ್ಯವನ್ನು ಅಂಗೀಕರಿಸುವದಿಲ್ಲವೋ ಅವನು ಅದರಲ್ಲಿ ಸೇರುವದೇ ಇಲ್ಲ." ಅನಂತರ ಆತನು ಮಕ್ಕಳನ್ನು ತನ್ನ ಕೈಗಳಲ್ಲಿ ಸೇರಿಸಿಕೊಂಡು ತನ್ನ ಕೈಗಳನ್ನು ಅವರ ತಲೆಯ ಮೇಲಿಟ್ಟು ಆಶೀರ್ವದಿಸಿದನು.*

**ಪುನಃ ಹೇಳಿರಿ:** ಮಕ್ಕಳ ಕಥಾಫಲಕವನ್ನು ಉಪಯೋಗಿಸಿ ಅಥವಾ ಈ ಕಥೆಯನ್ನು ತಿರಿಗಿ ಹೇಳಲು ಒಂದು ಆಟವನ್ನು ಆಡಿರಿ.

**ಪ್ರಶ್ನೆಗಳನ್ನು ಕಂಡುಹಿಡಿಯಿರಿ:**

- ಈ ಕಥೆಯನ್ನು ಹೇಳುವಾಗ ನೀವು ಏನನ್ನು ಗಮನಿಸಿದಿರಿ? ಅದು ಯಾವ ಭಾವನೆಗಳನ್ನು ಉಂಟುಮಾಡಿತು?
- ಈ ಕಥೆಯಲ್ಲಿ ಯಾವುದನ್ನು ನೀವು ಇಷ್ಟಪಟ್ಟಿರಿ?
- ಈ ಕಥೆಯಲ್ಲಿ ನೀವು ಮಕ್ಕಳನ್ನು ನೋಡುವಿರಾ? ಅವರ ಮುಖಗಳಲ್ಲಿ ಯಾವ ಸಂಗತಿಗಳು ವ್ಯಕ್ತವಾಗುತ್ತಿದ್ದವು? ಅವರು ಶಿಷ್ಯರೊಂದಿಗೆ ಇರುವುದನ್ನು ಹೇಗೆ ಭಾವಿಸಿದರೆಂದು ನೀವು ಆಲೋಚಿಸುವಿರಿ? ಯೇಸುವಿನೊಂದಿಗೆ?
- ಯೇಸುವಿನ ಬಳಿಗೆ ತಮ್ಮ ಮಕ್ಕಳನ್ನು ತರುವುದರಿಂದ ತಂದೆತಾಯಿಗಳು ಆತನಿಂದ ಏನನ್ನು ಬಯಸಿದರೆಂದು ನಾನು ಆಶ್ಚರ್ಯಪಡುತ್ತೇನೆ?
- ತಂದೆತಾಯಿಗಳು ಯಾವ ಆಯ್ಕೆಗಳನ್ನು ಮಾಡಿದರು? ಶಿಷ್ಯರು? ಯೇಸು? ಮಕ್ಕಳು? ಅವರು ಬೇರೆ ಯಾವ ಆಯ್ಕೆಗಳನ್ನು ಮಾಡಬಹುದಾಗಿತ್ತು?
- ದೇವರು/ಯೇಸುವನ್ನು ಕುರಿತು ಈ ಕಥೆಯು ನಮಗೆ ಏನು ಹೇಳುತ್ತದೆ?
- ನಿಮ್ಮ ಸಮುದಾಯದಲ್ಲಿರುವ ಜನರು ಮಕ್ಕಳ ಕಡೆಗೆ ಶಿಷ್ಯರಂತೆ ಯಾವ ರೀತಿಗಳಲ್ಲಿ ವರ್ತಿಸುತ್ತಾರೆ? ಈ ರೀತಿಯಲ್ಲಿ ಸಭೆಯು ಹೇಗೆ ಅವರನ್ನು ನಡಿಸಿಕೊಳ್ಳುತ್ತಿದೆ?
- ಯೇಸುವಿನ ಬಳಿಗೆ ಮಕ್ಕಳು ಬರುವುದನ್ನು ನಮ್ಮ ಸಭೆಗಳು ಯಾವ ರೀತಿಗಳಲ್ಲಿ ತಡೆಯುತ್ತಿವೆ?
- ಯೇಸುವಿನ ಬಳಿಗೆ ಮಕ್ಕಳು ಬರುವುದನ್ನು ನಾನು ಹೇಗೆ ತಡೆಯುತ್ತಿದ್ದೇನೆ?

**ಪ್ರತ್ಯುತ್ತರದ ಪ್ರಶ್ನೆಗಳು:**

- ಮಕ್ಕಳ ಕಡೆಗೆ ದೇವರ ದೃಷ್ಟಿಕೋನವನ್ನು ಕುರಿತು ಈ ಕಥೆಯು ನಿಮಗೆ ಏನು ಹೇಳುತ್ತದೆ?
- ಇಂದು ನೀವು ನೋಡಿದ್ದನ್ನು ಮತ್ತು ಕೇಳಿದ್ದನ್ನು ಕುರಿತು ದೇವರು ನಿಮ್ಮನ್ನು ಏನು ಮಾಡಬೇಕೆಂದು ಕರೆಯುತ್ತಿದ್ದಾನೆ?
- ಈ ಕಥೆಯಿಂದ ನೀವು ಕಲಿತದ್ದನ್ನು ಮತ್ತು ನಮ್ಮ ಚರ್ಚೆಯಿಂದ ನೀವು ಏನು ಮಾಡಬೇಕೆಂದು ಪವಿತ್ರಾತ್ಮನು ಕೇಳುತ್ತಿದ್ದಾನೆಂದು ನೀವು ಅರ್ಥಮಾಡಿಕೊಂಡಿದ್ದೀರಿ?

# ಅಧಿವೇಶನ #2
# ಸತ್ಯವೇದ ಕಥೆ ಹೇಳುವುದು/ಕಥೆಯನ್ನು ಕಲಿಯುವುದು ಎಂದರೇನು?

**ಸತ್ಯವೇದ ಕಥನ ಹೇಗೆ ಪಾಠವನ್ನು ಕಲಿಸಿತು ಹಾಗೂ ಭಾನುವಾರ ಶಾಲೆಯ ತರಗತಿಯು ಹೇಗೆ ನಡೆಸಲಾಗುತ್ತದೆ ಎಂಬಿವುಗಳಲ್ಲಿ ಭಾಗವಹಿಸುವವರು ಕಂಡ ವ್ಯತ್ಯಾಸವನ್ನು ಹಂಚಿಕೊಳ್ಳುವುದರ ಮೂಲಕ ಅಧಿವೇಶನವನ್ನು ಆರಂಭಿಸಿರಿ.**

**ಸತ್ಯವೇದ ಕಥೆ ಹೇಳುವುದು ಏನಾಗಿದೆ?**

*ಸತ್ಯವೇದ ಕಥೆ ಹೇಳುವುದು ಕೇವಲ ಕಥೆ ಹೇಳುವುದಕ್ಕಿಂತ ಹೆಚ್ಚಾಗಿದೆ. ಇದು ಕಲಿಯುವ ವಾತಾವರಣವನ್ನು ಕಲ್ಪಿಸುತ್ತದೆ ಹೀಗೆ ಜನರ ಹೃದಯಗಳಲ್ಲಿ ಆತ್ಮನು ಕಾರ್ಯಮಾಡುವಂತೆ ನಡೆಸುತ್ತದೆ ಇದರಿಂದ ಅವರು ವೈಯಕ್ತಿಕವಾಗಿ ತಿಳಿದುಕೊಳ್ಳಬಹುದು, ಆತನನ್ನು ಹಿಂಬಾಲಿಸುವುದೆಂದರೆ ಏನೆಂದು ಅರ್ಥಮಾಡಿಕೊಳ್ಳಬಹುದು, ಆತನ ವಾಕ್ಯವನ್ನು ಕಲಿಯಬೇಕು ಇದರಿಂದ ಆತನ ಕಥೆಯನ್ನು ತಿರಿಗಿ ತಿರಿಗಿ ಹೇಳಬಹುದು. ಯೇಸು ಕ್ರಿಸ್ತನಿಗಾಗಿ ಮಕ್ಕಳನ್ನು ಸಂಧಿಸಿ ಶಿಷ್ಯರನ್ನಾಗಿ ಮಾಡಲು ಬಯಸುವ ನಿಮ್ಮಂತವರಿಗೆ ತರಬೇತಿಕೊಡುವುದು ಮಕ್ಕಳಕಥೆಯಾಗಿದೆ. (ಪರಸ್ಪರಕಾರ್ಯ ನಡೆಸುವ ಅನುಭವ ಮತ್ತು ಸಂಭಾಷಣೆಯಿಂದ ಕೂಡಿದ ಆತನ ಕಥೆಯನ್ನು ಹೇಳುವುದರ ಮೂಲಕ ದೇವರನ್ನು ಮತ್ತು ಆತನ ಮಾರ್ಗಗಳನ್ನು ತಿಳಿದುಕೊಳ್ಳುವದು).*

**ಸಾರ್ವತ್ರಿಕ**

*ಈ ಲೋಕದಲ್ಲಿ ನೀವು ಎಲ್ಲೇ ಹೋದರೂ ಸರಿ, ಪ್ರತಿಯೊಬ್ಬರಿಗೂ, ಎಲ್ಲೆಡೆ ನಿಜವಾಗಿರುವ ಕೆಲವು ಸಂಗತಿಗಳಿವೆ. ನೀವು ಯಾವುದೇ ಸಂಸ್ಕೃತಿಯಲ್ಲಿದ್ದರೂ, ವಯಸ್ಸಿನ ವ್ಯತ್ಯಾಸವಿಲ್ಲದೆ ಎಲ್ಲಾ ಜನರಿಗೂ ಸಾಮಾನ್ಯವಾಗಿರುವ ಕೆಲವು ಸಾರ್ವತ್ರಿಕ ಸಂಗತಿಗಳಿವೆ. ನಾವು ಮಕ್ಕಳಿಗೆ ದೇವರ ವಾಕ್ಯವನ್ನು ಕಲಿಸುವಾಗ ಈ ಸಂಗತಿಗಳು ಎಷ್ಟು ಪ್ರಾಮುಖ್ಯವೆಂದು ನೀವು ನೋಡುವಿರಿ. ಈ ಸಂಗತಿಗಳು ಇವುಗಳನ್ನು ಒಳಗೊಂಡಿವೆ:*

- **ಕುಟುಂಬ**
- **ಸಂಗೀತ**
- **ಕ್ರಿಡೆ/ಹಾಸ್ಯ**
- **ಕಲೆ (ಕಲಾಕೌಶಲ, ನಾಟಕ, ನೃತ್ಯ)**
- **ಕಥೆಗಳು**

*ನಮ್ಮ ಕಥೆಗೆ ದೇವರು ಸೌಂದರ್ಯವನ್ನು ತರಬೇಕೆಂದು ನಾವು ಬಯಸುತ್ತೇವೆ ಆದರೆ ದೇವರಿಲ್ಲದೆ ನಮ್ಮ ಕಥೆಯು ಬಹಳ ಚಿಕ್ಕದಾಗಿರುತ್ತದೆ. ನಮ್ಮ ಚಿಕ್ಕ ಕಥೆಯೊಳಗೆ ದೇವರು ಮುದುಡಿಕೊಳುವುದಕ್ಕೆ ಆತನನ್ನು ಬೇಡಿಕೊಳ್ಳುವುದು ದೇವರ ಸಮಯಕ್ಕೆ ಅಥವಾ ನಿಮಗೆ ಯೋಗ್ಯವಾದದ್ದಲ್ಲ. ಆದರೆ ನೀವು ದೇವರ ಕಥೆಗೆ ಹೆಜ್ಜೆ ಇಟ್ಟಾಗ – ನಿಮ್ಮ ಜೀವಿತಕ್ಕಾಗಿ ಆತನ ಕಥಾರೂಪದೊಳಗೆ ಹೆಜ್ಜೆಯಿಡಿರಿ – ನೀವು ಮಹತ್ವದ ಕಥೆಗೆ ಪ್ರವೇಶಿಸುವಿರಿ; ದೊಡ್ಡಘಟನೆಯಿಂದ ಯಾವಾಗಲೂ ಸುಂದರತೆಯು ಹೊರಬರುವ ಕಥೆಯಾಗಿದೆ. – ಎರ್‌ವಿನ್ ಮ್ಯಾಕ್‌ಮ್ಯಾನಸ್*

**ಪಾಠದ ಕ್ರಮವ್ಯವಸ್ಥೆ**

*ಒಂದು ಮಾದರಿಯ ಪಾಠವು ಹೇಗೆ ಕಾಣಿಸುತ್ತದೆ? ಯೇಸು ಮಕ್ಕಳನ್ನು ಆಶೀರ್ವದಿಸುವ ಕಥೆಯನ್ನು ನಾವು ಹೇಗೆ ಹೇಳಿದೆವೆಂದು ನೋಡೋಣ.*

- **ಆರಂಭ:** *ಒಬ್ಬರಿಗೊಬ್ಬರು ಪರಿಚಯದಲ್ಲಿ ತೊಡಗಿಸಿಕೊಂಡು ವೈಯಕ್ತಿಕ ಕಥೆಗಳನ್ನು ಹೇಳಿಕೊಳ್ಳಲು ಇದು ಜನರಿಗೆ ಆರಂಭದ ಸಮಯವಾಗಿದೆ. ಇದು ಒಂದು ಚಟುವಟಿಕೆ ಅಥವಾ ಒಂದು ಪ್ರಶ್ನೆಯಾಗಿರಬಹುದು ಕಥೆಗೆ ನೇರವಾಗಿ ಕಟ್ಟಲ್ಪಟ್ಟಿದೆ ಆದರೆ ಇದು ಜನರನ್ನು ಆ ಮಾರ್ಗಕ್ಕೆ ಬಗ್ಗಲು ಆರಂಭಿಸುತ್ತದೆ. ನೀವು ಮಗುವಾಗಿರುವಾಗ ಸ್ವಾಗತಿಸದೆ ಅಥವಾ ಪ್ರೀತಿಸದೆ ಇದ್ದಂತ ಸಮಯವನ್ನು ಕುರಿತು ನಿಮ್ಮ ಪಕ್ಕದ ವ್ಯಕ್ತಿಯೊಂದಿಗೆ ಹಂಚಿಕೊಳ್ಳಿರಿ. ಆಗ ಅಲ್ಲಿ ...*

- **ಪರಿಚಯ:** *ದೇವರ ಕಥೆಗಾಗಿ ಪ್ರತಿಯೊಬ್ಬರನ್ನು ಸಿದ್ಧಪಡಿಸುವುದು. ಕಥೆಗಾಗಿ ಜನರನ್ನು ಸಿದ್ಧಪಡಿಸಲು ನೀವು ಕಥೆಗೆ ಪೂರ್ವ ಹೇಳಿಕೆಯನ್ನು ಸಿದ್ಧಪಡಿಸಿಕೊಂಡಿದ್ದೀರಾ? ಕಥೆಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವುದಕ್ಕಾಗಿ ಅವರಿಗೆ ಹಿನ್ನಲೆಯ ಮಾಹಿತಿ ಉಂಟೋ ಅಥವಾ ಹಿಂದಿನ ಕಥೆಯಿಂದ ಇದಕ್ಕೆ ಪರಿವರ್ತನೆಯುಂಟೋ? ಈ ದಿನದ ಬೆಳಗ್ಗಿನ ಕಥೆಯಲ್ಲಿ ಶಿಷ್ಯರು ಯಾರಾಗಿದ್ದರೆಂದು ನಾನು ನಿಮಗೆ ಹೇಳಿದೆನು ಮತ್ತು ಯೇಸು ಹಾಗೂ ಶಿಷ್ಯರು ಒಂದು ನಿರ್ದಿಷ್ಟವಾದ ಜನರ ಗುಂಪನ್ನು ಹೇಗೆ ನಡಿಸಿಕೊಂಡರೆಂದು ನಿಮಗೆ ಕೇಳಿದೆನು. ಈಗ ... ಸಮಯವಾಗಿದೆ.*

  **ಒಂದು ವೇಳೆ ಗುಂಪಿಗೆ ಆರಂಭ ಮತ್ತು ಪರಿಚಯದ ನಡುವೆ ವ್ಯತ್ಯಾಸ ಮಾಡಲು ಕಷ್ಟಕರವಾಗಿದ್ದರೆ, ಪುಟ 10 ರಲ್ಲಿರುವ ಚಟುವಟಿಕೆಯನ್ನು ನೋಡಿರಿ. ಹೇಳಿಕೆಯನ್ನು ಓದಿದ ನಂತರ, ಅದು ಯಾವದೆಂದು ಅವರು ಹೇಳಬೇಕು.**

- **ಕಥೆಯನ್ನು ಹೇಳಿರಿ:** *ಕಥೆಯು ಸತ್ಯವೇದದಿಂದ ಬರುತ್ತದೆ ಎಂದು ಜನರು ತಿಳಿದುಕೊಳ್ಳುವಂತೆ ಮಾಡುವುದು ಪ್ರಾಮುಖ್ಯವಾಗಿದೆ ಮತ್ತು ಇದು ಸತ್ಯವಾಗಿದೆ. ಈ ಸಮಯದಲ್ಲಿ ಜನರು ತಮ್ಮ ಸತ್ಯವೇದಗಳನ್ನು ಮುಚ್ಚಿಡಬೇಕು ಮತ್ತು ಕಥೆಯನ್ನು ಮತ್ತು ಕಥೆಗಾರನನ್ನು ಕೇಂದ್ರೀಕರಿಸಬೇಕು. ಅನಂತರ ನಾವು ಕಥೆಯನ್ನು ತಿರಿಗಿ ಹೇಳಬೇಕು.*

- **ಪುನಃ ಹೇಳಿರಿ:** *ಯಾವುದಾದರು ಸ್ಪಷ್ಟಪಡಿಸುವಿಕೆಗೆ ಮತ್ತು ಸತ್ಯವೇದಾನುಸಾರದ ನಿಷ್ಕೃಷ್ಟತೆಗೆ ಜನರು ಈಗ ಕಥೆಯನ್ನು ಪುನಃ ಹೇಳುವುದು ಪ್ರಾಮುಖ್ಯವಾಗಿದೆ. ಒಂದು ರೀತಿಯಲ್ಲಿ ಭಾಗವಹಿಸುವವರು ತಮ್ಮ ಸತ್ಯವೇದಗಳನ್ನು ತೆರೆದು ವಾಕ್ಯಗಳಿಂದ ಕಥೆಯನ್ನು ತಿರಿಗಿ ಓದುವಂತೆ ಮಾಡಿರಿ. ಯಾರಾದರೊಬ್ಬರು ಕಥೆಯನ್ನು ಓದಬಹುದು ಅಥವಾ ನಾಯಕನು ಒಂದೊಂದಾಗಿ ಪ್ರಶ್ನೆಗಳನ್ನು ಕೇಳಬಹುದು ನಂತರ ವಾಕ್ಯವನ್ನು ನೋಡುವುದರ ಮೂಲಕ ಪ್ರತಿಯೊಬ್ಬರು ಉತ್ತರಿಸುವರು. ಭಾಗವಹಿಸುವವರು ವ್ಯಕ್ತಿಗತವಾಗಿ ಅಥವಾ ಗುಂಪಾಗಿ ತೊಡಗಿಸಿಕೊಳ್ಳಲು ನೀವು ಬೇರೆ ಚಟುವಟಿಕೆಗಳನ್ನು ಸಹ ಉಪಯೋಗಿಸಬಹುದು. ಯೇಸು ಮಕ್ಕಳನ್ನು ಆಶೀರ್ವದಿಸುವ ಕಥೆಯಲ್ಲಿ, ನಾವು ಉಣ್ಣೆ ಬಟ್ಟೆಯ ಕಥಾಫಲಕದಿಂದ ಕಥೆಯನ್ನು ಪುನಃ ಹೇಳಿದೆವು. ನೀವು ಒಂದು ಆಟ, ಹಾಡು ಅಥವಾ ಕಲೆಯ ಚಟುವಟಿಕೆಯಿಂದ ಇದನ್ನು ಮಾಡಬಹುದು. ನಾವು ಒಟ್ಟಾಗಿರುವ ಸಮಯದಾದ್ಯಂತ ನೀವು ಇವುಗಳಲ್ಲಿ ಕೆಲವನ್ನು ಅನುಭವಿಸುವಿರಿ.*

- **ಪ್ರಶ್ನೆಗಳನ್ನು ಕಂಡುಹಿಡಿಯಿರಿ ಮತ್ತು ಪ್ರತ್ಯುತ್ತರ ಕೊಡಿರಿ:** *ಕಲಿಯುವ ಕಾರ್ಯವಿಧಾನದಲ್ಲಿ ಪ್ರಶ್ನೆಗಳನ್ನು ಕೇಳುವುದು ಮತ್ತು ಕಥೆಯನ್ನು ಕುರಿತು ಮಾತನಾಡಲು ಶಕ್ತರಾಗುವುದು ಪ್ರಾಮುಖ್ಯವಾಗಿದೆ! ನಾವು ಕಥೆಯನ್ನು ಕುರಿತು ಭಾವನೆಗಳನ್ನು ಮತ್ತು ಹೃದಯದ ಮಟ್ಟವನ್ನು ಮಾತನಾಡದೆ ಸತ್ಯಸಂಗತಿಗಳನ್ನು ಬೋಧಿಸಲು ರೂಢಿಯಾಗಿದ್ದೇವೆ. ದೇವರು ನಿಮ್ಮ ಹೃದಯ ಮತ್ತು ಜೀವಿತದಲ್ಲಿ ಏನು ಮಾಡುತ್ತಿದ್ದಾನೆ ಎಂಬ ಕೆಲವು ಸಂಗತಿಗಳನ್ನು ನೆನಪಿಸಿಕೊಳ್ಳುವಂತೆ ಒಬ್ಬ ನಾಯಕನು ಗುಂಪನ್ನು ನಡೆಸಬೇಕು. ಇದಕ್ಕೆ ಪ್ರತ್ಯುತ್ತರವಾಗಿ, ಒಂದು ಅಥವಾ ಎರಡು ಪ್ರಶ್ನೆಯಿಂದ ನೀವು ನಿಮ್ಮ ಗುಂಪಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಮಾತನಾಡುವಂತೆ ನೀವು ಪವಿತ್ರಾತ್ಮನಿಗಾಗಿ ಪ್ರಾರ್ಥಿಸುತ್ತಿದ್ದೀರಿ. ಪಾಠವು ನಡೆಸುತ್ತಿರುವ ಕಡೆಗೆ ಹೆಚ್ಚಿನಷ್ಟು ಪಾಠ್ಯಕ್ರಮವು ಒಂದು ಅರ್ಜಿಯನ್ನು ಹೊಂದಿರುತ್ತದೆ. ಇದು ಕಥೆ ಹೇಳುವುದರಿಂದ ವ್ಯತ್ಯಾಸವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ಆಗಬೇಕಾದ ಅನ್ವಯಕ್ಕಾಗಿ ಅವರೊಂದಿಗೆ ಪವಿತ್ರಾತ್ಮನು ಮಾತನಾಡಬೇಕೆಂದು ನಾವು ಬಯಸುತ್ತೇವೆ. ನಿಮ್ಮ ಗುಂಪಿನ ಸದಸ್ಯರಿಂದ ವಿವಿಧ ಪ್ರತಿಕ್ರಿಯೆಗಳನ್ನು ಹೊಂದಿಕೊಳ್ಳುವುದು ಅಸಾಮಾನ್ಯವಾಗಿರುವದಿಲ್ಲ. ಇದು ಒಳ್ಳೆಯದು! ದೇವರು ಹೇಳಿದಕ್ಕೆ ತಮ್ಮ ವಿಧೇಯತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಹೇಗೆ ನಡೆದುಕೊಳ್ಳುತ್ತಿದ್ದಾರೆಂದು ನೋಡಲು ಮುಂಬರುವ ವಾರಗಳಲ್ಲಿ ಬಿಡದೆ ಅನುಸರಿಸಬೇಕು.*

## ಆರಂಭದ ಮತ್ತು ಪರಿಚಯದ ಹೇಳಿಕೆಗಳು

ಈ ಕೆಳಗೆ ಇರುವ ಹೇಳಿಕೆಗಳನ್ನು ಒಂದೊಂದಾಗಿ ಓದಿರಿ ಮತ್ತು ಭಾಗವಹಿಸುವವರು ಈ ಹೇಳಿಕೆಗಳು ಆರಂಭದವೋ ಅಥವಾ ಪರಿಚಯದವೋ ಎಂದು ಹೇಳಲಿ.

| ಆರಂಭ | ಪರಿಚಯ |
|---|---|
| • ನೀವು ಎಂದಾದರೂ ಕಳೆದು ಹೋಗಿದ್ದೀರಾ? | • ಯೆಹೂದ್ಯರು ಜನರು ಸಮಾರ್ಯದವರನ್ನು ಇಷ್ಟಪಡುತ್ತಿರಲಿಲ್ಲ. |
| • ನಿಮಗೆ ಸಹಾಯ ಮಾಡಲು ನೀವು ಬೇರೆ ಯಾರದಾರಲ್ಲಿ ಭರವಸೆಯಿಟ್ಟ ಸಮಯ ಯಾವುದಾಗಿತ್ತು? | • ಯೇಸು ಪಾಠವನ್ನು ಬೋಧಿಸಲು ಹೇಳುತ್ತಿದ್ದ ಕಥೆಯು ಸಾಮ್ಯವಾಗಿದೆ. |
| • ನೀವು ಅದನ್ನು ಕಳೆದುಕೊಂಡಿರುವುದಾದರೆ ನಿಮ್ಮನ್ನು ನಿಜವಾಗಿ ದುಃಖಪಡಿಸುವ ಸಂಗತಿ ಯಾವುದು? | • ಕುಷ್ಠವು ಇಂದು ಗುಣಪಡಿಸಬಹುದಾದ ಕಾಯಿಲೆಯಾಗಿದೆ. ಆದರೆ ಯೇಸು ಇಲ್ಲಿದ್ದಾಗ, ಕುಷ್ಟವು ಇದ್ದವರಿಂದ ತಮಗೆ ಬರುತ್ತದೆ ಎಂದು ಜನರು ಭಯಪಟ್ಟಿದ್ದರು. ಒಂದು ವೇಳೆ ನಿಮಗೆ ಅದು ಇದ್ದಿದ್ದರೆ, ನೀವು ಬೇರೆಯವರಿಂದ ದೂರ ವಾಸಿಸಬೇಕಾಗುತ್ತದೆ. |
| • ನೀವು ನಿಜವಾಗಿ ಭಯಪಟ್ಟ ಸಮಯ ಯಾವುದಾಗಿತ್ತು? | • ಕಥೆಗಿಂತ ಮುಂಚೆ ಯೇಸು 5000 ಜನರಿಗೆ ಪೋಷಿಸುವುದನ್ನು ನೋಡುತ್ತೇವೆ. |
| • ನೀವು ಪ್ರಪಂಚದಲ್ಲಿ ಎಲ್ಲಾದರು ಹೋಗುವುದಾದರೆ, ಎಲ್ಲಿಗೆ ಹೋಗುವಿರಿ? | |

**ವ್ಯತ್ಯಾಸವೇನಾಗಿದೆ:**

*ಸತ್ಯವೇದ ಕಥೆಯು ಸತ್ಯವೇದದಿಂದ ಆರಂಭವಾಗುತ್ತದೆ ಮತ್ತು ಪವಿತ್ರಾತ್ಮನು ಬೋಧಕನಾಗಿರಲು ಅನುಮತಿಸುತ್ತದೆ. ನಾಯಕನ ಪಾತ್ರವು ಅನುಕೂಲ ಮಾಡಿಕೊಡುವದು ಆದರೆ ಸತ್ಯವೇದ ಬೋಧಕನಲ್ಲ. ಇದರ ಅರ್ಥವೇನು? ನಾವು...*

- **ಅನ್ವೇಷಣೆ ಮತ್ತು ಅನುಭವ ಹಾಗೂ ವಿವರಿಸುವುದು:** *ಭಾಗವಹಿಸುವವರು ಸತ್ಯವೇದ ಮತ್ತು ಕಥೆಯನ್ನು ಅರ್ಥಮಾಡಿಕೊಳ್ಳಲು ನಾಯಕರು ಸಹಾಯಮಾಡುವರು ಆದರೆ ವಾಕ್ಯಭಾಗವು ಏನು ಹೇಳುತ್ತದೆ ಎಂದು ವಿವರಿಸುವದಿಲ್ಲ ಅಥವಾ ಬೋಧಿಸುವದಿಲ್ಲ.*
- **ಅನುಕೂಲ ಮಾಡುವುದು ಮತ್ತು ಬೋಧಿಸುವದು:** *ಚಿಕ್ಕ ಗುಂಪಿನ ನಾಯಕರಾಗಿರುವವರಿಗೆ ಇದು ಕಷ್ಟಕರವಾಗಿರಬಹುದು. ಸಂಭಾಷಣೆ ನಡೆಯಲು ಮತ್ತು ಪ್ರಶ್ನೆಗಳನ್ನು ಉತ್ತರಿಸಲು ಎಲ್ಲವನ್ನು ಕಥೆಗೆ ತಿರಿಗಿ ತರಲಾಗುತ್ತದೆ.*
- **ಕಿವಿಗೊಡಿ ಮತ್ತು ಮಾತನಾಡಿ:** *ನಾಯಕನಾಗಿ ನೀವು ಪವಿತ್ರಾತ್ಮನಿಗೆ ಮತ್ತು ಭಾಗವಹಿಸುವವರಿಗೆ ಕಿವಿಗೊಡುವ ಸ್ಥಾನದಲ್ಲಿರಬೇಕು ಮತ್ತು ಉತ್ತರಕೊಡಲು ಆತುರಪಡಬಾರದು.*
- **ಕಥೆ ಮತ್ತು ಪ್ರಸಂಗ:** *ಕಥೆಗಳು ಪರಸ್ಪರ ವಿಮರ್ಶಿಸುವಂತವು ಆದರೆ ಪ್ರಸಂಗವು ಒಂದು–ಕಡೆಯ ಸಂಭಾಷಣೆಯಾಗಿದೆ.*

**ಸತ್ಯವೇದ ಕಥೆಯನ್ನು ಯಾಕೆ ಹೇಳುತ್ತಾರೆ?**

*ಹಾಗಾದರೆ ಮಕ್ಕಳಿಗೆ ಬೋಧಿಸಲು ನಾವು ಸತ್ಯವೇದ ಕಥೆಯನ್ನು ಯಾಕೆ ಉಪಯೋಗಿಸುತ್ತೇವೆ?*

- ಪ್ರಪಂಚಲ್ಲಿ 2/3 ರಷ್ಟ ಜನರು ಓದುವದಿಲ್ಲ. ಅವರು ಕಥೆಗಳ ಮೂಲಕ ಕಲಿಯುತ್ತಾರೆ.
- ಯೇಸು ಯಾವಾಗಲೂ ಕಥೆಗಳು/ಸಾಮ್ಯಗಳಿಂದ ಕಲಿಸಿದನು (ಮತ್ತಾಯ 13:34).
- ಸತ್ಯವೇದದ 75% ರಷ್ಟು ಭಾಗವು ಕಥೆಗಳ ರೂಪದಲ್ಲಿ ಬರೆಯಲ್ಪಟ್ಟಿದೆ.
- ನಮ್ಮ ಮಾತುಗಳಿಗಿಂತ ದೇವರ ವಾಕ್ಯವು ಶಕ್ತಿಯುತವಾಗಿದೆ.
- ದೇವರ ವಾಕ್ಯವು ಪವಿತ್ರಾತ್ಮನ ಮೂಖಾಂತರ ಜನರ ಜೀವಿತಗಳನ್ನು ಬದಲಾಯಿಸುತ್ತದೆ.
- ಸಾರ್ವತ್ರಿಕವಾಗಿ, ಜನರು ಕಥೆಗಳನ್ನು ಇಷ್ಟಪಡುತ್ತಾರೆ. ನೀವು ಇದನ್ನು ಯಾರೊಂದಿಗಾದರೂ ಎಲ್ಲಿಬೇಕಾದರೂ ಉಪಯೋಗಿಸಬಹುದು.
- ಜನರು ದೇವರ ವಾಕ್ಯವನ್ನು ತಿಳಿದುಕೊಳ್ಳುತ್ತಾರೆ ಮತ್ತು ಆತನಿಗೆ ಹೆಚ್ಚು ನಿಕಟವಾಗುತ್ತಾರೆ.
- ಮಕ್ಕಳು ಆತನನ್ನು ತಿಳಿಯದೆ ಇರುವ ಬೇರೆಯವರಿಗೆ ದೇವರ ಕಥೆಯನ್ನು ತಿರಿಗಿ ಹೇಳಬಹುದು.

**ಯೇಸು ಮತ್ತು ಪೇತ್ರನು ನೀರಿನ ಮೇಲೆ ನಡೆಯುವ ಕಥೆ (ಮತ್ತಾಯ 14:22–33).**

*ಪಾಠವನ್ನು ಒಟ್ಟಾಗಿ ಸಿದ್ಧಪಡಿಸಲು ಆರಂಭಿಸೋಣ:* **ಭಾಗವಹಿಸುವವರನ್ನು 3–4 ಜನರ ಗುಂಪಾಗಿ ಮಾಡಿರಿ. ಈ ಗುಂಪುಗಳಲ್ಲಿ, ಮತ್ತಾಯ 14:22–33 ರಿಂದ ಯೇಸು ಮತ್ತು ಪೇತ್ರನು ನೀರಿನ ಮೇಲೆ ನಡೆಯುವ ಕಥೆಯನ್ನು ಅವರು ಓದುವಂತೆ ನಡೆಸಿರಿ. ಅವರು ಗುಂಪಿನೊಳಗೆ ಹೋಗುವದಕ್ಕೆ ಮುಂಚಿತವಾಗಿ ನೀವು ಅವರಿಗೆ ಕಥೆಯನ್ನು ಹೇಳಬಹುದು.**

**ಅದನ್ನು ಓದಿದ ನಂತರ, ಅವರು ಆರಂಭ ಮತ್ತು ಪರಿಚಯದಿಂದ ಮುಂಬರಲು ಹೇಳಿರಿ.**

# ಕಥೆಯನ್ನು ಕಲಿಯುವದು

*ಈಗ ಕಥೆಯನ್ನು ಕಲಿಯುವ ಸಮಯ. ನೆನಪಿಡಿ, ಇದು ಕಥೆಯನ್ನು ಹೇಳುವದಷ್ಟೆ, ಸಂಗತಿಗಳನ್ನು ನೆನಪಿಡುವದಲ್ಲ. ನೀವು ಮನೆಗೆ ಹಿಂದಿರುಗಿ ಹೋದಾಗ, ಇಲ್ಲಿನ ನಿಮ್ಮ ಅನುಭವವನ್ನು ಅವರಿಗೆ ತಿಳಿಸಿರಿ. ನೀವು ಹೇಳಬೇಕಾದದ್ದನ್ನೆಲ್ಲಾ ಆಲೋಚಿಸಿ ಹಾಗೂ ಬಾಯಿಪಾಠ ಮಾಡುತ್ತಿದ್ದೀರೋ?! ಇಲ್ಲ! ನೀವು ಜನರನ್ನು ಮತ್ತು ನಿಮ್ಮ ಮೇಲೆ ಪರಿಣಾಮ ಬೀರಿದ ಘಟನೆಗಳನ್ನು ನೆನಪಿಸಿಕೊಳ್ಳುತಿದ್ದೀರಿ. ದೇವರ ಕಥೆಯೊಂದಿಗೆ ಇದು ಯಾಕೆ ವ್ಯತ್ಯಾಸವಾಗಿರುತ್ತದೆ? ನಾವು ಆತನ ಕಥೆಗಳನ್ನು ಸಂತೋಷದಿಂದ ಮತ್ತು ತೋರ್ಪಡಿಸುವಿಕೆಯಿಂದ ಹೀಗೆ ನಾವು ನಮ್ಮ ಜನರೊಂದಿಗೆ ಪುನರುಜ್ಜೀವಗೊಳಿಸುತ್ತೇವೆ. ಮಕ್ಕಳು ಕೇವಲ ಕಥೆಯನ್ನು ತಿಳಿದುಕೊಳ್ಳುವದು, ದೇವರು ಯಾರಾಗಿದ್ದಾನೆ ಮತ್ತು ಆತನು ಹೇಗೆ ಕಾರ್ಯಮಾಡುತ್ತಾನೆ ಎಂದು ನೋಡುವುದು ಮಾತ್ರವಲ್ಲದೆ, ಆದರೆ ಕಥೆಯನ್ನು ಅವರು ಬೇರೆಯವರಿಗೆ ಕಥೆಯನ್ನು ತಿರಿಗಿ ಹೇಳಬೇಕೆಂದು ನಾವು ಬಯಸುತ್ತೇವೆ!*

*ಮೊದಲು ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕು...*

### ನಿಮ್ಮ ಹೃದಯವನ್ನು ಸಿದ್ಧಪಡಿಸಿಕೊಳ್ಳಿರಿ

*ನಿಮ್ಮ ಹೃದಯವು ಪವಿತ್ರಾತ್ಮನಿಗೆ ಕಿವಿಗೊಡುವ ಮತ್ತು ಪ್ರತಿಕ್ರಿಯಿಸುವ ಸ್ಥಾನದಲ್ಲಿ ಇದೆಯೋ? ಇಲ್ಲವಾದರೆ, ಹೀಗಿರಲು ಏನು ಮಾಡಬೇಕು?*

- **ಪ್ರಾರ್ಥನೆ:** *ನೀವು ಆತನೊಂದಿಗೆ ಮಾತನಾಡುವಂತೆ ಆತನು ನಿಮ್ಮೊಂದಿಗೆ ಮಾತನಾಡಲು ನೀವು ಅನುಮತಿಸುತ್ತಿದ್ದೀರಾ?*
- **ಕಥೆಯನ್ನು ಓದಿರಿ:** *ನೀವು ಕಥೆಯನ್ನು ಅನೇಕ ಸಾರಿ ಓದಬೇಕು ಮತ್ತು ಸಾಧ್ಯವಾದರೆ ವಿವಿಧ ಭಾಷಾಂತರಗಳಿಂದ ಓದಬೇಕು. ದೇವರು ನಿಮಗೆ ಏನನ್ನು ಪ್ರಕಟಿಸುತ್ತಿದ್ದಾನೆ? ನೀವು ಕಥೆಯಲ್ಲಿ ಯಾರೊಂದಿಗೆ ಸಂಬಂಧಕಲ್ಪಿಸುತ್ತಿದ್ದೀರಿ? ನೆನಪಿಡಿ, ಆತನು ನಿಮ್ಮ ಹೃದಯವನ್ನು ಸಿದ್ಧಪಡಿಸುತ್ತಿರುವಾಗ ಪವಿತ್ರಾತ್ಮನು ನಿಮಗೆ ಇದನ್ನೇ ತೋರಿಸುತ್ತಿದ್ದಾನೆ. ನೀವು ಕಥೆ ಹೇಳಲಿಕ್ಕಿರುವ ಗುಂಪಿನ ಜನರಿಗೆ ಆತ್ಮನು ಬಹಳ ವ್ಯತ್ಯಾಸವಾಗಿ ಮಾತನಾಡಬಹುದು.*
- **ದೃಷ್ಟಿಕೋನಗಳು:** *ಕಲಿಸಬೇಕಾದ ವಾಕ್ಯಗಳನ್ನು ಕುರಿತು ಆಲೋಚಿಸಿರಿ. ನಿಮಗೆ ಆತ್ಮನು ಏನನ್ನು ಪ್ರಕಟಿಸುತ್ತಿದ್ದಾನೆ? ಭಾಗವಹಿಸುವವರು ಏನನ್ನು ಕೇಳಬೇಕು ಮತ್ತು ಕಲಿಯಬೇಕಾಗಿದೆ? ಅಲ್ಲಿರುವಂತೆ ಕಲ್ಪಿಸಿಕೊಳ್ಳಿರಿ – ನೀವು ಏನನ್ನು ನೋಡುತ್ತೀರಿ, ಕೇಳುತ್ತೀರಿ, ಯಾವ ವಾಸನೆ ಬರುತ್ತಿದೆ, – ಅದು ಹೇಗೆ ಅನಿಸುತ್ತದೆ? ವಿವಿಧ ವ್ಯಕ್ತಿಗಳು ಯಾರಾಗಿದ್ದಾರೆ ಮತ್ತು ಪರಿಸ್ಥಿತಿಯನ್ನು ಕುರಿತು ಅವರ ದೃಷ್ಟಿಕೋನ ಏನಾಗಿದೆ? ದೇವರ ದೃಷ್ಟಿಕೋನ ಏನಾಗಿದೆ? ಈ ರೀತಿಯ ಪ್ರಶ್ನೆಗಳನ್ನು ಉತ್ತರಿಸಿ: ಯಾರು? ಏನು? ಯಾವಾಗ? ಎಲ್ಲಿ? ಯಾಕೆ? ಹೇಗೆ? ದೈಹೀವಾಗಿ ನಿಮ್ಮನ್ನು ಅಲ್ಲಿ ಹಾಕಿಕೊಳ್ಳಿರಿ ಮತ್ತು ಕಥೆಯನ್ನು 3ನೇ ವ್ಯಕ್ತಿಯ ಕಥಾ ನಿರೂಪಣೆಯಲ್ಲಿ ಹೇಳಿರಿ.*

**ಕಥೆಯನ್ನು ವಿಭಾಗಿಸಿರಿ**

*ನಿಮಗೆ ಕಥೆಯನ್ನು ನೆನಪಿಸಿಕೊಳ್ಳಲು ಸಹಾಯಮಾಡುವ ಕೆಲವು ರೀತಿಗಳು ಯಾವುವು? ಅದನ್ನು 4 ಅಥವಾ ಹೆಚ್ಚೆಂದರೆ 5 "ಅಧ್ಯಾಯಗಳು" ಅಥವಾ ದೃಶ್ಯಗಳಾಗಿ ವಿಭಾಗಿಸುವುದು ಉತ್ತಮವಾಗಿರುತ್ತದೆ. ನೀವು ಪ್ರತಿಯೊಂದು ದೃಶ್ಯ ಅಥವಾ ಸಂದರ್ಭವನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವಾಗ, ನೀವು ಕಥೆಯ ವಿವರವನ್ನು ತುಂಬಿಸಬಹುದು.*


*ಸತ್ಯವೇದದಲ್ಲಿ ಇರುವಂತೆಯೇ ಕಥೆಯನ್ನು ಹೇಳುವುದು ಬಹುಪ್ರಾಮುಖ್ಯವಾಗಿದೆ. ಇದು ಸತ್ಯವೇದಾನುಸಾರ ನಿಷ್ಕೃಷ್ಟವಾಗಿರಬೇಕು. ಅಂದರೆ ನಾವು ಕಥೆಗೆ ನಮ್ಮ ಸ್ವಂತ ಪದಗಳನ್ನು ಅಥವಾ ಅರ್ಥಗಳನ್ನು ಸೇರಿಸುವದಿಲ್ಲ! ಅದನ್ನು ನೆನಪಿಸಿಕೊಳ್ಳಬಹುದಾಗಿ ಮಾಡಿರಿ ಇದರಿಂದ ಕೇಳುಗರು ಕಥೆಯಲ್ಲಿ ತೊಡಗಿಸಿಕೊಳ್ಳುವರು, ಆದರೆ ನಮ್ಮ ಸ್ವಂತದಲ್ಲದೆ ಇನ್ನೂ ದೇವರ ವಾಕ್ಯಗಳನ್ನೇ ಸತ್ಯವಾಗಿ ಇಟ್ಟುಕೊಳ್ಳುವುದಾಗಿದೆ. ಅಂತಿಮವಾಗಿ, ಪ್ರತಿಯೊಬ್ಬರು ಇದನ್ನು ಸಾಕಷ್ಟು ಚೆನ್ನಾಗಿ ಕಲಿಯಬೇಕೆಂದು ನಾವು ಬಯಸುತ್ತೇವೆ ಇದರಿಂದ ಅವರು ಬೇರೆಯವರಿಗೆ ಇದನ್ನು ತಿರಿಗಿ ಹೇಳಬಹುದು.*

*ನೀವು ಕಥೆಯನ್ನು ಕಲಿಯಲು ಇಲ್ಲಿ ಕೆಲವು ರೀತಿಗಳು ಕೊಡಲ್ಪಟ್ಟಿವೆ. ಕಥೆಯನ್ನು ಕಲಿಯಲು ಸರಿಯಾದ ಅಥವಾ ತಪ್ಪಾದ ರೀತಿಗಳಿಲ್ಲ. ನಿಮಗೆ ಉತ್ತಮವಾಗಿ ಕೆಲಸಮಾಡುವ ರೀತಿಗಳನ್ನು ನೀವು ಕಂಡುಕೊಳ್ಳಬೇಕು.*

- **ಓದಿರಿ ಮತ್ತು ಹೇಳಿರಿ:** ಕಥೆಯನ್ನು ಓದಿರಿ, ನಿಮ್ಮ ಸತ್ಯವೇದವನ್ನು ಮುಚ್ಚಿಟ್ಟು ಕಥೆಯನ್ನು ಜೋರಾಗಿ ಹೇಳಿರಿ. ನೀವು ಎಷ್ಟು ನಿಖರವಾಗಿದ್ದೀರೆಂದು ನೋಡಲು ಕಥೆಯನ್ನು ಓದಿರಿ. ಇದನ್ನು ಅನೇಕ ಸಾರಿ ಮಾಡಿರಿ.
- **ಘಟನೆಗಳನ್ನು ಪಟ್ಟಿಮಾಡಿರಿ**
- **ಮೈನ್ಡ್ ಮ್ಯಾಪ್ಸ್** (ಪುಟ 14)
- **ಕಥಾ ಚಿತ್ರಕಲೆ** (ಪುಟ 15)
- **ಕೋಣೆಯ ಸ್ಥಳಗಳು:** ಸತ್ಯವೇದದ ವ್ಯಕ್ತಿಗಳನ್ನು ಅಥವಾ ವಿವಿಧ ದೃಶ್ಯಗಳನ್ನು ಪ್ರದರ್ಶಿಸಲು ಕೋಣೆಯ ಸುತ್ತಲು ಸಾಗುವದು. ಇದನ್ನು ಹೇಳುವಾಗ ದೈಹೀಕವಾಗಿ ನಿಮ್ಮನ್ನು ದೃಶ್ಯದಲ್ಲಿ ತೊಡಗಿಸಿಕೊಳ್ಳಿರಿ.
- **ಕೈ ಸನ್ನೆಗಳು:** ಉದಾ: ಸೃಷ್ಟಿಯು ನಿಮ್ಮ ಕೈಗಳಿಂದ ಚೆಂಡು ಆಕಾರದ ಲೋಕವನ್ನು ಮಾಡುವದು.
- **ಮುಖ್ಯ ಪದಗಳು:** ಪ್ರತಿಯೊಂದು ಭಾಗ ಅಥವಾ ದೃಶ್ಯ
- **ದೃಶ್ಯದಲ್ಲಿ:** ಯುಟ್ಯೂಬ್ ವಿಡಿಯೋಗಳು, ಉಣ್ಣೆ ಬಟ್ಟೆಯ ಕಥಾಫಲಕ, ಮಕ್ಕಳ ಕಥೆ ಪುಸ್ತಕಗಳು, ಪತ್ರಿಕೆಗಳು.

ಇದು ಕೇವಲ ಕಥೆಗಳ ಮಾತುಗಳಲ್ಲಿ ಅಲ್ಲದೆ, ಆದರೆ ಅದಕ್ಕೆ ಬದಲಾಗಿ ನಮ್ಮ ಮನಸ್ಸಿನಲ್ಲಿರುವ ಚಿತ್ರಗಳಿಂದ ಕಥೆಯನ್ನು ಹೇಳಿರಿ. ಇದು ಕಾರ್ಯಮಾಡುತ್ತದೆ!

ತರಬೇತುಗಾರರಾಗಿ ನೀವು ಕಥೆಯನ್ನು ನೆನಪಿನಲ್ಲಿಡಲು ನಿಮಗೆ ಉತ್ತಮವಾಗಿ ಕಾರ್ಯಮಾಡುವದನ್ನು ನೀವು ಆರಿಸಿಕೊಳ್ಳುವಿರಿ. ನೀವು ತರಬೇತಿ ಕೊಡುವವರಿಗೆ ಉತ್ತಮವಾಗಿ ಕಾರ್ಯಮಾಡುವ ಸಾಧನಗಳನ್ನು ಉಪಯೋಗಿಸಲು ಸಹಾಯಮಾಡುವುದು ಮತ್ತು ಅವರು ನಡೆಸುವುದನ್ನು ಉತ್ತೇಜಿಸುವುದು ಪ್ರಾಮುಖ್ಯವಾಗಿದೆ. ನೀವು ಕಥೆಯನ್ನು ಹೇಳುವುದಕ್ಕಾಗಿ ಉಪಯೋಗಿಸುವ ಸಾಧನಗಳನ್ನು ನೋಡುವುದು, ಕೆಲವು ನಿಮಗೆ ಬಹಳ ಅನುಕೂಲಕರ ಮತ್ತು ಸುಲಭವಾಗಿರುತ್ತವೆ ಎಂದು ತಿಳಿದುಕೊಳ್ಳುವುದು ಸಹ ಪ್ರಾಮುಖ್ಯವಾಗಿದೆ. ಭಾಗವಹಿಸುವವರಿಗೆ ಯಾವುದು ಉತ್ತಮವೆಂದು ಕಂಡುಹಿಡಿಯಲು ಅವರಿಗೆ ಅನುಮತಿಸಿರಿ. ಮಕ್ಕಳು ಕಥೆಯನ್ನು ತಿರಿಗಿ ಹೇಳುವಂತೆ ನೀವು ಹೇಗೆ ನಡೆಸುವಿರಿ ಎಂಬುದಕ್ಕೂ ಸಹ ಇದು ನಿಜವಾಗಿದೆ. ವಿವಿಧ ಕಲಿಯುವ ಶೈಲಿಗಳಿಂದ ಮಕ್ಕಳಿಗೆ ಆಕರ್ಷಣೆಯಾಗಿರಲು ವಿವಿಧ ವಿಧಾನಗಳನ್ನು ಉಪಯೋಗಿಸಲು ನೆನಪಿಡಿರಿ.


ಕಥೆ

# ಕಥೆಯ ಚಿತ್ರ

ಸತ್ಯವೇದ ಕಥೆ ________________________________

ಸತ್ಯವೇದ ಉಲ್ಲೇಖ ____________________________

| | | |
|---|---|---|
| | | |
| | | |
| | | |

**ಕಥೆಯನ್ನು ನಿಪುಣತೆಯಿಂದ ರಚಿಸುವುದು**

*ಏನನ್ನಾದರು ತೆಗೆದುಕೊಂಡು ಅದನ್ನು ಯೋಗ್ಯವಾಗಿ ಮತ್ತು ಅರ್ಥವುಳ್ಳದ್ದಾಗಿ ಮಾಡುವುದಾಗಿದೆ. ಇದನ್ನು ಕೌಶಲ್ಯದಿಂದ ಮಾಡಲಾಗುತ್ತದೆ ಮತ್ತು ವಿವರಕ್ಕೆ ಜಾಗ್ರತೆಯಿಂದ ಗಮನಕೊಡುವುದು. ನಾವು ಸತ್ಯವೇದ ಕಥೆಯನ್ನು ನಿಪುಣತೆಯಿಂದ ರಚಿಸಿದಾಗ, ವಾಕ್ಯಗಳನ್ನು ಕೇವಲ ಬಾಯಿಪಾಠ ಮಾಡುವದಿಲ್ಲ ಆದರೆ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕಥೆಯಾಗಿ ಹೇಳಲಾಗುತ್ತದೆ:*

- **ಪಡೆದುಕೊಂಡ ತಿಳುವಳಿಕೆ:** *ಕೇಳುವಂತ ಜನರು ತಾವಿರುವ ಸಂಸ್ಕೃತಿಯ ತಿಳುವಳಿಕೆಯನ್ನು ಹೊಂದಿಕೊಳ್ಳುವಂತೆ ಸತ್ಯವೇದದ ಲೇಖಕರು ಇದನ್ನು ತಿಳುವಳಿಕೆಯಿಂದ ಹೇಳಿ ಬರೆದರು. ಉದಾ: ಒಳ್ಳೆಯ ಸಮಾರ್ಯನ ಸಾಮ್ಯದಲ್ಲಿ ಯೆಹೂದ್ಯರು ಸಮಾರ್ಯರನ್ನು ಕುರಿತು ಇಷ್ಟಪಡದೆ ಇರುವ ಸಂಗತಿಗಳನ್ನು ತಿಳಿದಿದ್ದರು. ಅವರು ಅದನ್ನು ತಿಳಿದಿದ್ದರು ಆದರೆ ನಾವು ಹಾಗೆ ಮಾಡುವದಿಲ್ಲ. ಈ ಮಾಹಿತಿಯನ್ನು ಪರಿಚಯದಲ್ಲಿ ತಿಳಿಸಬೇಕಾಗುತ್ತದೆ. ಸಾಧ್ಯವಾದರೆ, ನಿಮ್ಮ ಹೇಳಿಕೆಗೆ ಉತ್ತೇಜನ ಕೊಡಲು ಬೇರೆ ವಾಕ್ಯಗಳ ಉಲ್ಲೇಖಗಳನ್ನು ಉಪಯೋಗಿಸಿರಿ.*
- **ವಯಸ್ಸಿಗೆ ತಕ್ಕಂತೆ:** *ಮಕ್ಕಳು ಕಥೆಯಲ್ಲಿ ವಿವರಣೆಯಿಲ್ಲದೆ ಅರ್ಥಮಾಡಿಕೊಳ್ಳದೆ ಇರುವ ವಾಕ್ಯಗಳು ಅಥವಾ ಸಂಗತಿಗಳು ಉಂಟೋ? ಮಕ್ಕಳು ಅರ್ಥಮಾಡಿಕೊಳ್ಳುವಂತ ಪದಗಳನ್ನು ಉಪಯೋಗಿಸುವದು ಉತ್ತಮವಾಗಿರುತ್ತದೆ ಆದರೆ ಕಥೆಯನ್ನು ಸತ್ಯವೇದಾನುಸಾರ ನಿಖರವಾಗಿರಲಿ ಅಥವಾ ಇದನ್ನು ಪರಿಚಯದಲ್ಲಿ ವಿವರಿಸಬಹುದು.*
- **ಅಗತ್ಯವಲ್ಲದವುಗಳು:** *ಕೆಲವು ವಿವರಗಳು ಕಥೆಯನ್ನು ಅಡಗಿಸಿಬಿಡುತ್ತವೆ ಮತ್ತು ಜನರು ಪ್ರಾಮುಖ್ಯವಾದ್ದು ಯಾವುದೆಂದು ತಿಳಿದುಕೊಳ್ಳುವುದರಲ್ಲಿ ತಪ್ಪಿಹೋಗುವರು. ಉದಾಹರಣೆಗೆ, ಕಥೆಯಲ್ಲಿರುವ ಎಲ್ಲಾ ಹೆಸರುಗಳು, ಸಂಖ್ಯೆಗಳು ಮತ್ತು ಸ್ಥಳಗಳು ನೆನಪಿಟ್ಟುಕೊಳ್ಳಲು ಮುಖ್ಯವಲ್ಲದವುಗಳು ಆದರೆ ಭಾಗವಹಿಸುವವರಿಗೆ ತಬ್ಬಿಬ್ಬುಗೊಳಿಸುತ್ತವೆ.*
- **ಆರಂಭದ ಮತ್ತು ಮುಕ್ತಾಯದ ಹೇಳಿಕೆಗಳು:** *ಹಿನ್ನೆಲೆಯ ಯಾವ ಮಾಹಿತಿ ಅಗತ್ಯವಾಗಿದೆ; ಹಿಂದಿನ ಕಥೆಗಳಿಂದ ಸಂಬಂಧ ಕಲ್ಪಿಸುವ ಅಗತ್ಯವಿದೆಯೋ?*
- **ಸಂಸ್ಕೃತಿಕ ಅಪರಾಧಗಳು:** *ಭಾಗವಹಿಸುವವರಿಗೆ ನೋಯಿಸಬಹುದಾದ ಕಥೆಯಲ್ಲಿರುವ ಸಂಗತಿಗಳಿಗೆ ಸೂಕ್ಷ್ಮವಾಗಿರಿ (ಯೇಸು ಬಾವಿಯ ಬಳಿಯಲ್ಲಿದ್ದ ಸ್ತ್ರೀಯೊಂದಿಗೆ ಒಂಟಿಯಾಗಿರುವದು).*

**ಪ್ರತಿಯೊಬ್ಬ ವ್ಯಕ್ತಿಯು ವ್ಯಕ್ತಿಗತವಾಗಿ ಕಥೆಯನ್ನು 10 ನಿಮಿಷಗಳು ಕಲಿಯುವಂತೆ ನಡೆಸಿರಿ. ಪ್ರತಿಯೊಬ್ಬರಿಗೆ ಕಥೆಯನ್ನು ಹೇಳಲು ಅವಕಾಶ ಒದಗಿಸುವದಕ್ಕಾಗಿ ಅವರು ಇಬ್ಬಿಬ್ಬರಾಗಿರಲು ಅಥವಾ ಚಿಕ್ಕ ಗುಂಪಾಗಿರಲು ನಡೆಸಿರಿ. ಕಥೆಯನ್ನು ಹೇಳುವದರಲ್ಲಿ ಸಂತೋಷಿಸುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿರಿ ಮತ್ತು ಇದನ್ನು ಪರಿಪೂರ್ಣವಾಗಿ ವಾಕ್ಯದ ನಂತರ ವಾಕ್ಯವನ್ನು ಹೇಳುವುದಲ್ಲ.**

# ಅಧಿವೇಶನ #3
# ಕಥೆಯನ್ನು ಹೇಳಿರಿ

## ದೇವರ ಶೈಲಿ

*ಕಥೆಯು ಜೀವಂತವಾಗಿರುವಂತೆ ನಾವು ಕಥೆ ಹೇಳುವ ರೀತಿಗೆ ಕೆಲವು ಸಂಗತಿಗಳನ್ನು ಸೇರಿಸಿ ಮಕ್ಕಳನ್ನು ಸತ್ಯವೇದ ಕಥೆಗೆ ನಡೆಸೋಣ. ನೆನಪಿಡಿ, ಸತ್ಯವೇದ ಹೇಳುವ ವಿಷಯಕ್ಕೆ ನಾವು ನಿಖರವಾಗಿರುತ್ತೇವೆ ಮತ್ತು ನಮ್ಮ ಸ್ವಂತವಾದದ್ದನ್ನು ಸೇರಿಸುವದಿಲ್ಲ. ದೇವರು ತನ್ನ ಕಥೆಗಳನ್ನು ಹೇಗೆ ಹೇಳಿದನೆಂಬ ಮೂಲತತ್ವಗಳನ್ನು ಮೊದಲು ನೋಡೋಣ. ಅವುಗಳು ಹೀಗಿರಲಿ ಎಂದು ಆತನು ಮಾಡಿದನು...*

- **ನೆನಪಿಡತಕ್ಕ:** *ನೀವು ಮರೆತುಹೋಗದ ರೀತಿಯಲ್ಲಿ ದೇವರು ತನ್ನ ಸಂದೇಶವನ್ನು ಕೊಡುವನು; ನಾವು ಕಥೆಯನ್ನು ಅನುಭವಿಸುವಂತೆ ನಮ್ಮನ್ನು ನಡೆಸುತ್ತವೆ. ಕೆಲವು ಉದಾಹರಣೆಗಳು ಹೀಗಿವೆ: ಪ್ರಳಯದ ನಂತರ ದೇವರು ಆಕಾಶದಲ್ಲಿ ಕಾಮನಬಿಲ್ಲನು ಇಟ್ಟನು ಮತ್ತು ತೋಮನು ಯೇಸುವಿನ ಕೈಗಳಲ್ಲಿ ಗಾಯಗಳನ್ನು ಮುಟ್ಟಿದ್ದು.*

- **ಅಪೇಕ್ಷಿಸಿದ:** *ಕೆಲವೊಮ್ಮೆ ಸಂದೇಶಗಳು ಎದುರುನೋಡದ ರೀತಿಯಲ್ಲಿ ಬರುತ್ತವೆ. ಕೆಲವು ಉದಾಹರಣೆಗಳು ಹೀಗಿವೆ: ಬೀಳಾಮನು ಮತ್ತು ಕತ್ತೆ, ಮೋಶೆ ಮತ್ತು ಉರಿಯುವ ಪೊದೆ, ಸೌಲನು ಕುರುಡಾದದ್ದು; ಸತ್ಯವೇದದಲ್ಲಿ ವಿವಿಧ ಸ್ವಸ್ಥತೆಗಳು (ನಾಮಾನನು, ತೆಲಾಮೆ ಮತ್ತು ಕರುಡನು). ನಾವು ಸಂಧಿಸುವ ಸ್ಥಳಗಳು, ಕುಳಿತುಕೊಳ್ಳುವ ಸಿದ್ಧತೆ ಅಥವಾ ಮಾನಸಿಕ ಭಾವನೆಗಳನ್ನು ಬೆಳಕು/ಕತ್ತಲೆಯನ್ನು ಸೃಷ್ಟಿಮಾಡುವದರ ಮೂಲಕ ವಾತಾವರಣಗಳನ್ನು ನಾವು ಬದಲಾಯಿಸಬಹುದು.*

- **ವಿವಿಧ-ಇಂದ್ರಿಯ ಗ್ರಹಿಕೆಗಳು:** *ಆತನ ಕಥೆಯನ್ನು ನೆನಪಿಟ್ಟುಕೊಳ್ಳುವಂತೆ ಮಾಡಲು ದೇವರು ಇಂದ್ರಿಯ ಶಕ್ತಿಗಳನ್ನು ಉಪಯೋಗಿಸಿದನು; ನಾವು ಹೆಚ್ಚು ಇಂದ್ರಿಯ ಶಕ್ತಿಗಳನ್ನು ಮತ್ತು ಚಟುವಟಿಕೆಗಳನ್ನು ಉಪಯೋಗಿಸಿದರೆ, ನಾವು ಇನ್ನು ಹೆಚ್ಚಾಗಿ ನೆನಪಿಟ್ಟುಕೊಳ್ಳುತ್ತೇವೆ!*
    - **ಕಣ್ಣಿಗೆ ಕಾಣುವ:** *ನಾವು ಕಣ್ಣಿಗೆ ಕಾಣುವಂತ ಜನರಾಗಿದ್ದೇವೆ ಮತ್ತು ಜನರು ಕಥೆಯನ್ನು ನೋಡುವಂತೆ ಮಾಡುವುದು ಸಹಾಯಕರವಾಗಬಹುದು.*
        - **ವಸ್ತು:**

**ಪ್ರತಿಯೊಂದು ಗುಂಪಿಗೆ ವಿವಿಧ ರಚನೆಯನ್ನು ಕೊಡಿ ಮತ್ತು ಯೇಸು ಮತ್ತು ಪೇತ್ರನು ನೀರಿನ ಮೇಲೆ ನಡೆಯುವ ಕಥೆಯನ್ನು ಹೇಳಲು ಇದನ್ನು ಹೇಗೆ ಉಪಯೋಗಿಸಬಹುದೆಂದು ಗುರುತಿಸಿ.**

- ***ಮಕ್ಕಳ ಕಥಾಫಲಕಗಳು*** (ನಾವು ಇವುಗಳನ್ನು ಕುರಿತು ಇನ್ನು ಹೆಚ್ಚಾಗಿ ನಂತರ ಮಾತನಾಡಲಿದ್ದೇವೆ)
- ***ವೇಷಭೂಷಣಗಳು***

- ○ **ಸ್ಪರ್ಷ:** ಉದಾಹರಣೆಗಳು: ಹಿಡಿದುಕೊಳ್ಳಲು ಅಥವಾ ಸುತ್ತಲು ಸಾಗಿಸಲು ವಸ್ತುಗಳು, ಮಕ್ಕಳ ಮೇಲೆ ಎರಚುವ ನೀರು.
- ○ **ಕೇಳುವುದು:** ಉದಾಹರಣೆಗಳು: ಶಬ್ಧದ ಪರಿಣಾಮಗಳು; ಮಳೆಯ ಶಬ್ಧವನ್ನು ಮಾಡಲು ಕೈಗಳನ್ನು ಉಜ್ಜುವದು
- ○ **ವಾಸನೆ:** ಉದಾಹರಣೆಗಳು: ಪರಿಮಳ ಧೂಪ, ಕಣ್ಣಿಗೆ ಕಾಣಲು ಮೀನು ಆದರೆ ವಾಸನೆ ಸಹ
- ○ **ರುಚಿ:** ಉದಾಹರಣೆಗಳು: ರುಚಿ ನೋಡಲು ಆಹಾರ (ಮನ್ನ)

- **ಹಾಗೆ ಜೀವಿಸಿರಿ:** *ಯೇಸು ತನ್ನ ಶಿಷ್ಯರೊಂದಿಗೆ ಹಾಗೆ ಜೀವಿಸಿದನು – ಆತನು ಅವರಿಗೆ ಕಲಿಸಿದ್ದು ಮಾತ್ರವಲ್ಲದೆ ಆದರೆ ಅವರಿಗೆ ಮಾದರಿ ತೋರಿಸಿದನು. ತನ್ನನ್ನು ತಾನು ಹೆಚ್ಚಿಸಿಕೊಳ್ಳಲಿಲ್ಲ ಆದರೆ ಅವರ ಸೇವೆ ಮಾಡಿದನು. ನಾವು ಸಹ ಹೇಗೆ ಈ ರೀತಿ ಮಾಡಬಹುದು? ಯೇಸು ಯಾರಾಗಿದ್ದನು ಮತ್ತು ಸತ್ಯವೇದ ಕಥೆಗಳಲ್ಲಿರುವ ಜನರಿಗೆ ಆತನು ಹೇಗೆ ಪ್ರತಿಕ್ರಿಯಿಸಿದನೆಂದು ಅರ್ಥಮಾಡಿಕೊಳ್ಳಲು ಕೆಲವೊಮ್ಮೆ ನಮ್ಮ ಕ್ರಿಯೆ ಮತ್ತು ನಡತೆಗಳು ಮಕ್ಕಳಿಗೆ ಸಹಾಯ ಮಾಡುತ್ತವೆ.*

**ಜನರು ತಮ್ಮ ಚಿಕ್ಕ ಗುಂಪುಗಳಲ್ಲಿರುವಾಗ, ವಿವಿಧ ಇಂದ್ರಿಯಗಳನ್ನು ಉಪಯೋಗಿಸಲು ಸಾಧ್ಯವಾದಷ್ಟು ಸತ್ಯವೇದ ಕಥೆಗಳಿಂದ ಮುಂಬರಲು ಅವರಿಗೆ 3 ನಿಮಿಷಗಳನ್ನು ಕೊಡಿರಿ.**

**ಕಥೆ ಹೇಳಲು ವಿವಿಧ ರೀತಿಗಳು**

- **ಮೊದಲ ವ್ಯಕ್ತಿ:** ಕಥೆಯಲ್ಲಿ ನೀವು ಒಬ್ಬ ಪಾತ್ರರಾಗಿರುವಂತೆ
- **ಮೂರನೆಯ ವ್ಯಕ್ತಿ:** ಕಥೆಗಾರನಾಗಿ
- **ಕಲೆಯ ಆಕ್ರಮಣ:** ಹಾಳೆ, ಬಣ್ಣದ ಬಳಪಗಳು, ಮಾರ್ಕರ್
- **ವಸ್ತುಗಳು:** ಬಟ್ಟೆಗಳು, ಚಿಮುಕಿಸುವ ಬಾಟಲಿ.
- **ನಾಟಕ**
- **ಕೈ ಚಲನೆಗಳು**
- **ಸಭೀಕರ ಭಾಗವಹಿಸುವಿಕೆ**
- **ಒಬ್ಬರು ಕಥೆಯನ್ನು ಓದುವದು ಮತ್ತೊಬ್ಬರು ಅದನ್ನು ನಟಿಸುವದು**

**ಪ್ರಸ್ತುತಪಡಿಸುವದು:**

- **ಚಲನೆ:** ನಿಮ್ಮ ಕುರ್ಚಿಗೆ ಅಂಟಿಕೊಳ್ಳಬೇಡಿರಿ. ಒಂದು ವೇಳೆ ಕಥೆಯು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿದರೆ ಸುತ್ತಲು ಸಾಗುವದು ಒಳ್ಳೆಯದು.
- **ತೋರಿಕೆಗಳು:** *ನಿಮ್ಮ ಮುಖ ತೋರಿಕೆಗಳು ಕಥೆಯನ್ನು ನಂಬುವಂತೆ ಮಾಡುತ್ತವೆ; ನಿಮಗೆ ಮುಖ ತೋರಿಕೆ ಇರುವುದಾದರೆ ನೀವು ಹೆಚ್ಚಾಗಿ ಹೇಳುವ ಅಗತ್ಯವಿಲ್ಲ.* **ಭಾಗವಹಿಸುವವರು ತಮ್ಮ ಸಹಪಾಟಿಗಳ ಕಡೆಗೆ ತಿರುಗಲಿ. ಮುಂದಿನ ಪುಟದಲ್ಲಿ ಮುಖ ತೋರ್ಪಡಿಕೆಯ ಹಾಳೆಯನ್ನು ಉಪಯೋಗಿಸಿ, ಬೇರೆ ವ್ಯಕ್ತಿಯು ಮಾಡಬೇಕಾದ 5 ಹೇಳಿಕೆಗಳನ್ನು ಒಬ್ಬ ವ್ಯಕ್ತಿಯು ತೆಗೆದುಕೊಳ್ಳುತ್ತಾನೆ. ನಂತರ ಬೇರೆ ವ್ಯಕ್ತಿಯು ಅದನ್ನು ಮಾಡಲಿ. ಇಲ್ಲಿ ವ್ಯತ್ಯಾಸವು ಒಬ್ಬ ವ್ಯಕ್ತಿಯು ವ್ಯಕ್ತಪಡಿಸುವನು ಮತ್ತೊಬ್ಬ ವ್ಯಕ್ತಿಯು ಇದು ಏನೆಂದು ಊಹಿಸಬೇಕಾಗುತ್ತದೆ.**
- **ಸಭೀಕರ ಭಾಗವಹಿಸುವಿಕೆ:** *ಕೆಲವೊಮ್ಮೆ ಕೆಲವು ಅಥವಾ ಎಲ್ಲಾ ಮಕ್ಕಳನ್ನು ಕಥೆ ಹೇಳುವುದರಲ್ಲಿ ನಿಜವಾಗಿ ತೊಡಗಿಸಿಕೊಳ್ಳುವುದು ವಿನೋದಕರವಾಗಿರುತ್ತದೆ. ಇವುಗಳಿಂದ ಇದು ಆಗಬಹುದು:*
    - **ಭಾಗವಹಿಸುವವರು ಹೇಳಬಹುದಾದ ಅಥವಾ ಪ್ರತಿಕಿಯಿಸಬಹುದಾದ ಮರುಕಳಿಸುವ ಪದಗಳು/ವಾಕ್ಯಾಂಗಗಳು**
    - **ಕೈ ಮತ್ತು ದೇಹದ ಚಲನೆಗಳು**
    - **ಶಬ್ಧದ ಪರಿಣಾಮಗಳು**
    - **ಹಾಡು**
    - **ಚುರುಕಾಗಿ ಭಾಗವಹಿಸುವಿಕೆ:** *ಇಡೀ ಕಥೆಯನ್ನು ಅಥವಾ ಕಥೆಯ ವಿವಿಧ ಭಾಗಗಳನ್ನು ನಟಿಸಿರಿ*
- **ಸ್ವರ:** *ಸ್ವರವು ಕಥೆಯನ್ನು ಜೀವದಿಂದ ಬರುವಂತೆ ಮಾಡುತ್ತದೆ. ಗುಂಪಿನಲ್ಲಿ ಅಥವಾ ತರಗತಿ ಕೋಣೆಯಲ್ಲಿ ಬೇಸರ ಉಂಟುಮಾಡುವಂತದ್ದು ಯಾವುದು – #1 ಉತ್ತರವು ಒಂದೇ ರಾಗದ ಸ್ವರವಾಗಿದೆ. ಈ ಕೆಳಗಿನವುಗಳ ಪ್ರದರ್ಶನಗಳನ್ನು ಕೊಡಿರಿ.*
    - **ಉಚ್ಚಾರಣಾ ಶೈಲಿ**
    - **ಶ್ರುತಿ**
    - **ವಿರಾಮ:** *ಇದು ಕಥೆಯಲ್ಲಿ ಮತ್ತು ವಿಮರ್ಶೆಯಲ್ಲಿ ಬಹಳ ಪರಿಣಾಮಕಾರಿಯಾಗಿರುತ್ತದೆ. ಮೌನವನ್ನು ಕುರಿತು ಭಯಪಡಬೇಡಿರಿ. ಶಾಂತತೆ/ಮೌನತೆಯಲ್ಲಿ ಕಾರ್ಯಮಾಡಲು ಪವಿತ್ರಾತ್ಮನು ನಡೆಸುತ್ತದೆ ಇದು ಕಥೆ ಮತ್ತು ದೃಢವಾಗಿ ಹೇಳಿದ್ದನ್ನು ತಲೆಯಿಂದ ಹೃದಯಕ್ಕೆ ಹೋಗಲು ಸಹಾಯಮಾಡುತ್ತದೆ.*
    - **ವೇಗ:** *ಮಕ್ಕಳು ಕಥೆಯನ್ನು ಅರ್ಥಮಾಡಿಕೊಳ್ಳಲು ಸುಲಭವಾಗುವ ವೇಗದಲ್ಲಿ ಮಾತನಾಡಿರಿ.*


**ಜೊಡಿಯಾಗಿ ಅಥವಾ ಚಿಕ್ಕ ಗುಂಪಿನಲ್ಲಿ ಸೇರಿಕೊಳ್ಳಿರಿ ಮತ್ತು ಪ್ರತಿಯೊಬ್ಬ ವ್ಯಕ್ತಿಯು ಯೇಸು ಮತ್ತು ಪೇತ್ರನು ನೀರಿನ ಮೇಲೆ ನಡೆದ ಕಥೆಯನ್ನು ಹೇಳುವರು, ಆದರೆ ಈ ಸಾರಿ ಕೆಲವು ಕಥೆ ಹೇಳುವ ಸೂತ್ರಗಳನ್ನು ಸೇರಿಸಬೇಕು. ಸತ್ಯವೇದವು ಹೇಳುವುದಕ್ಕೆ ಜನರು ಸತ್ಯವಂತರಾಗಿರುವುದು ಮತ್ತು ತಮ್ಮ ಸ್ವಂತ ಆಲೋಚನೆಗಳನ್ನು ಅಥವಾ ಅನ್ವಯಗಳನ್ನು ಸೇರಿಸದೆ ಇರುವುದು ಅತ್ಯಗತ್ಯವಾಗಿದೆ.**

---


**ಒಬ್ಬ ವ್ಯಕ್ತಿಯು ವಿರಾಮಕ್ಕೆ ಮುಂಚೆ ಮತ್ತು ನಂತರ ಕಥೆಯನ್ನು ಹೇಳಲಿ**




ದೃಢವಿಶ್ವಾಸ



ಗಲಿಬಿಲಿಗೊಂಡ




ಅಪರಾಧಿ




ಸಂತೋಷ




ಆಶಾಭಂಗ




ದುಃಖ




ನಿರೀಕ್ಷೆಯುಳ್ಳ




ಬಳಲಿದ




ಚೇಷ್ಟೆಯ




ಭಯಪಟ್ಟ




ಕೋಪ




ಏಕಾಂಗಿ



ಪ್ರೀತಿಯಲ್ಲಿ



ಚಿಂತೆ



ಹೊಟ್ಟೆಕಿಚ್ಚು

# ಮನೆಪಾಠದ ಕೆಲಸ

ಈ ಮನೆಪಾಠದ ಕೆಲಸವನ್ನು ಮುಂದಿನ ತರಬೇತಿಯ ಅಧಿವೇಶನಕ್ಕೆ ಮುಂಚೆ ಮಾಡಬೇಕಾಗಿರುತ್ತದೆ. ಲೂಕ 15:1–7ರಲ್ಲಿರುವ ಕಳೆದು ಹೋದ ಕುರಿಯ ಕಥೆಯನ್ನು ಓದಿರಿ. ಇದನ್ನು ವಿವಿಧ ಭಾಷಾಂತರಗಳಲ್ಲಿ ಅನೇಕ ಸಾರಿ ಓದಿದರೆ ಉತ್ತಮವಾಗಿರುತ್ತದೆ. ಸಾಧ್ಯವಾದರೆ, ಕಾರ್ಯಗಾರಕ್ಕೆ ಹಿಂದಿರುಗಿ ಬರುವುದಕ್ಕೆ ಮುಂಚಿತವಾಗಿ ಕಥೆಯನ್ನು ಯಾರಿಗಾದರು ಹೇಳಲು ಪ್ರಯತ್ನಿಸಿರಿ.

**ಕಳೆದಹೋದ ಕುರಿಯ ಸಾಮ್ಯದ ಸತ್ಯವೇದ ಕಥೆ ಹೇಳುವುದು (ಲೂಕ 15:1–7)**

*ಯೇಸುವಿನ ಮಾತುಗಳನ್ನು ಕೇಳಲು ಸುಂಕದವರು ಮತ್ತು ಪಾಪಿಗಳು ಗುಂಪಾಗಿ ಸುತ್ತಿಕೊಂಡಿದ್ದರು. ಆದುದರಿಂದ ಪರಿಸಾಯರು ಮತ್ತು ಮೋಶೆಯ ಧರ್ಮಶಾಸ್ತ್ರದ ಬೋಧಕರು ಹೀಗೆ ಗುಣಗುಟ್ಟಲು ಆರಂಭಿಸಿದರು, "ಈ ಮನುಷ್ಯನು ಪಾಪಿಗಳೊಂದಿಗೆ ಸ್ನೇಹಿತನಾಗಿದ್ದಾನೆ. ಅವರೊಂದಿಗೆ ಊಟವನ್ನು ಸಹ ಮಾಡುತ್ತಾನೆ."*

*ಆಗ ಯೇಸು ಅವರಿಗೆ ಈ ಕಥೆಯನ್ನು ಹೇಳಿದನು:*

*ನಿಮ್ಮಲ್ಲಿ ಯಾವನಿಗಾದರೂ ನೂರು ಕುರಿಗಳಿರಲಾಗಿ ಅವುಗಳಲ್ಲಿ ಒಂದು ಕಳೆದು ಹೋದರೆ ನೀವು ಏನು ಮಾಡುವಿರಿ? ನೀವು ತೊಂಬತ್ತೊಂಭತ್ತನ್ನು ಅಡವಿಯಲ್ಲಿ ಬಿಟ್ಟು ಕಳೆದು ಹೋದದ್ದು ಸಿಕ್ಕುವ ತನಕ ಅದನ್ನು ಹುಡುಕಿಕೊಂಡು ಹೋಗದೆ ಇರುವಿರಲ್ಲವೇ? ನಿಮಗೆ ಸಿಕ್ಕಿದ ಮೇಲೆ ಸಂತೋಷಪಡುತ್ತಾ ಅದನ್ನು ನಿಮ್ಮ ಹೆಗಲಿನ ಮೇಲೆ ಇಟ್ಟುಕೊಂಡು ಮನೆಗೆ ಬರುವಿರಿ. ಆಗ ನೀವು ನಿಮ್ಮ ಸ್ನೇಹಿತರನ್ನೂ, ನೆರೆಹೊರೆಯವರನ್ನೂ ಕೂಡಿಸಿ, "ಕಳೆದುಹೋದ ಕುರಿ ಸಿಕ್ಕಿತು, ನನ್ನ ಸಂಗಡ ಸಂತೋಷಿಸಿರಿ!" ಎಂದು ಹೇಳುವಿರಿ.*

*ಯೇಸು ಹೇಳಿದ್ದು, "ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗು."*

**ಕಥೆಯನ್ನು ಹೇಳಿರಿ:** ನೀವು ಈ ಕಥೆಯನ್ನು ಹೇಗೆ ಉತ್ತಮವಾಗಿ ನೆನಪಿನಲ್ಲಿಡುವಿರಿ? ಈ ಕಥೆ ಹೆಚ್ಚು ಉಜ್ಜೀವಕರವಾಗಿರಲು ಮತ್ತು ಕಥೆಗೆ ಮಕ್ಕಳನ್ನು ಸೆಳೆಯಲು ನೀವು ಕಥೆ ಹೇಳುವ ಯಾವ ವಿಧಾನಗಳನ್ನು ಸೇರಿಸಬಹುದು?

# ಅಧಿವೇಶನ #4

# ಭಕ್ತಿಯುಳ್ಳ: ಯೇಸುವಿನ ರೀತಿಯಲ್ಲಿ ಮಾಡುವುದು ಮಾರ್ಕ 6:7–13

ಭಾಗವಹಿಸುವವರನ್ನು ವಂದಿಸಿರಿ ಮತ್ತು ಸಮಯ ಅವಕಾಶವಾದರೆ, ಅವರು ಹಿಂದಿನ ದಿವಸ ಅನುಭವಿಸಿದವುಗಳಿಂದ ಕೆಲವು ಪರಿಣಾಮದ ಮಾಹಿತಿಯನ್ನು ಪಡೆದುಕೊಳ್ಳಿರಿ. *ನಮ್ಮ ದಿನವನ್ನು ಆರಂಭಿಸುವುದಕ್ಕೆ ಮುಂಚೆ, ನಾನು ನಿಮ್ಮೊಂದಿಗೆ ಮತ್ತೊಂದು ಕಥೆಯನ್ನು ಹೇಳಲು ಇಷ್ಟಪಡುತ್ತೇನೆ ಮತ್ತು ನಾವು ಆತನ ಹೆಸರಿನಲ್ಲಿ ಸೇವೆ ಮಾಡುವಾಗ ಯೇಸು ಏನನ್ನು ಅಪೇಕ್ಷಿಸುವನು ಎಂದು ನೋಡೋಣ.*

**ಆರಂಭ:** (ಜೊತೆಗಾರರ ಕಡೆಗೆ ತಿರಿಗಿ ಹಂಚಿಕೊಳ್ಳಿರಿ)

ದೇವರು ನಿಮ್ಮನ್ನು ಬಲವಾಗಿ ಉಪಯೋಗಿಸಿದ ಸಮಯ.

ಅಥವಾ

ನೀವು ಏನಾದರು ಮಾಡಬೇಕೆಂದು ಬಯಸಿ ಆದರೆ ನಿಮಗೆ ಅಗತ್ಯವೆಂದು ಆಲೋಚಿಸಿದ ಎಲ್ಲಾ ಸಾಮಗ್ರಿಗಳು ಇಲ್ಲದೆ ನಿಷ್ಫಲಗೊಂಡ ಸಮಯ.

**ಪರಿಚಯ:**

ಯೇಸು ದೇಶದಾದ್ಯಂತ ಬೋಧಿಸುತ್ತಿದ್ದನು ಮತ್ತು ಗುಣಪಡಿಸುತ್ತಿದ್ದನು. ಆತನು ತನ್ನ ತವರೂರಾದ ನಜರೇತಿಗೆ ಹಿಂದಿರುಗಿದಾಗ ದೇವಕುಮಾರನಾಗಿದ್ದ ಆತನಲ್ಲಿ ಜನರು ಅಲ್ಪ ನಂಬಿಕೆ ಇಟ್ಟದ್ದನ್ನು ಕಂಡನು. ಈ ಕಾರಣದಿಂದ, ಆತನು ಕೇವಲ ಕೆಲವು ಸ್ವಸ್ಥತೆಗಳನ್ನು ಮಾತ್ರ ಮಾಡಲು ಸಾಧ್ಯವಾಯಿತು. ನಮ್ಮ ಸತ್ಯವೇದದ ಮಾರ್ಕನ ಪುಸ್ತಕದಿಂದ ಕಥೆಯನ್ನು ನಾವು ಆರಂಭಿಸುತ್ತೇವೆ.

**ಕಥೆಯನ್ನು ಹೇಳಿರಿ:**

*ಮತ್ತು ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ಇಬ್ಬರಿಬ್ಬರಾಗಿ ಕಳುಹಿಸಲಾರಂಭಿಸಿದನು. ಆತನು ಅವರಿಗೆ ವಿರೋಧಿಯ ಮೇಲೆ ಹೋರಾಡಲು ಮತ್ತು ದುರಾತ್ಮಗಳನ್ನು ಬಿಡಿಸಲು ತನ್ನ ಶಕ್ತಿಯನ್ನು ಮತ್ತು ಅಧಿಕಾರವನ್ನು ಕೊಟ್ಟನು. ಯೇಸು ಅವರಿಗೆ ಈ ಸೂಚನೆಗಳನ್ನು ಕೊಟ್ಟನು: ನಿಮ್ಮೊಂದಿಗೆ ಏನನ್ನೂ ತೆಗೆದುಕೊಂಡು ಹೋಗಬೇಡಿರಿ – ಊಟದ ಬುತ್ತಿ, ವಸ್ತ್ರಗಳು ಅಥವಾ ಹಣವನ್ನಾಗಲಿ ತೆಗೆದುಕೊಂಡು ಹೋಗಬೇಡಿರಿ. ನಿಮ್ಮೊಂದಿಗೆ ನಡೆಯಲು ಕೋಲನ್ನು, ನಿಮ್ಮ ಕಾಲಿಗೆ ಕೆರವನ್ನು ಮತ್ತು ನಿಮ್ಮ ಬೆನ್ನ ಮೇಲೆ ಚೀಲವನ್ನು ತೆಗೆದುಕೊಳ್ಳಿರಿ.*

*ಯೇಸು ಹೇಳಿದ್ದು, "ನೀವು ಎಲ್ಲಾದರೂ ಒಂದು ಮನೆಯಲ್ಲಿ ಇಳುಕೊಂಡಾಗ, ಆ ಸ್ಥಳದಿಂದ ಹೊರಡುವ ತನಕ ಅಲ್ಲೇ ಇರಿ. ಮತ್ತು ಯಾವ ಸ್ಥಳದವರಾದರೂ ನಿಮ್ಮನ್ನು ಸೇರಿಸಿಕೊಳ್ಳದೆಯೂ ನೀವು ಹೇಳುವದನ್ನು ಕೇಳದೆಯೂ ಹೋದರೆ ಆ ಸ್ಥಳದಿಂದ ಹೊರಟುಹೋಗುವಾಗ ನಿಮ್ಮ ಕಾಲಿಗೆ ಹತ್ತಿದ ಧೂಳನ್ನು ಝೂಡಿಸಿಬಿಡಿರಿ; ಅದು ಅವರಿಗೆ ಸಾಕ್ಷಿಯಾಗಿರಲಿ."*

*ಆದುದರಿಂದ ಶಿಷ್ಯರು ಹೊರಟುಹೋಗಿ, ಅವರು ಸಂಧಿಸಿದ ಪ್ರತಿಯೊಬ್ಬರಿಗೆ ತಮ್ಮ ಪಾಪಗಳಿಗಾಗಿ ಪಶ್ಚಾತಾಪಪಡಬೇಕು ಎಂದು ಹೇಳುತ್ತಿದ್ದರು. ಅವರು ದೇವರ ಕಡೆಗೆ ತಿರುಗಿಕೊಳ್ಳುವುದಾದರೆ ಜೀವಿತವು ವ್ಯತ್ಯಾಸವಾಗಿರುತ್ತದೆ. ಅವರು ಅನೇಕ ದೆವ್ವಗಳನ್ನು ಬಿಡಿಸಿ ಅನೇಕ ರೋಗಿಗಳಿಗೆ ಎಣ್ಣೆಹಚ್ಚಿ ವಾಸಿಮಾಡಿದರು.*

**ಪುನಃ ಹೇಳಿರಿ:**

ಹಗ್ಗ/ತಂತಿಯನ್ನು ಉಪಯೋಗಿಸಿ "ವ್ರೂಮ್" ಚಟುವಟಿಕೆಯನ್ನು ಮಾಡಿರಿ, ಹೀಗೆ ಹಗ್ಗವನ್ನು ಜೊತೆಗೆ ಸಾಗಿಸಿದಾಗ ನಿಮಗೆ 'ನಿಲ್ಲಿಸಿ' ಎಂದು ಹೇಳಲಾಗುತ್ತದೆ, ಗಂಟನ್ನು ಹಿಡಿದ ವ್ಯಕ್ತಿಯು ಕಥೆಯ ಮುಂದಿನ ಭಾಗವನ್ನು ಹೇಳುತ್ತಾನೆ.

**ಪ್ರಶ್ನೆಗಳನ್ನು ಕಂಡುಹಿಡಿಯಿರಿ:**

- ನಿಮಗೆ ಕಥೆಯಲ್ಲಿ ಯಾವುದು ಇಷ್ಟವಾಯಿತು?
- ಕಥೆಯಲ್ಲಿ ನೀವು ಈ ಮುಂಚೆ ಕೇಳದೆ ಇದ್ದ ಯಾವುದಾದರು ಹೊಸ ಸಂಗತಿ ಇತ್ತೋ?
- ಶಿಷ್ಯರು ಏನನ್ನು ತೆಗೆದುಕೊಂಡು ಹೋಗಬಾರದೆಂದು ಹೇಳಲಾಗಿತ್ತು?
- ಅವರಲ್ಲಿ ಏನಿತ್ತು?
- ಕಥೆಯಲ್ಲಿ ನಡೆದದ್ದನ್ನು ಕುರಿತು ನಿಮಗೆ ಯಾವುದು ಆಶ್ಚರ್ಯ ಉಂಟುಮಾಡುತ್ತದೆ?
- ದೇವರ ಕೆಲಸವನ್ನು ಮಾಡಲು ನಿಮಗೆ ಏನು ಬೇಕೆಂದು ನೀವು ಆಧಾರಗೊಳ್ಳುವಿರಿ/ಆಲೋಚಿಸುವಿರಿ?
- ದೇವರು ಬಯಸಿದ ಹಾಗೆ ನೀವು ಸೇವೆ ಮಾಡಬೇಕೆಂದು ಈ ಕಥೆಯು ನಿಮ್ಮನ್ನು ಹೇಗೆ ವಿಸ್ತರಿಸಿತು?

**ಪ್ರತ್ಯುತ್ತರದ ಪ್ರಶ್ನೆಗಳು:**

- ನೀವು ಈಗ ಕೇಳಿದ ಕಥೆಯಿಂದ ಪವಿತ್ರಾತ್ಮನು ನಿಮ್ಮನ್ನು ಏನು ಮಾಡಬೇಕೆಂದು ಹೇಳುತ್ತಿದ್ದಾನೆ?
- ನೀವು ನಿಮ್ಮನ್ನಲ್ಲದೆ ಆದರೆ ನೀವು ಯಾವ ವಿಷಯದಲ್ಲಿ ಆತನ ಮೇಲೆ ಆಧಾರಗೊಳ್ಳಬೇಕೆಂದು ದೇವರು ಬಯಸುತ್ತಿದ್ದಾನೆ?

# ಅಧಿವೇಶನ #5
# ಕಥೆಯನ್ನು ಪುನಃ ಹೇಳಿರಿ

ಜನರು ಯಾವುದಾದರು ಸ್ಪಷ್ಟನೆಗಾಗಿ ಮತ್ತು ಸತ್ಯವೇದಾನುಸಾರ ನಿಖರತೆಗಾಗಿ ಕಥೆಯನ್ನು ತಿರಿಗಿ ಹೇಳುವುದು ಪ್ರಾಮುಖ್ಯವಾಗಿದೆ. ಒಂದು ವೇಳೆ ಭಾಗವಹಿಸುವವರಲ್ಲಿ ಸತ್ಯವೇದ ಇರುವುದಾದರೆ, ಅವರು ಅವುಗಳನ್ನು ತೆರೆಯಲಿ ಮತ್ತು ವಾಕ್ಯಭಾಗದಿಂದ ಕಥೆಯನ್ನು ತಿರಿಗಿ ಓದಲಿ. ಇದನ್ನು ಕಥೆ ಓದುತ್ತಿರುವವರು ಅಥವಾ ಕ್ರಮವಾದ ಪ್ರಶ್ನೆಗಳನ್ನು ಕೇಳುತ್ತಿರುವ ನಾಯಕರು ಮಾಡಬಹುದು ಆಗ ವಾಕ್ಯವನ್ನು ನೋಡುವುದರ ಮೂಲಕ ಪ್ರತಿಯೊಬ್ಬರು ಉತ್ತರಿಸುವರು. ಮಕ್ಕಳನ್ನು ಕಥೆಗೆ ತೊಡಗಿಸಲು ಇದು ಗುಂಪಿನ ಚಟುವಟಿಕೆಗಳನ್ನು ಅಳವಡಿಸಲು ಸಹಾಯಕರವಾಗಬಹುದು. ಇದು ಅವರಿಗೆ ಕಥೆಯನ್ನು ನೆನಪಿನಲ್ಲಿಡಲು ಸಹ ಸಹಾಯಮಾಡುತ್ತದೆ ಇದರಿಂದ ಅವರು ಬೇರೆಯವರಿಗೆ ಪುಃನ ಹೇಳಬಹುದು.

ಪ್ರತಿಯೊಂದು ಸಂಸ್ಕೃತಿಯಲ್ಲಿ ಇರುವ ಸಾರ್ವತ್ರಿಕ ಸಂಗತಿಗಳನ್ನು ಯಾರು ನೆನಪಿನಲ್ಲಿಟ್ಟುಕೊಳ್ಳುತ್ತಾರೆ? (ಸಂಬಂಧ, ಆಟಗಳು, ಸಂಗೀತ, ಕಲೆ ಮತ್ತು ಕಥೆಗಳು) ನಾವು ಇದನ್ನು ತಿರಿಗಿ ಹೇಳುವ ಸಮಯದಲ್ಲಿ ಉಪಯೋಗಿಸಬಹುದು. ವಿಶೇಷವಾಗಿ ಮಕ್ಕಳಿಗೆ, ನೀವು ಮಾಡುತ್ತಿರುವುದರ ಮೇಲೆ ಗಮನವಿಡಲು ಆಟಗಳು ಉತ್ತಮವಾಗಿರುತ್ತವೆ. ನೀವು ವಸ್ತುಗಳನ್ನು ಎಲ್ಲಾದರೂ ಕಂಡುಕೊಳ್ಳಬಹುದಾದ ಕೆಲವು ಸರಳವಾದ **ಆಟಗಳನ್ನು** ನಾವು ಆಡಲಿದ್ದೇವೆ.

**ಯೇಸು ಮತ್ತು ಪೇತ್ರನು ನೀರಿನ ಮೇಲೆ ನಡೆಯುವ ಕಥೆಯನ್ನು ತಿರಿಗಿ ಹೇಳುವಾಗ ಗುಂಪಿನಲ್ಲಿ ಆಡಲು ಒಂದು ಆಟವನ್ನು ಉಪಯೋಗಿಸಿರಿ. ನಂತರ ಈ ಕೆಳಗೆ ಕೊಟ್ಟಿರುವ ವಿವಿಧ ಸಾರ್ವತ್ರಿಕ ಸಂಗತಿಗಳನ್ನು ಕುರಿತು ಪ್ರತಿಯೊಂದು ಗುಂಪಿಗೆ ಒಂದು ಚಟುವಟಿಕೆಯನ್ನು ವಹಿಸಿರಿ. ಕೊನೆಯಲ್ಲಿ ಪ್ರದರ್ಶಿಸಲು ಗುಂಪುಗಳಿಗೆ ಸಾಕಷ್ಟು ಸಮಯವನ್ನು ಕೊಡಿರಿ.**

**ಆಟಗಳು**

- **ಬೀಚ್ ಬಾಲ್:** ಸತ್ಯವೇದದ ಕಥೆಯ ಕೆಲವು ಪ್ರಮುಖ ಪ್ರಶ್ನೆಗಳನ್ನು ಬೀಚ್ ಚೆಂಡಿನ ಮೇಲೆ ಪರಮನೆಂನ್ಟ್ ಮಾರ್ಕರ್ ನಿಂದ ಬರೆಯಬಹುದು. ಮಗು ಎಲ್ಲೆಲ್ಲಿ ಚೆಂಡನ್ನು ಹಿಡಿಯುತ್ತಾದೋ ಅವರು ಉತ್ತರಿಸಬೇಕಾದ ಪ್ರಶ್ನೆ ಇರುತ್ತದೆ. ನೀವು ಸಾಧ್ಯವಾದರೆ ಪುಟ 29ರಲ್ಲಿರುವ ಮುಖ್ಯ ಪ್ರಶ್ನೆಗಳನ್ನು ಉಪಯೋಗಿಸಬಹುದು.
- **ಮೆಲಕ್ಕೆ ಎಸೆದು ವೃತ್ತಹಾಕಿರಿ:** ಚಿಕ್ಕಗುಂಪಿನಾದ್ಯಂತ ಚೆಂಡು ಅಥವಾ ಮೃದುವಾದ ಬೇರೆ ವಸ್ತುವನ್ನು ಮೇಲಕ್ಕೆ ಎಸೆಯಬೇಕು ಮತ್ತು ಚೆಂಡನ್ನು ಮೇಲಕ್ಕೆ ಎಸೆದ ವ್ಯಕ್ತಿಯು ಸತ್ಯವೇದ ಕಥೆಯಲ್ಲಿ ಮುಂದೆ ನಡೆದ ಸಂಗತಿಯನ್ನು ಹೇಳಬೇಕಾಗುತ್ತದೆ. ಬಲೂನ್ ಉಪಯೋಗಿಸಿ ಆಟವಾಡುವುದು ಸಹ ಬಹಳ ಆಸಕ್ತಿಕರವಾಗಿರುತ್ತದೆ.
- **ಟೈಮರ್:** ಗಡಿಯಾರ, ಯಾರಾದರು ಲಕ್ಕಿಸುವುದು ಅಥವಾ ಕಾಲಮಾಪಕ ಉಪಯೋಗಿಸಿ, ಕೊಡಲ್ಪಟ್ಟಂತ ಸಮಯದಲ್ಲಿ ಗುಂಪಿನವರು ಕಥೆಯ ಎಷ್ಟು ಭಾಗವನ್ನು ಹೇಳಬಹುದೆಂದು ನೋಡಿರಿ.
- **ನಿಮಗೆ ಗಂಟುಹಾಕಿ:** 5 ಮೊಳ ಉದ್ದದ ಹಗ್ಗವನ್ನು ತೆಗೆದುಕೊಂಡು ಅದನ್ನು ವೃತ್ತವನ್ನಾಗಿ ಮಾಡಲು ಒಟ್ಟಾಗಿ ಕಟ್ಟಿಕೊಳ್ಳಿರಿ. ಮಕ್ಕಳು ಹಗ್ಗವನ್ನು ಎಳೆಯಲಿ. ನೀವು ಆಜ್ಞಾಪಿಸುವಾಗ, ಮಕ್ಕಳು ಹಗ್ಗವನ್ನು ಪ್ರದಕ್ಷಿಣವಾಗಿ ಸಾಗಿಸುವರು ಮತ್ತು ನೀವು "ನಿಲ್ಲಿ" ಎಂದು ಹೇಳಿದಾಗ, ಯಾರಲ್ಲಿ ಗಂಟು ಇದೆಯೋ ಅವರು ಸತ್ಯವೇದ ಕಥೆಯ ಪ್ರಶ್ನೆಗೆ ಉತ್ತರ ಕೊಡಬೇಕು ಅಥವಾ ಕಥೆಯಲ್ಲಿ ಮುಂದೇನಾಯಿತೆಂದು ಹೇಳಬೇಕು.
- **ಕಥೆಯ ಕಾರ್ಡುಗಳು:** ಪ್ರತ್ಯೇಕ ಹಾಳೆಯಲ್ಲಿ ಸತ್ಯವೇದ ಕಥೆಯ ಭಾಗಗಳನ್ನು ಬರೆಯಿರಿ ಅಥವಾ ಚಿತ್ರಬಿಡಿಸಿರಿ. ತರಗತಿಯಲ್ಲಿರುವ ಮಕ್ಕಳಿಗೆ ಅವುಗಳನ್ನು ಕೊಡಿರಿ ಮತ್ತು ಕಥೆಯ ಕ್ರಮದಲ್ಲಿ ಅವುಗಳನ್ನು ಜೋಡಿಸಲಿ. ಅದನ್ನು ಮಾಡಲು ಅಥವಾ 2 ಅಥವಾ ಹೆಚ್ಚು ಪ್ರತಿಗಳನ್ನು ಬರೆಯಲು ನೀವು ಅವರಿಗೆ ಸ್ವಲ್ಪ ಸಮಯ ಕೊಡಬಹುದು ಮತ್ತು ಮುಕ್ತಾಯಗೊಳಿಸುವುದರಲ್ಲಿ ಮೊದಲ ಗುಂಪಾಗಿರಲು ಅನೇಕ ಗುಂಪುಗಳನ್ನು ಮಾಡಿರಿ.
- **ಮ್ಯೂಸಿಕಲ್ ಚೇರ್:** ಗುಂಪಿನಲ್ಲಿರುವ ಜನರ ಸಂಖ್ಯೆಗಿಂತ ಒಂದು ಕಡಿಮೆ ಮಾಡಿ ಕುರ್ಚಿಗಳನ್ನು ವೃತ್ತಾಕಾರದಲ್ಲಿ ಏರ್ಪಡಿಸಿರಿ. ಸಂಗೀತವು ಆಡುತ್ತಿರುವಾಗ, ಜನರು ವೃತ್ತದ ಸುತ್ತಲೂ ಸಾಗುವರು. ಸಂಗೀತವು ನಿಂತಾಗ, ಪ್ರತಿಯೊಬ್ಬರೂ ಕುರ್ಚಿಯನ್ನು ಕಂಡುಕೊಳ್ಳುವರು. ನಿಂತಿರುವ ಒಬ್ಬರು ಕಥೆಯ ಮುಂದಿನ ಭಾಗವನ್ನು ಹೇಳುತ್ತಾರೆ. ಕಥೆಯನ್ನು ತಿರಿಗಿ ಹೇಳುವ ವರೆಗೆ ಮುಂದುವರೆಸಿ.
- **ಪಗಡೆ ಆಟ:** ಪ್ರತಿಯೊಂದು ಚಿಕ್ಕ ಗುಂಪು ವೃತ್ತಾಕರದಲ್ಲಿ ಕುಳಿತುಕೊಳ್ಳುತ್ತದೆ ಮತ್ತು ಅವರಿಗೆ ಒಂದು ಪಗಡೆ ಕೊಡಲಾಗುತ್ತದೆ. ಮೊದಲ ಮಗು ಪಗಡೆಯನ್ನು ಉರುಳಿಸುತ್ತದೆ, ಒಂದು ವೇಳೆ 2, 3, 4, ಅಥವಾ 5 ಉರುಳಿದಾಗ, ಅವರು ಕಥೆಯಲ್ಲಿ ನಡೆದ ಮೊದಲ ಸಂಗತಿಯನ್ನು ಹೇಳಬಹುದು. ಒಂದು ವೇಳೆ 1ನ್ನು ಉರುಳಿಸಿದರೆ, ಅವರು ತಪ್ಪಿಸಿಕೊಳ್ಳುತ್ತಾರೆ ಮತ್ತು ಏನಾಯಿತೆಂದು ಮುಂದಿನ ವ್ಯಕ್ತಿಯು ಹೇಳಬೇಕಾಗುತ್ತದೆ. ಒಂದು ವೇಳೆ ಅವರು 6ನ್ನು ಉರುಳಿಸಿದರೆ, ಅದು ವಿರುದ್ಧ ದಿಕ್ಕಿನಲ್ಲಿ ಸಾಗುತ್ತದೆ, ಮತ್ತೊಂದು ಕಡೆ ಇರುವ ವ್ಯಕ್ತಿಯು ಕಥೆಯಲ್ಲಿ ಮುಂದೇನಾಯಿತೆಂದು ಹೇಳಬೇಕಾಗುತ್ತದೆ. ಕಥೆಯು ಮುಗಿಯುವವರೆಗೆ ಮಕ್ಕಳು ತಮ್ಮ ಸರದಿಯನ್ನು ತೆಗೆದುಕೊಂಡು ಮುಂದುವರೆಸಲಿ.

ಕಲೆ

- **ಗ್ರಾಫಿಟಿ ಗೋಡೆ:** ಗುಂಪಾಗಿ ಮಕ್ಕಳು ಕಥೆಯನ್ನು ಹೇಳುವ ಪದಗಳನ್ನು ಬರೆಯಲಿ ಅಥವಾ ಚಿತ್ರಗಳನ್ನು ಬಿಡಿಸಲಿ.
- **ವೈಯಕ್ತಿಕ ಚಿತ್ರಬಿಡಿಸುವುದು:** ಮಕ್ಕಳು ಕಥೆಯಲ್ಲಿ ಹೆಚ್ಚಾಗಿ ಇಷ್ಟಪಟ್ಟ ಭಾಗದ ಚಿತ್ರವನ್ನು ಬಿಡಿಸಿ ಬಣ್ಣ ಹಚ್ಚಲಿ.
- **ಟೀ ಷರಟ್ ರೇಖಾಚಿತ್ರ:** ಪ್ರತಿಯೊಂದು ಮಗುವು ಕಥೆಯ ಮುಖ್ಯ ಭಾಗಗಳನ್ನು ಹೇಳುವ ಟೀ ಷರಟ್‌ನ ಮುಂಭಾಗದಲ್ಲಿ ರೇಖಾಚಿತ್ರವನ್ನು ಬಿಡಿಸಲಿ.
- **ಪೈಪ್ ಸ್ವಚ್ಚಗೊಳಿಸುವವರು ಮತ್ತು ಡಿಓಹೆಚ್/ಜೇಡಿಮಣ್ಣು ಆಟ:** ಕಥೆಯನ್ನು ಕಟ್ಟಿ ತಿರಿಗಿ ಹೇಳಲು ಇವುಗಳನ್ನು ಅಥವಾ ಲಭ್ಯವಿರುವ ಬೇರೆ ಕರಕೌಶಲ್ಯದ ವಸ್ತುಗಳನ್ನು ಉಪಯೋಗಿಸಿರಿ.
- **ಜಾಹಿರಾತು ಫಲಕ:** ಸತ್ಯವೇದ ಕಥೆಯ ರಸ್ತೆಬದಿಯ ಜಾಹಿರಾತು ಫಲಕದ ರೇಖಾಚಿತ್ರವನ್ನು ಬಿಡಿಸಿ ಅಥವಾ ಅದರೊಂದಿಗೆ ಜೋಡಿಸುವುದರಿಂದ ನಿಮ್ಮನ್ನು ನೀವು ಹೇಗೆ ನೋಡುವಿರಿ.
- **ಊಹಿಸಿ ಚಿತ್ರಬಿಡಿಸುವ ಆಟ:** ಕಥೆಯ ವಿವಿಧ ಭಾಗಗಳು ಕೊಡಲ್ಪಟ್ಟಿರುತ್ತವೆ ಮತ್ತು ಯಾರಾದರು ಏನೆಂದು ಊಹಿಸುವವರೆಗೆ ಒಬ್ಬ ವ್ಯಕ್ತಿಯು ಅದರ ಚಿತ್ರಬಿಡಿಸಬೇಕು.

ನಾಟಕ

- **ಹಾಗೆ ನಟಿಸಿ:** ಗುಂಪಿನಲ್ಲಿರುವ ಮಕ್ಕಳಿಗೆ ವಿವಿಧ ಭಾಗಗಳನ್ನು ಒಪ್ಪಿಸಿರಿ. ಅವರು ಅಭ್ಯಾಸ ಮಾಡಲಿ ನಂತರ ಉಳಿದ ಗುಂಪುಗಳಿಗೆ ಕಥೆಯನ್ನು ನಟಿಸಿ ತೋರಿಸಲಿ.
- **ಮಕ್ಕಳ ಕಥಾಫಲಕಗಳು:** ಉಣ್ಣೆ ಬಟ್ಟೆಯ ವಿವಿಧ ಪಾತ್ರಗಳನ್ನು ಉಪಯೋಗಿಸಿ, ಮಕ್ಕಳು ಕಥಾಫಲಕದಲ್ಲಿ ಚಿತ್ರಗಳನ್ನು ಅಂಟಿಸುವುದರ ಮೂಲಕ ಕಥೆಯನ್ನು ತಿರಿಗಿ ಹೇಳಲಿ.
- **ಪದಬಂಧ ಸಮಸ್ಯೆಯಾಟ:** ಪದಗಳನ್ನು ಉಪಯೋಗಿಸದೆ, ಮಕ್ಕಳು ವಿವಿಧ ದೃಶ್ಯಗಳನ್ನು ನಟಿಸಿದಾಗ, ನೋಡುವ ಜನರು ಕಥೆಯ ಯಾವ ಭಾಗವನ್ನು ಅವರು ಮಾಡುತ್ತಿದ್ದಾರೆಂದು ಊಹಿಸಿ ಹೇಳಬೇಕು.
- **ಸತ್ಯವೇದ ಕಥೆಯನ್ನು** ತಿರಿಗಿ–ಓದಬೇಕು ಮತ್ತು ಕಥೆಯಾದ್ಯಂತ ಮರುಕಳಿಸುವ ಪದಗಳಿಗೆ ಅಥವಾ ಕ್ರಿಯೆಗಳಿಗೆ ವಿವಿಧ ಶಬ್ಧದಗಳ ಪರಿಣಾಮದಿಂದ ಮತ್ತು/ಅಥವಾ ಚಲನೆಗಳಿಂದ ಮುಂಬರಬೇಕು.
- **ವಸ್ತು(ಗಳು) (ಉದಾ: ಶಿರೋವಸ್ತ್ರ, ಹಗ್ಗ):** ಕಥೆಯನ್ನು ಹೇಳಲು ಅವರು ಒಂದು ವಸ್ತುವನ್ನು ಎಷ್ಟು ಸಾರಿ ಉಪಯೋಗಿಸಬಹುದೆಂದು ನೋಡಿರಿ. ಕಥೆಯನ್ನು ತಿರಿಗಿಹೇಳುವುದರಲ್ಲಿ ಪ್ರತಿಯೊಂದು ಗುಂಪಿಗೆ 3 ವಿವಿಧ ವಸ್ತುಗಳನ್ನು ಮನಬಂದಂತೆ ಕೊಡಬಹುದು.
- **ಚಲನೆಗಳು:** ಕಥೆಯ ಪ್ರತಿಯೊಂದು ಭಾಗವನ್ನು ದೃಷ್ಟಾಂತಪಡಿಸಲು ವಿವಿಧ ಚಲನೆಗಳನ್ನು ಉಪಯೋಗಿಸಿರಿ. ಕಥೆಯಲ್ಲಿ ಬರುವ ಕ್ರಮದಲ್ಲಿ ಪ್ರತಿಯೊಂದು ಮಗುವಿಗೆ ಅಥವಾ ಚಿಕ್ಕ ಗುಂಪಿಗೆ ಒಂದು ಚಲನೆಯನ್ನು ವಹಿಸಿರಿ ಮತ್ತು ಅವರು ತಮ್ಮ ಚಲನೆಯನ್ನು ಪ್ರದರ್ಶಿಸಬೇಕು.
- **ಮಾನವ ಸ್ಲೈಡ್ ಪ್ರದರ್ಶನ:** ಪರದೆಯಾಗಿ ಉಪಯೋಗಿಸಲು ಉದ್ದನಾದ ಬಟ್ಟೆಯನ್ನು ಕಂಡುಕೊಳ್ಳಿರಿ. ಇಬ್ಬರು ಮಕ್ಕಳು ಅದನ್ನು ಹಿಡಿದುಕೊಳ್ಳಬಹುದು ನಂತರ ಅವರಿಗೆ ಹೇಳಿದಾಗ ಅದನ್ನು ಬಿಟ್ಟುಬಿಡಿರಿ. ಕಥೆಯಲ್ಲಿ ಪಾತ್ರವಹಿಸಲು ಅನೇಕ ಮಕ್ಕಳನ್ನು ಆರಿಸಿಕೊಳ್ಳಿರಿ. ಕಥೆಯ ಪ್ರತಿಯೊಂದು ಭಾಗಕ್ಕೆ, ಪರದೆಯು ಹಿಡಿಯಲ್ಪಟ್ಟಿರುವಾಗ, ಕಥೆಯ ಆ ಭಾಗದ ಚಿತ್ರ ಅಥವಾ ಚಿತ್ರಕಲೆಯಲ್ಲಿರುವವರಂತೆ ಮಕ್ಕಳು ಸ್ಥಾನಗಳನ್ನು ತೆಗೆದುಕೊಳ್ಳಲಿ. ಅವರು ಪರಿಪೂರ್ಣವಾಗಿ ಅಲುಗಾಡದೆ ನಿಂತಿರಬೇಕು ನಂತರ ಬಟ್ಟೆಯು ಬಿಟ್ಟುಬಿಡಬೇಕು ಇದರಿಂದ ಉಳಿದ ಗುಂಪಿನವರು ಇದನ್ನು ನೋಡಬಹುದು. ನೀವು ಕಥೆಯನ್ನು ಹೇಳುತ್ತಿರುವಾಗ ಪ್ರತಿಯೊಂದು ದೃಶ್ಯವು ಬದಲಾಗುತ್ತದೆ.
- **ಕೈಗೊಂಬೆಗಳು:** ಕಥೆಯನ್ನು ತಿರಿಗಿ ಹೇಳಲು ಸಾಕ್ಸ್, ಹಾಳೆಯ ತಟ್ಟೆಗಳು, ಹಾಳೆಯ ಲೋಟಗಳು ಮತ್ತು ಕಡ್ಡಿಗಳಿಂದ ಸರಳವಾದ ಕೈಗೊಂಬೆಗಳನ್ನು ಸೃಷ್ಟಿಸಿರಿ.

ಸಂಗೀತ

- **ಪಠಿಸಿದ ಸಂಗೀತದ ಪುನರಾವರ್ತನೆ:** ಕಥೆಯ ಮುಖ್ಯ ಘಟನೆಗಳನ್ನು ಸಂಗೀತದಲ್ಲಿ ಪಠಿಸಲು ಮಕ್ಕಳನ್ನು ನಡೆಸಿರಿ.
- **ಚಿರಪರಿಚಿತ ಹಾಡಿಗೆ ಹೊಸ ಪದಗಳು:** ಮಕ್ಕಳ ಸರಳ ಹಾಡನ್ನು ತೆಗೆದುಕೊಂಡು ಪದಗಳನ್ನು ಬದಲಾಯಿಸಲಿ ಇದರಿಂದ ಸತ್ಯವೇದ ಕಥೆಯನ್ನು ಹಾಡಿನ ಮೂಲಕ ಹೇಳಲಾಗುತ್ತದೆ.
- **ತಾಳ:** ಗುಂಪು ಒಂದು ತಾಳದಿಂದ ಮುಂಬರಲಿ, ನಂತರ ನೀವು ತಾಳ ಹಾಕುವಾಗ ಕಥೆಯನ್ನು ಹೇಳಿರಿ.
- **ನೃತ್ಯ:** ಕಥೆಯನ್ನು ಹೇಳುವ ನೃತ್ಯವನ್ನು ಸೃಷ್ಟಿಸಿ. ಅದಕ್ಕೆ ಹಿನ್ನಲೆಯ ಸಂಗೀತವನ್ನು ಹಾಕಿರಿ.

ಬರೆಯುವುದು

- **ಕಥೆ ಪುಸ್ತಕಗಳು:** ಕಥೆ ಪುಸ್ತಕ (ಅಥವಾ ಹಾಸ್ಯಪತ್ರಿಕೆ) ಮಾದರಿಯಲ್ಲಿ ಮಗುವು ಚಿತ್ರಗಳು ಮತ್ತು/ಅಥವಾ ಪದಗಳ ಮೂಲಕ ಕಥೆಯನ್ನು ತಿರಿಗಿ ಹೇಳುತ್ತದೆ.
- **ದಿನಚರಿ:** ಮಕ್ಕಳು ಕಥೆಯಲ್ಲಿ ಏನಿತ್ತು ಮತ್ತು ಅವರಿಗೆ ಅದರ ಅರ್ಥವೇನಾಗಿತ್ತು ಎಂದು ಮಕ್ಕಳು ಕೇವಲ ಮೌನವಾಗಿ ಕುಳಿತು ದಿನಚರಿ ಮಾಡಲು ಅವಕಾಶ ಕೊಡಲ್ಪಟ್ಟಿರುತ್ತದೆ.
- **ಹತ್ತು ಉತ್ತಮವಾದವು:** ಮಕ್ಕಳು ಗುಂಪಾಗಿ ಅಥವಾ ವ್ಯಕ್ತಿಗತವಾಗಿ, ಕಥೆಯ ಉತ್ತಮವಾದ ಹತ್ತು ಘಟನೆಗಳನ್ನು ಬರೆಯಲಿ.
- **ಮುಂದೇನು:** ಅವರು ಕಥೆ ಕೇಳಿದವುಗಳಿಂದ ಏನು ಮಾಡಬೇಕೆಂದು ದೇವರು ಬಯಸುತ್ತಾನೆಂದು ಪ್ರತಿಯೊಂದು ಮಗುವು ಬರೆಯಲಿ.
- **ಹೋಲಿಕೆಗಳು:** ಕಥೆಯಲ್ಲಿ ಹೇಳಲ್ಪಟ್ಟ ಒಂದು ಪಾತ್ರವನ್ನು ಪ್ರತಿಯೊಂದು ಮಗುವು ಆರಿಸಿಕೊಳ್ಳಲಿ. ಅವರು ಸತ್ಯವೇದದ ವ್ಯಕ್ತಿಗಳಿಗಿಂತ ಹೇಗೆ ಸಮಾನರಾಗಿದ್ದಾರೆ ಮತ್ತು ಹೇಗೆ ವ್ಯತ್ಯಾಸವಾಗಿದ್ದಾರೆ ಎಂದು ಒಂದು ಪಟ್ಟಿಯನ್ನು ಸಿದ್ಧಪಡಿಸಲಿ.

# ಅಧಿವೇಶನ #6
# ಕಳೆದುಹೋದ ಕುರಿ

*ಕಳೆದುಹೋದ ಕುರಿಯ ಕಥೆಯನ್ನು ಪ್ರತಿಯೊಬ್ಬರು ಹೇಗೆ ಓದಿದರು? ನೀವು ಯಾರಿಗಾದರೂ ಕಥೆಯನ್ನು ಹೇಳಲು ಸಾಧ್ಯವಾಯಿತೋ? ನೀವು ಹೀಗೆ ಮಾಡಿದಾಗ ಏನಾಯಿತೆಂದು ನಮಗೆ ಹೇಳುವಿರಾ?*

*ಈ ಅಧಿವೇಶನದಲ್ಲಿ ನಾವು ಕಳೆದುಹೋದ ಕುರಿಯ ಪಾಠವನ್ನು ಸಿದ್ಧಪಡಿಸುವ ಮತ್ತು ಹೇಳುವ ಕಾರ್ಯವಿಧಾನವನ್ನು ತಿರಿಗಿ ನೋಡಲಿದ್ದೇವೆ. 3–4 ಜನರು ಚಿಕ್ಕಗುಂಪಾಗಿ ಸೇರಿಕೊಳ್ಳಲಿ.*

*ನಿಮ್ಮ ಗುಂಪಿನಲ್ಲಿ ಸ್ವಲ್ಪ ಸಮಯ ತೆಗೆದುಕೊಂಡು ನಿಮಗೋಸ್ಕರ ಮತ್ತು ನೀವು ಕಥೆ ಹೇಳುವ ಮಕ್ಕಳಿಗಾಗಿ **ಪ್ರಾರ್ಥಿಸಿರಿ.** (5 ನಿಮಿಷ)*

*ಪ್ರತಿಯೊಂದು ಗುಂಪಿನಲ್ಲಿ ಇಬ್ಬರು ತಮ್ಮ ಸತ್ಯವೇದದಿಂದ ಕಥೆಯನ್ನು ಜೋರಾಗಿ **ಓದಲಿ** (5 ನಿಮಿಷ).*

*ನಿಮ್ಮ ಗುಂಪುಗಳಲ್ಲಿ, ಚುರುಕಾದ ಆರಂಭದ ಚಟುವಟಿಕೆ ಅಥವಾ ಪ್ರಶ್ನೆಯು ನಿಮ್ಮ ಪಾಠವನ್ನು ಆರಂಭಿಸಲು ಉತ್ತಮವಾಗಿರುತ್ತದೆ. ಇಡೀ **ತರಗತಿಯೊಂದಿಗೆ** ನೀವು ಹಂಚಿಕೊಳ್ಳಲು ಬಯಸುವ ಸಂಗತಿ ಯಾವುದು? (10 ನಿಮಿಷಗಳು)*

*ನೀವು ಕಥೆಯನ್ನು ಹೇಳುವುದಕ್ಕಿಂತ ಮುಂಚೆ ಮಕ್ಕಳಿಗೆ ತಿಳಿದುಕೊಳ್ಳಲು ಯಾವ ಪೀಠಿಕೆಗಳು ಮುಖ್ಯವಾಗಿವೆ? (10 ನಿಮಿಷಗಳು)*

*ಪ್ರತಿಯೊಬ್ಬ ವ್ಯಕ್ತಿಯು ತಮಗೆ ಸಾಧ್ಯವಾದಷ್ಟು ಉತ್ತಮವಾಗಿ ಕಥೆಯನ್ನು **ಹೇಳಲಿ.** (10 ನಿಮಿಷಗಳು)*

*ಈ ಕಥೆಯೊಂದಿಗೆ ಉತ್ತಮವಾಗಿ ಕಾರ್ಯಮಾಡುವ ಪುನಃ ಹೇಳುವ ಚಟುವಟಿಕೆ ಯಾವುದಾಗಿದೆ? ನೀವು ಗುಂಪಾಗಿ ಮಾಡಬಹುದಾದ ಒಂದು ಚಟುವಟಿಕೆಯನ್ನು ಆರಿಸಿಕೊಳ್ಳಿರಿ. (10 ನಿಮಿಷಗಳು)*

# ಅಧಿವೇಶನ #7
# ಪ್ರಶ್ನೆಗಳನ್ನು ಕಂಡುಹಿಡಿಯಿರಿ ಮತ್ತು ಪ್ರತ್ಯುತ್ತರ ಕೊಡಿರಿ

*ಪ್ರಶ್ನೆಗಳನ್ನು ಕೇಳುವುದು ಮತ್ತು ಅದನ್ನು ಹಿಂಬಾಲಿಸುವ ಚರ್ಚೆಯು ಕಥೆ ಹೇಳುವ ಕಾರ್ಯವಿಧಾನದಲ್ಲಿ ಪ್ರಾಮುಖ್ಯವಾಗಿದೆ! ಕೇವಲ ಮಾಹಿತಿಯನ್ನು ತಿಳಿದುಕೊಳ್ಳುವುದು ಬಹುಪ್ರಾಮುಖ್ಯವಾದ ಸಂಗತಿಯಲ್ಲ. ಕಥೆಯು ಅವರಿಗೆ ಹೇಗನಿಸಿತೆಂದು ಕೆಲವು ಸತ್ಯಸಂಗತಿಗಳನ್ನು ನೆನಪಿಸಿಕೊಳ್ಳಲು ನಾಯಕನ್ನು ಗುಂಪನ್ನು ನಡೆಸಬೇಕು. ಇದು ಆತನ ಕಾರ್ಯವನ್ನು ಮಾಡಲು ಪವಿತ್ರಾತ್ಮನನ್ನು ನಡೆಸುತ್ತದೆ ಮತ್ತು ಒಬ್ಬ ವ್ಯಕ್ತಿಯ ಜೀವಿತವನ್ನು ಮಾರ್ಪಡಿಸುತ್ತದೆ ಹೀಗೆ ಅವರು ಹೆಚ್ಚಾಗಿ ಯೇಸು ಕ್ರಿಸ್ತನ ಹಾಗೆ ಆಗುತ್ತಿದ್ದಾರೆ. ಜನರನ್ನು ಆಳವಾದ ತಿಳುವಳಿಕೆಗೆ ನಡೆಸಲು ಮತ್ತು ಹೃದಯ ಮಾರ್ಪಡುವುದಕ್ಕಾಗಿ ಯೇಸು ತಾನೇ ಯಾವಾಗಲೂ ಪ್ರಶ್ನೆಗಳನ್ನು ಕೇಳುತ್ತಿದ್ದನು. ಚರ್ಚೆಗೆ ಅವಕಾಶ ಮಾಡಿಕೊಡುವುದು ಸತ್ಯವೇದದಲ್ಲಿರುವ ನಿಧಿಗಳನ್ನು ಕಂಡುಹಿಡಿಯಲು ಮಕ್ಕಳಿಗೆ ಸಹಾಯಮಾಡುತ್ತದೆ ಮತ್ತು ಸತ್ಯವೇದವನ್ನು ಅವರ ಹೃದಯದೊಳಗೆ ನೆಲೆಗೊಳಿಸುತ್ತದೆ.*

*ನೀವು ಪ್ರಶ್ನೆಗಳನ್ನು ಕೇಳುವಾಗ, ಜನರು ತಮಗಾಗಿ ದೇವರ ಸತ್ಯಗಳನ್ನು ಕಂಡುಹಿಡಿಯಲು ಆರಂಭಿಸುವರು; ಇದನ್ನು ಕೇವಲ ಅವರಿಗೆ ಹೇಳುವುದು ಮಾತ್ರವಲ್ಲ. ಇದು ನಂತರ ಅವರ ಜೀವಿತ ಮತ್ತು ಹೃದಯದ ಆಳಕ್ಕೆ ಇಳಿಯುತ್ತದೆ.* ***ಇದು ನೀವು ತಿಳಿದಿರುವ ಸಂಗತಿಯನ್ನು ಕುರಿತಾಗಿಯಲ್ಲ – ಇದು ತಮಗಾಗಿ ದೇವರ ಸತ್ಯಗಳನ್ನು ಕಂಡುಹಿಡಿಯುವುದಾಗಿದೆ! ಪ್ರಶ್ನೆಗಳನ್ನು ಕಂಡುಹಿಡಿಯಿರಿ*** *ಈ ಭಾಗಗಳಲ್ಲಿ ಪರಸ್ಪರ ಚರ್ಚೆಯನ್ನು ಕಟ್ಟಿರಿ:*

- **ತಲೆ (ಸತ್ಯಾಂಶಗಳು)** ಈ ಪ್ರಶ್ನೆಗಳು ಕಥೆಯಲ್ಲಿ **ಏನಾಯಿತೆಂದು** ನೆನಪಿನಲ್ಲಿಡಲು ಈ ಪ್ರಶ್ನೆಗಳು ನಮಗೆ ಸಹಾಯ ಮಾಡುತ್ತವೆ
- **ಹೃದಯ (ಭಾವನೆಗಳು)** ತಮ್ಮಲ್ಲಿ ಕಥೆಯು ಉಂಟುಮಾಡಿರುವ ವಿವಿಧ ಭಾವನೆಗಳನ್ನು ಅನುಭವಿಸಲು ಜನರಿಗೆ ಸಹಾಯಮಾಡುವದಕ್ಕಾಗಿ ಸಾಕಷ್ಟು ಸಮಯವನ್ನು ಕಳೆಯಿರಿ ಮತ್ತು "**ಹಾಗಾದರೆ ಏನು**" ಅಥವಾ "**ಯಾಕೆ**" ಎಂಬುದನ್ನು ಉತ್ತರಿಸಿರಿ. ಸೂಕ್ಷ್ಮವಾಗಿರ್ರಿ ಮತ್ತು ಜನರ ಪ್ರತಿಕ್ರಿಯೆಗಳಿಗೆ ಬಹಳ ಆಳವಾಗಿ ಹೋಗಲು ಪವಿತ್ರಾತ್ಮನ ನಡೆಸುವಿಕೆಯನ್ನು ಅನುಸರಿಸಿರಿ. ಮೊದಲ ಪ್ರತಿಕ್ರಿಯೆಯಿಂದ ಯಾವಾಗಲೂ ತೃಪ್ತಿಹೊಂದಬೇಡಿರಿ.

*ಕೆಲವು ಪ್ರತಿಯೊಬ್ಬ ವ್ಯಕ್ತಿಯು ವೈಯಕ್ತಿಕ ಪ್ರತಿಕ್ರಿಯೆಯನ್ನು ತೋರಿಸುವುದಕ್ಕಾಗಿ* ***ಪತ್ಯುತ್ತರದ ಪ್ರಶ್ನೆಗಳಿಂದ*** *ಚರ್ಚೆಯು ಕೊನೆಗೊಳ್ಳುತ್ತದೆ. ಇಲ್ಲಿ ಪವಿತ್ರಾತ್ಮನು ಗುಂಪಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೆ ತೋರಿಸಿಕೊಳ್ಳುತ್ತಿದ್ದಾನೆ ಮತ್ತು ಮಾತನಾಡುತ್ತಿದ್ದಾನೆ. ಇದು ಪ್ರತಿಯೊಬ್ಬ ವ್ಯಕ್ತಿಗೆ ವ್ಯತ್ಯಾಸವಾಗಿರಬಹುದು. ಇದು ಒಳ್ಳೆಯದು ಯಾಕೆಂದರೆ ಪವಿತ್ರಾತ್ಮನು ಕಾರ್ಯನಿರತನಾಗಿದ್ದಾನೆ.*

*ಕೆಲವೊಮ್ಮೆ ನೀವು ಸತ್ಯವೇದ ಕಥೆ ಹೇಳುವ ವಿಧಾನದ ಮೂಲಕ ಕಥೆಯನ್ನು ಉಪಯೋಗಿಸಿಕೊಂಡು ನಿರ್ದಿಷ್ಟವಾದ ವಿಷಯ ಅಥವಾ ಚಿಂತೆಯನ್ನು ಕುರಿತು ಹೇಳುತ್ತಿರಬಹುದು. ಇಲ್ಲಿ ರೀತಿಯಲ್ಲಿ ನಡೆಸಲು ಕೆಲವು ಪ್ರಶ್ನೆಗಳನ್ನು ಕೊಡುವುದು ಒಳ್ಳೆಯದಾಗಿರಬಹುದು ಆದರೆ ಕೆಲವು ಉತ್ತರಗಳನ್ನು ಒತ್ತಾಯದಿಂದ ಅಪೇಕ್ಷಿಸಬಾರದು. ಪುನರಾವರ್ತನೆ ಮತ್ತು ಅನುಸರಣೆ ಪ್ರಾಮುಖ್ಯವಾಗಿದೆ. ದೇವರು ಹೇಳಿದ ಮಾತಿಗೆ ಪ್ರತಿಯೊಬ್ಬ ವ್ಯಕ್ತಿಯು ತಮ್ಮ ವಿಧೇಯತ್ವದಲ್ಲಿ ಹೇಗೆ ಇದ್ದಾರೆಂದು ನೋಡಿರಿ. ಈ ಪ್ರಶ್ನೆಗಳು ಇವುಗಳೊಂದಿಗೆ ಕಾರ್ಯನಡೆಸುತ್ತವೆ:*

- **ಕೈಗಳು (ಅನ್ವಯಗಳು) – "ಈಗ ಏನು"**

***ಎಲ್ಲಾ ಪ್ರಶ್ನೆಗಳಿಗೆ ಉದಾಹರಣೆಗಳನ್ನು ಪುಟ 29–30ರಲ್ಲಿ ಕಂಡುಕೊಳ್ಳಬಹುದು.*** *ನಿಮ್ಮ ಪಾಠಗಳನ್ನು ಸಿದ್ಧಪಡಿಸಿಕೊಂಡು ಬೇರೆಯವುಗಳನ್ನು ತುಂಬಿಸಿ, ಆರಂಭಿಸಲು ಈ ಕೆಳಗಿನ ಪ್ರಶ್ನೆಗಳನ್ನು ಉಪಯೋಗಿಸಬಹುದು.* ***ಈ ಪ್ರಶ್ನೆಗಳ ಪಟ್ಟಿಯು ಹಾಗೆಯ ಹಾದುಹೋಗುವುದಕ್ಕಾಗಿಯಲ್ಲ ಆದರೆ ಒಬ್ಬ ವ್ಯಕ್ತಿಯ ಹೃದಯದಲ್ಲಿ ಮತ್ತು ಜೀವಿತದಲ್ಲಿ ಪವಿತ್ರಾತ್ಮನು ಬಯಸುತ್ತಿರುವುದನ್ನು ಕಂಡುಹಿಡಿಯುವದಾಗಿದೆ.***

**ಸಾಧ್ಯತೆಯ ಮುಖ್ಯ ಪ್ರಶ್ನೆಗಳು:**

- ಕಥೆಯನ್ನು ಹೇಳುತ್ತಿರುವಾಗ ನೀವು ಯಾವ ಸಂಗತಿಯನ್ನು ಕುರಿತು ಆಶ್ಚರ್ಯವಾಯಿತು? (ತಲೆ/ಹೃದಯ)
- ಕಥೆಯ ಯಾವ ಭಾಗವನ್ನು ನೀವು ನಿಜವಾಗಿ ಇಷ್ಟಪಟ್ಟಿರಿ? ಅದನ್ನು ಕುರಿತು ನೀವು ಏನನ್ನು ಇಷ್ಟಪಟ್ಟಿರಿ? (ತಲೆ)
- ಯಾವುದಾದರು ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಕಠಿಣಕರ ಅಥವಾ ಕಷ್ಟಕರವಾಗಿತ್ತೋ?
- ಜನರು ಯಾವ ಆಯ್ಕೆಗಳನ್ನು ಮಾಡುತ್ತಿದ್ದರು? ಅವರು ಬೇರೆ ಏನನ್ನು ಮಾಡಬಹುದಾಗಿತ್ತು? ಅವರು ಮಾಡಿದ ಆಯ್ಕೆಗಳ ನಿಮಿತ್ತ ಏನಾಯಿತು? (ತಲೆ)
- ನಾನು ದೇವರನ್ನು ಕುರಿತು ಕಲಿನ ವಿಷಯವೆಂದರೆ.... ಆತನ (ಸೇವೆ) ಮಾಡಲು ನೀವು ಹೇಗೆ ಪ್ರೀತಿಸುವಿರಿ ಮತ್ತು ಜೀವಿಸುವಿರಿ ಎಂಬುದರಲ್ಲಿ ಇದು ಯಾವ ವ್ಯತ್ಯಾಸವನ್ನು ಉಂಟುಮಾಡುತ್ತದೆ? (ಹೃದಯ)
- ನೀವು ದೇವರನ್ನು ಹೀಗೆ ತಿಳಿದುಕೊಳ್ಳಲು ಬಯಸುವಿರಾ? ದೇವರು ನಿಮಗೆ ಸಹಾಯ ಮಾಡಬಹುದಾದ ಯಾವುದಾದು ಸಂಗತಿ ಈಗ ನಿಮ್ಮ ಜೀವಿತದಲ್ಲಿ ನಡೆಯುತ್ತಿದೆಯಾ?
- ಈ ದಿನದ ಕಥೆಯ ಪರಿಣಾಮವಾಗಿ ದೇವರು ನಿಮಗೆ ಏನು ಮಾಡಬೇಕೆಂದು ಬಯಸುತ್ತಿದ್ದಾನೆ? (ಹಸ್ತ)

**ಬಲಪಡಿಸಲು ಅಂಶಗಳು:**

- ಆರಂಭದ ಮುಖ್ಯ ಪ್ರಶ್ನೆಗಳನ್ನು ಬಿಟ್ಟು, ನೀವು ಒಂದು ಸರಿಯಾದ ಉತ್ತರವನ್ನು ನೋಡುತ್ತಿಲ್ಲ. ನಾವು ತೆರೆದ–ಮುಕ್ತಾಯದ ಪ್ರಶ್ನೆಯನ್ನು ಕೇಳಿದ ನಂತರ, ಅನೇಕ ಜನರು ಪ್ರತಿಕ್ರಿಯಿಸಲು ಅನುಮತಿಸಿ. ನೆನಪಿಡಿ, ಪ್ರತಿಯೊಬ್ಬರ ಪ್ರತಿಕ್ರಿಯೆಗಳ ಮೂಲಕ ಕಲಿಕೆ ಮತ್ತು ಪ್ರಕಟನೆ ಉಂಟಾಗಲು ಎದುರುನೋಡುತ್ತಿದ್ದೇವೆ.
- ಕೆಲವು ಪ್ರತಿಕ್ರಿಯೆಗಳಿಗೆ ನೀವು ಬೇರೆ ಶೋಧಿಸುವ ಪ್ರಶ್ನೆಗಳಿಂದ ಅನುಸರಣೆ ಮಾಡಲು ಬಯಸಬಹುದು. ಆರಂಭದ ಪ್ರತಿಕ್ರಿಯೆಯಿಂದ ಪವಿತ್ರಾತ್ಮನು ಬೇರೆ ಏನನ್ನು ಪ್ರಕಟಿಸಬೇಕೆಂದು ಬಯಸುತ್ತಿದ್ದಾನೆಂದು ನೋಡಿರಿ. ಇಂಥ ಪ್ರಶ್ನೆಗಳನ್ನು ಕೇಳಿರಿ: "ಈ ರೀತಿ ಭಾವಿಸಲು ಅಥವಾ ಆಲೋಚಿಸುವಂತೆ ಮಾಡಿದ ಸಂಗತಿ ಯಾವುದು?" ಅಥವಾ "ನಿಮಗೆ ಇದು ಯಾಕೆ ಪ್ರಾಮುಖ್ಯವಾಗಿದೆ?" ಜನರಿಗೆ ಸುರಕ್ಷಿತವಾದ ವಾತಾವರಣವನ್ನು ಕಾಪಾಡಿಕೊಳ್ಳಲು ಸೂಕ್ಷ್ಮವಾಗಿರಿ.
- ನಾಯಕರಾಗಿ ನೀವು ಪ್ರಶ್ನೆಯನ್ನು ಕೇಳಿದಾಗ, ಇದನ್ನು ಚರ್ಚೆಗಾಗಿ ಗುಂಪಿಗೆ ಹಾಕಿರಿ. ಆಗಾಗ್ಗೆ ನಾಯಕನೇ ಮೊದಲು ಪ್ರತ್ಯುತ್ತರವನ್ನು ಕೊಟ್ಟಾಗ, ಸಂಭಾಷಣೆಯು ಮುಕ್ತಾಯಗೊಳ್ಳುತ್ತದೆ. ಅದನ್ನು ಗುಂಪಿಗೆ ಹಿಂದಿರುಗಿಸುವುದು ಗುಂಪು ಆಲೋಚಿಸಲು ಮತ್ತು ಇನ್ನು ಹೆಚ್ಚಿನ ಪರಿಜ್ಞಾನವನ್ನು ಕೊಡಲು ಅವಕಾಶ ಕೊಡುತ್ತದೆ.
- ಒಂದು ವೇಳೆ ನಿಮಗೆ ಪ್ರಶ್ನೆ ಕೇಳಿದಾಗ ಅದಕ್ಕೆ ನಿಮಲ್ಲಾಗಲಿ ಅಥವಾ ಗುಂಪಿನಲ್ಲಾಗಲಿ ಉತ್ತರ ಇಲ್ಲದ್ದಿದ್ದರೆ, ನೀವು ಮನೆಗೆ ಹೋಗಿ ಉತ್ತರವನ್ನು ಕಂಡುಹಿಡಿಯಬೇಕು.

**ಭಾಗವಹಿಸುವವರು 3–4 ಜನರ ಚಿಕ್ಕ ಗುಂಪಿನಲ್ಲಿ ಸೇರಿಕೊಳ್ಳಲಿ. ಯೇಸು ಮತ್ತು ಪೇತ್ರನು ನೀರಿನಲ್ಲಿ ನಡೆದ ಕಥೆಯನ್ನು ಒಬ್ಬ ವ್ಯಕ್ತಿಯು ಹೇಳುವಂತೆ ಮಾಡಿರಿ. ಅವರು ಗುಂಪಾಗಿ ಈ ಪ್ರಶ್ನೆಗಳಿಂದ ಮುಂಬರಲಿ ಮತ್ತು ಕೇಳುವುದನ್ನು ಅಭ್ಯಾಸಮಾಡಿಕೊಳ್ಳಲಿ:**

- **3 ತಲೆ ಪ್ರಶ್ನೆಗಳು**
- **5 ಹೃದಯದ ಪ್ರಶ್ನೆಗಳು**
- **2 ಹಸ್ತ/ಪ್ರತ್ಯುತ್ತರದ ಪ್ರಶ್ನೆಗಳು**

**ಈಗ ಗುಂಪುಗಳು ಪ್ರಾಯೋಗಿಕವಾಗಿ ಒಟ್ಟಾಗಿ ಚರ್ಚಿಸುವದಕ್ಕಾಗಿ ಸಮಯವನ್ನು ಕಳೆಯಲು ಇದು ಸಮಯವಾಗಿದೆ. ಗುಂಪಿನವರು ಒಬ್ಬ ವ್ಯಕ್ತಿಯನ್ನು ನಾಯಕನಾಗಿರಲು ಆರಿಸಿಕೊಳ್ಳಲಿ. ಈ ಮೇಲಣ ಮುಖ್ಯ ಪ್ರಶ್ನೆಗಳನ್ನು ಮತ್ತು ಈಗ ಉದ್ಭವಿಸಿದ ಪ್ರಶ್ನೆಗಳನ್ನು ಉಪಯೋಗಿಸಿ, ತಮ್ಮ ಚಿಕ್ಕ ಗುಂಪಿನೊಂದಿಗೆ ನಾಯಕನು ಚರ್ಚೆಯನ್ನು ನಡೆಸಲಿ.**

# ಪ್ರಶ್ನೆಗಳನ್ನು ಕಂಡುಹಿಡಿಯಿರಿ ಮತ್ತು ಪ್ರತ್ಯುತ್ತರ ಕೊಡಿರಿ

## ಪ್ರಶ್ನೆಗಳನ್ನು ಕಂಡುಹಿಡಿಯಿರಿ – ತಲೆ (ಸತ್ಯಸಂಗತಿಗಳು):

- *ಕಥೆಯ ವಿಷಯವನ್ನು ಅರ್ಥಮಾಡಿಕೊಳ್ಳುವುದು ನನ್ನ ಗುರಿಯಾಗಿದೆ.*
- *ಕಥೆಯು ಏನು ಹೇಳುತ್ತಿದೆ? ಕಥೆಯಲ್ಲಿ ಏನಾಯಿತು?*
- *ಆತನ ವಾಕ್ಯದ ಮೂಲಕ ನಾನು ದೇವರನ್ನು ತಿಳಿದುಕೊಳ್ಳಲು ಬಯಸುತ್ತೇನೆ.*

ಎ. ಕಥೆಯನ್ನು ಹೇಳುತ್ತಿರುವಾಗ ನೀವು ಏನನ್ನು ಕಲ್ಪಿಸಿಕೊಳ್ಳುತ್ತಿದ್ದೀರಿ? ಇದು ನಿಮಗೆ ಹೇಗನಿಸಿತು?

ಬಿ. ನೀವು ಅಲ್ಲಿರುವಂತೆ ಊಹಿಸಿಕೊಳ್ಳಲು ಸಾಧ್ಯವಾಯಿತೋ? ಕಥೆಯನ್ನು ಹೇಳುತ್ತಿರುವಾಗ ನೀವು ಏನನ್ನು ಕೇಳಿದಿರಿ/ನೋಡಿದಿರಿ, ನಿಮಗೆ ಯಾವ ವಾಸನೆ ಬಂತು?

ಸಿ. ಕಥೆಯಲ್ಲಿ ನಿಮಗೆ ಯಾವ ಸಂಗತಿ ಬಲಪಡಿಸಿತು?

ಡಿ. ಈ ಕಥೆಯಲ್ಲಿ ದೇವರು/ಯೇಸು ಅವರಿಗೆ ಏನನ್ನು ಕಲಿಸುತ್ತಿದ್ದರು?

ಇ. ದೇವರು ಹೀಗೆ ಮಾಡುವದನ್ನು ನಾವು ಹಿಂದಿನ ಯಾವ ಕಥೆಗಳಲ್ಲಿ ನೋಡಿದೆವು?

ಎಫ್. ಹಿಂದಿನ ಕಥೆಗಳನ್ನು ನೆನಪಿಸಿಕೊಂಡಾಗ ಯಾವುದಾದರು ಸಂಗತಿ ಕೇಳಿಸಿತೋ?

ಜಿ. ಇದನ್ನು ಕುರಿತು ಮಾತನಾಡುವ ನಮ್ಮ ಬೇರೆ ಕಥೆಗಳು ಯಾವುವು?____________

ಹೆಚ್. ಅರ್ಥಮಾಡಿಕೊಳ್ಳಲು ಯಾವುದಾದರು ಸಂಗತಿ ಕಷ್ಟಕರ ಅಥವಾ ಕಠಿಣವಾಗಿತ್ತೋ?

ಐ. ಈ ಕಥೆಯು ಜನರೊಂದಿಗೆ ದೇವರ/ಯೇಸುವಿನ ಸಂಬಂಧವನ್ನು ಹೇಗೆ ವಿವರಿಸಿತು?

ಜೆ. ಈ ಕಥೆಯಿಂದ ದೇವರ/ಯೇಸುವಿನ ಸಂಬಂಧದೊಂದಿಗೆ____________ಕುರಿತು ನಾವು ಏನನ್ನು ಕಲಿತೆವು?

ಕೆ. ಕಥೆಯಲ್ಲಿರುವ ಜನರಿಗೆ ದೇವರು/ಯೇಸು ಹೇಗೆ ಪ್ರತಿಕ್ರಿಯೆ ತೋರಿಸಿದರು? ಇದು ಏನನ್ನು ತೋರಿಸುತ್ತದೆ?

ಎಲ್. ..... ನಡೆದಾಗ ದೇವರು/ಯೇಸು ಹೇಗೆ ಪ್ರತಿಕ್ರಿಯೆ ತೋರಿಸಿದರು?

ಎಮ್. ಜನರು ಹೇಗೆ ಪ್ರತಿಕ್ರಿಯೆ ತೋರಿಸಿದರು.......?

ಎನ್. ದೇವರು/ಯೇಸು ಹೇಗೆ......?

ಓ. ಈ ಘಟನೆಯಲ್ಲಿ ದೇವರು/ಯೇಸು ಅವರಿಗೆ ಏನನ್ನು ಬೋಧಿಸುತ್ತಿದ್ದರು ಅಥವಾ ತೋರಿಸುತ್ತಿದ್ದರು?

ಪಿ. ........ ಕುರಿತು ನೀವು ಈ ದಿನ ಕಲಿತ ಸಂಗತಿ ಯಾವುದು?

- ದೇವರು?
- ಯೇಸು?
- ಈ ಕಥೆ?
- ಯೇಸುವನ್ನು ಹಿಂಬಾಲಿಸುವುದು ಎಂದರೇನು?
- ನಿಮ್ಮನ್ನು ಕುರಿತು?

ಕ್ಯೂ. ದೇವರು/ಯೇಸು ಹೇಗಿರುತ್ತಾರೆ ಎಂಬುದನ್ನು ಕುರಿತು ನಾವು ಏನನ್ನು ಕಲಿತೆವು?

ಆರ್. ಜನರು ಯಾವ ಆಯ್ಕೆಗಳನ್ನು ಮಾಡಿದರು? ಅವರು ಬೇರೆ ಏನು ಮಾಡಬಹುದಾಗಿತ್ತು? ಅವರು ಮಾಡಿದ ಆಯ್ಕೆಗಳ ನಿಮಿತ್ತ ಏನಾಯಿತು?

ಎಸ್. ನಂಬಿಕೆ, ವರ್ತನೆ ಅಥವಾ ನಡವಳಿಕೆಯಲ್ಲಿ ಯಾರಾದರೂ ಬದಲಾವಣೆಗಳನ್ನು ಅನುಭವಿಸಿದರೋ?

ಟಿ. ಈ ಕಥೆಯಿಂದ ದೇವರು/ಯೇಸು/____________ಕುರಿತು ನೀವು ಏನನ್ನು ಗಮನಿಸಿದಿರಿ?

ಯು. ದೇವರು/ಯೇಸವನ್ನು ಹಿಂಬಾಲಿಸಲು ಯಾವ____________ಕಷ್ಟಕರವಾಗಿತ್ತು?

ವಿ. ಕಥೆಯಲ್ಲಿ ಪಾತ್ರಗಳು ಹೇಗೆ ಸಮನಾಗಿ ಅಥವಾ ವ್ಯತ್ಯಾಸವಾಗಿವೆ?

ಡಬ್ಲ್ಯೂ. ನಮ್ಮ ಪರಿಸ್ಥಿತಿಯು ಯಾವ ರೀತಿಗಳಲ್ಲಿ ........ ಆಗಿದೆ?

## ಪ್ರಶ್ನೆಗಳನ್ನು ಕಂಡುಹಿಡಿಯಿರಿ – ಹೃದಯ (ಭಾವನೆಗಳು):

- *ನನ್ನ ಗುರಿಯು ಮನೋಭಾವಾತ್ಮಕವಾಗಿ ಮತ್ತು ಆತ್ಮೀಕವಾಗಿ ಸಂಬಂಧ ಕಲ್ಪಿಸುವುದಾಗಿದೆ, ಹೀಗೆ ಕಥೆಯು ನನ್ನ ಹೃದಯವನ್ನು ಆವರಿಸುವಂತೆ ಮಾಡುವುದಾಗಿದೆ. ಕಥೆಯು ನನ್ನ ಕಥೆಯು ನನ್ನ ಜೀವಿತಕ್ಕೆ ಹೇಗೆ ಸಂಬಂಧ ಕಲ್ಪಿಸುತ್ತದೆ?*
- *ಕಥೆಯು ಯಾಕೆ ಪ್ರಾಮುಖ್ಯವಾಗಿದೆ? ಅದು ನನಗೆ ಯಾಕೆ ಪ್ರಾಮುಖ್ಯವಾಗಿದೆ?*
- *ನಾನು ದೇವರ ವಾಕ್ಯದ ಮೂಲಕ ಆತನನ್ನು ಪ್ರೀತಿಸಲು ಬಯಸುತ್ತೇನೆ.*

ಎ. ನೀವು ಕಥೆಯನ್ನು ಕುರಿತು ಏನನ್ನು ಇಷ್ಟಪಟ್ಟಿರಿ? ನೀವು ಇಷ್ಟಪಡದ ಸಂಗತಿ ಯಾವುದಾದರು ಉಂಟೋ?

ಬಿ. ಕಥೆಯಲ್ಲಿ ನಿಮಗೆ ಯಾವುದು ಉತ್ತೇಜನಕರವಾಯಿತು?

ಸಿ. ಇಂದಿನ ಕಥೆಯ ಬಹು ಪ್ರಾಮುಖ್ಯವಾದ ಭಾಗ ಯಾವುದಾಗಿತ್ತೆಂದು ನೀವು ಆಲೋಚಿಸುವಿರಿ?

ಡಿ. ನೀವು ಕಥೆಯನ್ನು ಕೇಳಿಸಿಕೊಂಡಾಗ ನಿಮಗೆ ಯಾವ ಭಾವನೆಗಳುಂಟಾದವು? ..... ಆಗಿದ್ದರೆ ನಿಮಗೆ ಹೇಗನಿಸುತ್ತಿತ್ತು?

ಇ. ನೀವು ಕಥೆಯನ್ನು ಹೇಳುತ್ತಿರುವಾಗ ಏನನ್ನು ಊಹಿಸಿಕೊಂಡಿರಿ?

ಎಫ್. ಕಥೆಯನ್ನು ಹೇಳುತ್ತಿರುವಾಗ ನೀವು ಯಾವ ಸಂಗತಿಯನ್ನು ಕುರಿತು ಆಶ್ಚರ್ಯವಾಯಿತು?

- ನೀವು ಆಲೋಚಿಸಿದ ಮನೋಭಾವನೆಗಳು ಯಾವ ವಿಧವಾದವುಗಳು.....?
- ನಿಮಗೆ ಪ್ರೇರಿಸಿದ ಭಾವನೆಗಳು ಯಾವುವು......?
- ಇದು ಯಾವ ರೀತಿಯಲ್ಲಿತೆಂದು ನೀವು ಆಲೋಚಿಸುವಿರಿ........?

ಜಿ. ಕಥೆಯಲ್ಲಿ ____________ ರ ಹೃದಯ ಮತ್ತು ಮನಸ್ಸಿನಲ್ಲಿ ಏನಾಗುತ್ತಿತ್ತೆಂದು ನೀವು ಆಲೋಚಿಸುವಿರಿ?

ಹೆಚ್. ಈ ದಿನದ ಕಥೆಯನ್ನು ಕುರಿತು ಯಾವ ಸಂಗತಿಯು ನಿಮಗೆ ಆಶ್ಚರ್ಯ ಉಂಟುಮಾಡಿತು ಅಥವಾ ವಿಸ್ಮಯಗೊಳಿಸಿತು?

ಐ. ಈ ದಿನದ ಕಥೆಯಲ್ಲಿ ಯಾವ ಪಾತ್ರಕ್ಕೆ ನೀವು ಹೆಚ್ಚಾಗಿ ಸಂಬಂಧ ಕಲ್ಪಿಸುವಿರಿ?

ಜೆ. ದೇವರು/ಯೇಸವಿಗೆ ಯಾವುದು ನಿಜವಾಗಿ ಪ್ರಾಮುಖ್ಯವಾಗಿದೆ ಎಂದು ನಿಮ್ಮ ಆಲೋಚನೆ ಏನಾಗಿದೆ? ಪಾತ್ರಕ್ಕೆ?

ಕೆ. ನಾವು ಸಹ ಯಾವ ರೀತಿಯಲ್ಲಿ ಹೀಗೆ ಇದ್ದೇವೆ ________? ನಾವು ಯಾವ ರೀತಿಯಲ್ಲಿ ವ್ಯತ್ಯಾಸವಾಗಿದ್ದೇವೆ?

ಎಲ್. ಕಥೆಯನ್ನು ಕೇಳಿಸಿಕೊಂಡ ನಂತರ, ನಿಮ್ಮನ್ನು ನೀವೇ ದೃಷ್ಟಿಸುವ ರೀತಿಯನ್ನು ಹೇಗೆ ಬದಲಾಯಿಸಬಹುದು?

ಎಮ್. ದೇವರು ನಿಮ್ಮನ್ನು ಎಂದಾದರು ಉಪಯೋಗಿಸಿದ್ದಾನೋ....?

ಎನ್. ನೀವು ಯಾಕೆ ಬಹುಶಃ......?

ಓ. ದೇವರು ಸತ್ಯವೇದದಲ್ಲಿ ಈ ಕಥೆಯನ್ನು ಯಾಕೆ ಹಾಕಿದನೆಂದು ನೀವು ಆಲೋಚಿಸುವಿರಿ?

ಪಿ. ಈಗ ನಿಮಗೆ ದೇವರು/ಯೇಸುವನ್ನು ಕುರಿತು ಹೇಗನಿಸುತ್ತದೆ?

ಕ್ಯೂ. ಈ ದಿನಕ್ಕಿಂತ ಮುಂಚೆ ನೀವು ತಿಳಿಯದೆ ಇದ್ದ ಸಂಗತಿ ಯಾವುದಾಗಿತ್ತು?

ಆರ್.ಈ ದಿನ ನೀವು ಕೇಳಿಸಿಕೊಂಡವುಗಳಲ್ಲಿ ಬಹಳ ಆಸಕ್ತಿಕರವಾಗಿದ್ದ ಸಂಗತಿ ಯಾವುದು?

ಎಸ್.ಈ ಕಥೆಯು ನಿಮಗೆ ಹೇಗೆ ಸವಾಲು ಹಾಕಿತು ಅಥವಾ ಉತ್ತೇಜಿಸಿತು?

## ಪ್ರತ್ಯುತ್ತರದ ಪ್ರಶ್ನೆಗಳು – ಹಸ್ತಗಳು (ಕ್ರಿಯೆ)

- *ನಾನು ಕಥೆಯಿಂದ ಕಲಿತದ್ದನ್ನು ಅನ್ವಯಿಸಲು ಮತ್ತು ಪ್ರತಿಕ್ರಿಯಿಸಲು ಪವಿತ್ರಾತ್ಮನ ಮಾರ್ಗದರ್ಶನವನ್ನು ಹುಡುಕುವದೇ ನನ್ನ ಗುರಿಯಾಗಿದೆ. ಕಥೆಯನ್ನು ನನ್ನ ಜೀವಿತಕ್ಕೆ ಕಥೆಯನ್ನು ನಾನು ಹೇಗೆ ಅನ್ವಯಿಸಬೇಕು?*
- *ನಾನು ಕಥೆಯಿಂದ ಕಲಿತದ್ದನ್ನು ಕುರಿತು, ವಿಶೇಷವಾಗಿ, ನಾನು ಏನು ಮಾಡಬೇಕೆಂದು ದೇವರು ಬಯಸುತ್ತಾನೆ?*
- *ನಾನು ಆತನ ವಾಕ್ಯದಿಂದ ಕಲಿತದಕ್ಕೆ ವಿಧೇಯನಾಗುವುದರ ಮೂಲಕ ದೇವರ ಸೇವೆ ಮಾಡಲು ಬಯಸುತ್ತೇನೆ.*

ಎ. ಇಂದು ನೀವು ಕೇಳಿಸಿಕೊಂಡ ವಿಷಯದಿಂದ ನಿಮ್ಮ ಜೀವಿತದಲ್ಲಿ ನೀವು ಬದಲಾವಣೆ ಮಾಡಿಕೊಳ್ಳಬೇಂದು ಆಲೋಚಿಸಿದ ಸಂಗತಿ ಯಾವುದು?

ಬಿ. ಇಂದು ನೀವು ಕಲಿತವುಗಳಿಂದ, ದೇವರು/ಯೇಸು/ಪವಿತ್ರಾತ್ಮನು ನಿಮಗೆ ಏನು ಮಾಡಬೇಕೆಂದು ಹೇಳುತ್ತಿದ್ದಾನೆ?

ಸಿ. ದೇವರು/ಯೇಸು/ಪವಿತ್ರಾತ್ಮನು ನಿಮಗೆ ಏನು ಹೇಳುತ್ತಿದ್ದಾನೆಂದು ನೀವು ಏನು ಆಲೋಚಿಸುವಿರಿ?

ಡಿ. ಈ ದಿನದ ಕಥೆಯ ನಿಮಿತ್ತ ನೀವು ವ್ಯತ್ಯಸವಾಗಿ ಮಾಡಬೇಕಾದದ್ದು ಏನಾಗಿದೆ? ನೀವು ಆತನನ್ನು ಪ್ರೀತಿಸುವ ಮತ್ತು ಸೇವ ಮಾಡುವ ರೀತಿಯಲ್ಲಿ ಇದು ಯಾವ ವ್ಯತ್ಯಾಸವನ್ನುಂಟುಮಾಡುತ್ತದೆ?

ಇ. ನಾವು ಯೇಸುವಿನ ಹಿಂಬಾಲಕರಾಗಿದ್ದು ಈ ಕಥೆಯನ್ನು ಕುರಿತು ಏನನ್ನು ಕಲಿತೆವು? ನೀವು ಈ ಪರಿಜ್ಞಾನವನ್ನು ಈ ವಾರದಲ್ಲಿ ಹೇಗೆ ಅಭ್ಯಾಸಕ್ಕೆ ಹಾಕಬಹುದು?

ಎಫ್. ಇಂದು ನಾವು ದೇವರು/ಯೇಸುವಿಗೆ ಹೇಗೆ ಪ್ರತಿಕ್ರಿಸಬೇಕು?

ಜಿ. ಕಥೆಯನ್ನು ಕೇಳಿದ ನಂತರ, ನೀವು ಹೇಗೆ ವ್ಯತ್ಯಾಸವಾಗಿ ಜೀವಿಸುವಿರಿ?

ಹೆಚ್. ನೀವು ದೇವರನ್ನು ಹೀಗೆ ತಿಳಿಯಲು ಬಯಸುವಿರಾ? ಈಗ ನಿಮ್ಮ ಜೀವಿತದಲ್ಲಿ ದೇವರು/ಯೇಸು/ಪವಿತ್ರಾತ್ಮನು ನಿಮಗೆ ಸಹಾಯಮಾಡಬಹುದಾದ ಯಾವುದಾದರು ಕಾರ್ಯನಡೆಯುತ್ತಿದೆಯೋ?

ಐ. ಈ ವಾರದಲ್ಲಿ ನೀವು ಈ ಕಥೆಯನ್ನು ಯಾರೊಂದಿಗೆ ಹಂಚಿಕೊಳ್ಳಬಹುದು?

ಜೆ. ನೀವು ಈ ಕಥೆಯಲ್ಲಿ ಭಾಗವನ್ನು ಹೊಂದಿಕೊಳ್ಳಬೇಕೆಂದು ದೇವರು ಬಯಸುತ್ತಾನೆಂದು ನೀವು ಹೇಗೆ ಲೋಚಿಸುವಿರಿ?

**ಜನರು ಕಥೆಯನ್ನು ಕೇಂದ್ರೀಕರಿಸಲಿ:**

ಕಥೆಗೆ ಸಂಬಂಧಪಡದ ಬೇರೆ ವಿಷಯಗಳು ಅಥವಾ ಸಂಗತಿಗಳ ಕಡೆಗೆ ಮಕ್ಕಳು ಗಮನ ಕೊಟ್ಟಾಗ ಏನಾಗುತ್ತದೆ? ಅವರ ಉತ್ತರಗಳಿಗಾಗಿ ಕಥೆಗೆ ಅವರನ್ನು ಹಿಂದಿರುಗಿಸಿ? ಅದನ್ನು ಕುರಿತು ಕಥೆ ಏನು ಹೇಳುತ್ತದೆ? ಹಿಂದಕ್ಕೆ ಹೋಗಿ ನೋಡೋಣ.

- **ಸ್ಪರ್ಶಕ:** ಕೆಲವು ಜನರು ಅಡಚಣೆಗೆ ಒಳಗಾಗುವರು ಅಥವಾ ಬೇರೆ ವಿಷಯಗಳ ಕಡೆಗೆ ಹೋಗುತ್ತಾರೆ. ಹೀಗೆ ನಡೆದಾಗ, ಇಲ್ಲಿ ಕೆಲವು ಸಲಹೆಗಳು ಕೊಡಲ್ಪಟ್ಟಿವೆ:
  - *ಇಂದಿನ ಕಥೆಯಲ್ಲಿ ನೀವು ಅದನ್ನು ಎಲ್ಲಿ ನೋಡುವಿರಿ? ಅದನ್ನೇ ನಾವು ಈಗ ಚರ್ಚಿಸುತ್ತಿದ್ದೇವೆ.*
  - *ನೀವು ಗಮನಕ್ಕೆ ತಂದ ವಿಷಯವನ್ನು ಕುರಿತು ನಾವು ನಂತರ ಮಾತನಾಡಬಹುದು.*

- **ತತ್ವಶಾಸ್ತ್ರ:** ಜನರಿಗೆ ದೇವರನ್ನು ಕುರಿತು ಉತ್ತರಿಸಲು ಕಷ್ಟಕರವಾದ ಪ್ರಶ್ನೆಗಳು ಅಥವಾ ಆಲೋಚನೆಗಳಿವೆ: *ಕಥೆಯಲ್ಲಿ ನೀವು ಏನನ್ನು ನೋಡುತ್ತೀರಿ?* ದೇವರನ್ನು ಕುರಿತ ದೊಡ್ಡ ಸಂಗತಿ/ಪ್ರಶ್ನೆಯನ್ನು ವಿಮರ್ಶಿಸಲು ಉತ್ತಮವಾದ ಸಯಮ ಯಾವುದೆಂದು ನಾಯಕರಾದ ನೀವು ತೀರ್ಮಾನಮಾಡಬೇಕು.

- **ಪ್ರಶ್ನೆಗಳು:** ಬೇರೆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಮುಂಚಿತವಾಗಿ ನೀವು ಗುಂಪಿಗೆ ಕೇಳಿದ ಪ್ರಶ್ನೆಗೆ ಉತ್ತರ ಕೊಡಲು ಪ್ರತಿಯೊಬ್ಬರಿಗೂ ಸಾಕಷ್ಟು ಅವಕಾಶಗಳನ್ನು ಕೊಡಲು ಖಚಿತಪಡಿಸಿಕೊಳ್ಳಿರಿ. ಸಮಯ ಅವಕಾಶವಾದರೆ, ಬೇರೆ ಸಂಬಂಧಪಟ್ಟ ಪ್ರಶ್ನೆಗಳನ್ನು ಪರಿಗಣಿಸಬಹುದು. ವಿರಾಮವು ಸಹ ಒಳ್ಳೆಯದು. ಇದು ಜನರಿಗೆ ಶಾಂತವಾಗಿರಲು ಮತ್ತು ದೇವರು ಅವರಿಗೆ ಕೊಡುತ್ತಿರುವ ಸ್ಪೂರ್ತಿಯ ವಿಷಯದಲ್ಲಿ ಧ್ಯಾನಿಸಲು ಅವಕಾಶ ಕೊಡುತ್ತದೆ.

# ಅಧಿವೇಶನ #8
# ಅಂತಿಮ ನಿಯೋಜನೆ

ಭಾಗವಹಿಸುವವರನ್ನು ಗುಂಪಾಗಿ ಕೂಡಿಸಿ. ಪ್ರತಿಯೊಂದು ಗುಂಪಿಗೂ ಈ ಕೆಳಗಿನ ಕಥೆಗಳನ್ನು ಕೊಡಿರಿ. ಒಂದು ವೇಳೆ 12ರಕ್ಕಿಂತ ಹೆಚ್ಚು ಗುಂಪುಗಳಿದ್ದರೆ, ಅದೇ ಕಥೆಯನ್ನು ಒಂದಕ್ಕಿಂತ ಹೆಚ್ಚು ಗುಂಪುಗಳಿಗೆ ಕೊಡಬಹುದು.

ಮುಂದಿನ ಪುಟದಲ್ಲಿ ಕಂಡುಬರುವ ಪಾಠದ ಯೋಜನಾ ಹಾಳೆಯನ್ನು ಉಪಯೋಗಿಸಿ, ಕೊಡಲ್ಪಟ್ಟ ಸಮಯದಲ್ಲಿ ಇಡೀ ಪಾಠವನ್ನು ಯೋಜಿಸಿ ನೀವು ಪ್ರತಿಯೊಂದು ಭಾಗಕ್ಕಾಗಿ ಪ್ರತಿಯೊಂದು ಗುಂಪಿಗೆ ನಿರ್ಧಿಷ್ಟವಾದ ಸಮಯವನ್ನು ಕೊಡಬಹುದು.

- ಪಾರ್ಶ್ವವಾಯು ರೋಗಿಯನ್ನು ಗುಣಪಡಿಸಿದ್ದು: ಲೂಕ 5:17–26
- ಒಳ್ಳೆಯ ಸಮಾರ್ಯದವನು: ಲೂಕ 10:25–37
- 5000 ಮಂದಿಗೆ ಪೋಷಿಸುವುದು: ಯೋಹಾನ 6:1–14
- ಹತ್ತು ಕುಷ್ಠರೋಗಿಗಳು ಗುಣಹೊಂದಿದರು: ಲೂಕ 17:11–19
- ಒತ್ತಾಯಮಾಡಿದ ವಿಧವೆ: ಲೂಕ 18:1–8
- ಪರಿಸಾಯರ ಮತ್ತು ಸುಂಕದವರ ಪ್ರಾರ್ಥನೆಗಳು: ಲೂಕ 18:9–14
- ಕುರುಡನ ಸ್ವಸ್ಥತೆ: ಲೂಕ 18:35–42
- ಜಕ್ಕಯನು: ಲೂಕ 19:1–10
- ಪೇತ್ರನು ಕುಂಟನನ್ನು ಗುಣಪಡಿಸಿದ್ದು: ಅಪೊಸ್ತಲ ಕೃತ್ಯಗಳು 3:1–10
- ಎಲೀಷನು ಮತ್ತು ವಿಧವೆಯ ಎಣ್ಣೆಯ ಪಾತ್ರೆಗಳು: 2 ಅರಸು 4:1–7
- ಸಮುವೇಲನು ದೇವರ ಸ್ವರವನ್ನು ಕೇಳಿಸಿಕೊಳುವುದು: 1 ಸಮುವೇಲ 3:1–14
- ದಾವೀದನನ್ನು ಅರಸನನ್ನಾಗಿ ಅಭಿಷೇಕಿಸಿದರು: 1 ಸಮುವೇಲ 16:1–13

ಅವರು ಪಾಠವನ್ನು ಹೇಗೆ ಪ್ರಸ್ತುತಪಡಿಸುತ್ತಾರೆಂಬ ಆಲೋಚನೆಗಳನ್ನು ಹಂಚಿಕೊಂಡು ಒಂದು ಪಾಠದ ಯೋಜನೆಯಿಂದ ಮುಂಬರುವಂತೆ ಗುಂಪಿನಲ್ಲಿರುವ ಪ್ರತಿಯೊಬ್ಬರನ್ನು ನಡೆಸಿರಿ. ಕಥೆಯನ್ನು ಒಂದಕ್ಕಿಂತ ಹೆಚ್ಚು ಗುಂಪಿಗೆ ನಿಯೋಜಿಸಿರುವುದಾದರೆ, ಆಗ ಪಾಠವನ್ನು ಚರ್ಚಿಸಲು ಮತ್ತು ಅಭ್ಯಾಸಮಾಡಲು ಈ ಗುಂಪುಗಳು ಒಟ್ಟಾಗಿ ಸೇರಿರಬಹುದು. ಉಳಿದ ಸಮಯದಲ್ಲಿ ಸಾಧ್ಯವಾದಷ್ಟು ಪಾಠಗಳನ್ನು ಪ್ರಸ್ತುತಪಡಿಸಿರಿ.

ಪ್ರತಿಯೊಂದು ಭಾಗವನ್ನು ಪ್ರಸ್ತುತಪಡಿಸಲು ಪ್ರತಿಯೊಂದು ಗುಂಪು ಬೇರೆಬೇರೆ ಜನರನ್ನು ನಿಯೋಜಿಸಬೇಕು. ಸಮಯ ಆಧಾರಗೊಂಡು, ಆರಂಭ ಮತ್ತು ಪ್ರಶ್ನೆಗಳನ್ನು ಮಾತ್ರ ಹೇಳಬೇಕು ಆದರೆ ನಿಜವಾಗಿ ಇಡೀ ತರಗತಿಯಿಂದ ಮಾಡಲಾಗುವದಿಲ್ಲ. ಪರಿಚಯ, ಕಥೆಯನ್ನು ಹೇಳುವುದು ಮತ್ತು ಪುಃನ ಹೇಳುವುದು, ಇವುಗಳನ್ನು ಇಡೀ ತರಗತಿ ಮಾಡಬೇಕು ಅಥವಾ ಮತ್ತೊಂದು ಚಿಕ್ಕಗುಂಪಿನಿಂದ ಪ್ರದರ್ಶಿಸಲ್ಪಡಬೇಕು.

ಪ್ರಸ್ತುತಪಡಿಸಿದ ನಂತರ, ಪ್ರಸ್ತುತಪಡಿಸುತ್ತಿರುವ ಗುಂಪಿಗೆ ಪ್ರತಿಕ್ರಿಯೆಯನ್ನು ಕೊಡಿರಿ. ಅವರು ತಮ್ಮ ಕಾರ್ಯದಲ್ಲಿ ಹೇಗೆ ಸೃಜನಶೀಲರಾಗಿದ್ದರು ಮತ್ತು ಉತ್ತಮವಾಗಿ ಮಾಡಿದರೆಂದು ವಿವಿಧ ರೀತಿಗಳನ್ನು ನೋಡಿರಿ. ಉತ್ತಮ ಪರಿಣಾಮಗಳಿಗಾಗಿ ವ್ಯತ್ಯಾಸವಾಗಿ ಮಾಡಬಹುದಾಗಿದ್ದ ಒಂದು ಭಾಗವನ್ನು ಕಂಡುಕೊಳ್ಳಿರಿ. ವಿಶೇಷವಾಗಿ, ಕಥೆಯು ಸತ್ಯವೇದದ ಪ್ರಕಾರ ನಿಖರವಾಗಿರದೆ ಕಥೆ ಕೇವಲ ಅಲಂಕರಿಸಲ್ಪಟ್ಟಂತ ಸಮಯವನ್ನು ಕಂಡುಕೊಳ್ಳಿರಿ.

# ಪಾಠದ ಯೋಜನಾ ಹಾಳೆ

**ಆರಂಭ:**

- ಮಕ್ಕಳು ವೈಯಕ್ತಿಕ ಕಥೆಯನ್ನು ಹಂಚಿಕೊಳ್ಳುವಂತೆ ಒಂದು ಪ್ರಶ್ನೆಯನ್ನು ಅಥವಾ ಚಟುವಟಿಕೆಯನ್ನು ಆರಿಸಿಕೊಳ್ಳಿರಿ.
- ಉತ್ತರವು ಮಗುವಿಗೆ ಇದಂತ ಮನೋಭಾವನೆಯನ್ನು ಉಂಟುಮಾಡುತದೋ?
- "ಹೌದು" ಅಥವಾ "ಇಲ್ಲ" ಎಂಬುದಕ್ಕಿಂತ ಹೆಚ್ಚಿನ ಉತ್ತರವನ್ನು ಕೊಡುವ ಪ್ರಶ್ನೆಯನ್ನು ಕೇಳಿರಿ.

**ಪರಿಚಯ:**

- ನಿರೂಪಿಸಬೇಕಾದ ಪದಗಳಿವೆಯಾ?
- ಭೌಗೋಳಿಕ ಸ್ಥಳವನ್ನು ತಿಳಿದುಕೊಳ್ಳುವುದು ಪ್ರಾಮುಖ್ಯವೋ?
- ಕಥೆಗಿಂತ ಮುಂಚಿತವಾಗಿ ನಡೆದ ಘಟನೆಗಳನ್ನು ತಿಳಿದುಕೊಳ್ಳುವುದು ಪ್ರಾಮುಖ್ಯವೋ?
- ವಿವರಿಸಲು ಪ್ರಾಮುಖ್ಯವಾದ ಸಂಸ್ಕೃತಿಯ ವ್ಯತ್ಯಾಸಗಳಿವೆಯೋ?
- ಹಿಂದಿನ ಕಥೆಗಳಿಂದ ಪುನರಾವರ್ತಿಸಲು ಉತ್ತಮವಾಗಿರುವ ಸಂಗತಿಗಳಿವೆಯೋ?

**ಕಥೆಯನ್ನು ಹೇಳಿರಿ:**

- ನಾನು ಕಥೆಯಲ್ಲಿ ಮಕ್ಕಳನ್ನು ತೊಡಗಿಸಬಹುದೋ?
- ಕಥೆಯನ್ನು ಬಹಳ ಆಕರ್ಷಿಕವಾಗಿ ಮತ್ತು ಪರಿಣಾಮ ಸಾಧಿಸುವಂತೆ ಮಾಡುವ ನಾಟಕೀಯ ಅಂಶಗಳಿವೆಯಾ?
- ಗುಂಪಿಗೆ ತೋರಿಸಲು ಯಾವುದಾದರು ದೃಶ್ಯ ವಸ್ತುವಿದೆಯಾ?
- ಕಥೆಯಲ್ಲಿ ಹೆಸರುಗಳು ಮತ್ತು ಸ್ಥಳಗಳ ಪಟ್ಟಿಗಳಲ್ಲಿ ಸರಿಪಡಿಸಬೇಕಾದ ಭಾಗಗಳುಂಟೋ?
- ಮಕ್ಕಳು ಕಥೆಯನ್ನು ಬೇರೆಯವರಿಗೆ ಹೇಳಲು ಕಥೆಯ ಉದ್ದವು ಸರಿಯಾಗಿದೆಯೋ?
- ಅವರ ಅನುಭವದಿಂದ ನಾನು ಹೇಳಬೇಕಾದ ವ್ಯಕ್ತಿ ಕಥೆಯಲ್ಲಿ ಇದ್ದಾರೋ?

**ಪುನಃ ಹೇಳಿರಿ:**

- ನನ್ನ ವಿದ್ಯಾರ್ಥಿಗಳು ಏನು ಮಾಡಲು ನಿಜವಾಗಿ ಸಂತೋಷಪಡುತ್ತಾರೆ?
- ಮಕ್ಕಳನ್ನು ತೊಡಗಿಸಿಕೊಳ್ಳುವಂತೆ ಮಾಡುವ ನಾನು ಉಪಯೋಗಿಸದ ಯಾವುದಾದರು ಚಟುವಟಿಕೆಯನ್ನು ಉಂಟೋ?
- ಎಲ್ಲಾ ಮಕ್ಕಳು ಭಾಗವಹಿಸಲು ಸಾಕಷ್ಟು ಸರಬರಾಜು ಉಂಟೋ?
- ಮಕ್ಕಳು ಸತ್ಯವೇದ ಕಥೆಯನ್ನು ಹೇಳುವಾಗ ಅವರು ಸತ್ಯವೇದಾನುಸಾರವಾಗಿ ನಿಖರವಾಗಿದ್ದಾರೋ?

**ಪ್ರಶ್ನೆಗಳನ್ನು ನೋಡಿರಿ:**

- ಈ ಚರ್ಚೆಯನ್ನು ಪವಿತ್ರಾತ್ಮನು ಎಲ್ಲಿಗೆ ನಡೆಸುತ್ತಾನೆ ಎಂಬ ಆಲೋಚನೆಯನ್ನು ಹೊಂದಿಕೊಳ್ಳಲು ಈ ಪಾಠವನ್ನು ಕುರಿತು ನಾನು ಪ್ರಾರ್ಥಿಸಿದ್ದೇನಾ?
- ಹೃದಯವನ್ನು ತೊಡಗಿಸಿಕೊಳ್ಳುವುದು ಮತ್ತು ಕೇವಲ ತಲೆಯನ್ನಲ್ಲ ಎಂಬುದನ್ನು ಕುರಿತು ನನ್ನಲ್ಲಿ ಯಾವುದಾದರು ಪ್ರಶ್ನೆಗಳು ಉಂಟೋ?
- ಮಕ್ಕಳಿರುವಲ್ಲಿಗೆ ಕಥೆಯ ಯಾವ ಭಾಗವು ಉತ್ತಮವಾಗಿ ಸಂಬಂಧ ಕಲ್ಪಿಸುತ್ತದೆ? ಚರ್ಚೆಯನ್ನು ಆ ಮಾರ್ಗದಲ್ಲಿ ನಡೆಸಲು ಪವಿತ್ರಾತ್ಮನು ಸಹಾಯಮಾಡುವಂತೆ ನನ್ನಲ್ಲಿ ಪ್ರಶ್ನೆಗಳುಂಟೋ?

**ಪ್ರತ್ಯುತ್ತರದ ಪ್ರಶ್ನೆಗಳು:**

- ನಾನು ಪಾಠವನ್ನು ಹೇಗೆ ಮುಕ್ತಾಯಗೊಳಿಸಲಿ – ಪ್ರತ್ಯುತ್ತರದ ಯಾವ ಪ್ರಶ್ನೆಯು ಉತ್ತಮವಾಗಿರುತ್ತದೆ?

# ಅಧಿವೇಶನ #9
# ಸಮರ್ಪಣೆ ಮತ್ತು ಆಶೀರ್ವಾದ

- ಭಾಗವಹಿಸುವವರು ಪರಿಶೀಲನೆಯನ್ನು ಪೂರ್ತಿಗೊಳಿಸಲಿ
- ಲಭ್ಯವಿರುವ ಪ್ರತಿಯೊಬ್ಬ ವ್ಯಕ್ತಿಗೂ ಪ್ರಮಾಣಪತ್ರಗಳನ್ನು ಕೊಡಿರಿ.
- ಗುಂಪಿನ ಭಾವಚಿತ್ರವನ್ನು ತೆಗೆದುಕೊಳ್ಳಿರಿ
- ಗುಂಪಿನ ಮೇಲೆ ಆಶೀರ್ವಾದ ಬರುವಂತೆ ಪ್ರಾರ್ಥಿಸಿರಿ.
- ಲಭ್ಯವಿದ್ದರೆ, ಈ ಹಾಡನ್ನು ಹಾಡಿ ಕಲಿಸಿರಿ: ವಿಸರ್ಜನೆಗೆ ಮುಂಚೆ ಆಶೀರ್ವಾದ

# ಅನುಬಂಧ


| | ಪುಟ(ಗಳು) |
|---|---|
| • ಕಿಡ್ಸ್ ಅರೌಂಡ್ ದ ವರಲ್ಡ್ | 36 |
| • ಮಾರ್ಗದರ್ಶನಗಳು | 37–38 |
| • ಮಲ್ಟಿಪಲ್ ಇಂಟೆಲಿಜೆನ್ಸ್ | 39 |
| • ಸತ್ಯವೇದ ಕಥೆ ಉಪಯೋಗಿಸಿ ದೃಷ್ಟಿಕೋನ ವರ್ಗಾವಣೆ | 40 |
| • ಮಕ್ಕಳ ಕಥಾಫಲಕ ತರಬೇತಿ | 41 |
| • ಸತ್ಯವೇದ ಕಥೆಯ ಹೆಚ್ಚಿನ ಪುಸ್ತಕಗಳು | 42 |

# ಕಿಡ್ಸ್ ಅರೌಂಡ್ ದ ವರಲ್ಡ್

**ನಮ್ಮ ಗುರಿ**

**ದೇವರ ರೂಪಾಂತರಗೊಳಿಸುವ ನಿರೀಕ್ಷೆಯಿಂದ ಮಕ್ಕಳ ಜೀವಿಗಳ ಮೇಲೆ ಪ್ರಭಾವ**

**ನಾವು ನಿರೀಕ್ಷೆಯ ಸಂಸ್ಕೃತಿಯ ಮಾದರಿ ಮತ್ತು ಹಾಗೆ ಜೀವಿಸುತ್ತೇವೆ:**

**ರೂಪಾಂತರಗೊಳಿಸುವ**

**ಸಂಬಂಧಾತ್ಮಕ**

**ಸಂಬಂಧಿತ**

**ಹಾಸ್ಯ**



**ನಮ್ಮ ಮಾರ್ಗದರ್ಶಿಸುವ ತತ್ವಗಳು**

**ಪ್ರಾರ್ಥನೆ**

**ಪಾಲುಗಾರಿಕೆ**

**ನವೀನತೆ**

**ಬಲಹೊಂದಿದ**

**ಹೆಚ್ಚಾಗುವದು**

**ಭರವಸೆಗೆ ಯೋಗ್ಯ**

**ನಮ್ಮ ಕೇಂದ್ರ ಸೇವೆಯ ಗಮನ**

**ಮಕ್ಕಳಿಗೆ ಪ್ರಭಾವಬೀರಲು ವಿಶ್ವಾಸಿಗಳ ಸಮುದಾಯಕ್ಕೆ ನಾವು ಸಂಪನ್ಮೂಲ ಒದಗಿಸುತ್ತೇವೆ**

kids around the world

**ಮಕ್ಕಳ ಕಥೆಯ ಗುರಿ**

*ದೇವರ ಕಥೆಯನ್ನು ಹೇಳುವುದು ಮತ್ತು ಆತನ ಆತ್ಮನ ಕಾರ್ಯದ ಮೂಲಕ ಆತನ ರೂಪಾಂತರಗೊಳಿಸವ ನಿರೀಕ್ಷೆಯಿಂದ ಮಕ್ಕಳ ಜೀವಿತಗಳ ಮೇಲೆ ಪ್ರಭಾವಬೀರುವದು.*

**ಮಕ್ಕಳ ಕಥೆಯ ಗುರಿಗಳು ಮತ್ತು ನಿರೀಕ್ಷೆಗಳು**

- ದೇವರ ವಾಕ್ಯವನ್ನು ಬೋಧಿಸಲು ಮಕ್ಕಳಕಥೆ/ಸತ್ಯವೇದ ಕಥೆಹೇಳುವ ವಿಧಾನಗಳನ್ನು ಪರಿಚಯಮಾಡುವುದು.
- ನಾಯಕರ ಮತ್ತು ಮಕ್ಕಳ ಹೃದಯಗಳಲ್ಲಿ ದೇವರಾತ್ಮನು ಕಾರ್ಯಮಾಡಲು, ಆತನಿಗೆ ಮತ್ತು ಬೇರೆಯವರಿಗೆ ಹತ್ತಿರವಾಗಿ ಜನರನ್ನು ವ್ಯಕ್ತಿಗತವಾಗಿ ಮತ್ತು ಗುಂಪಾಗಿ ಸೆಳೆಯುವುದು.
- ಮಕ್ಕಳ ಗುಂಪಿನೊಂದಿಗೆ ಕಿಡ್ಸ್ಟೋರಿ ವಿಧಾನವನ್ನು ಉಪಯೋಗಿಸುವಲ್ಲಿ ದೃಢವಿಶ್ವಾಸ
- ಮಕ್ಕಳು ಕಥೆಯನ್ನು ತಮ್ಮ ಸ್ವಂತ ಜೀವಿತಗಳಿಗೆ ಅನ್ವಯಿಸುವುದು ಮತ್ತು ಕಲಿಯುವುದು ಮಾತ್ರವಲ್ಲದೆ ಆದರೆ ಕಥೆಗಳನ್ನು ತಮ್ಮ ಕುಟುಂಬದವರಿಗೆ ಮತ್ತು ಸ್ನೇಹಿತರಿಗಿ ಪುಃನ ಹೇಳುವುದು.
- ಕಿಡ್ಸ್ಟೋರಿ ಕಾರ್ಯಗಾರವನ್ನು ಅಂತರಾಷ್ಟ್ರೀಯವಾಗಿ ನಡೆಸಲು ಜನರನ್ನು ಮತ್ತು ತಂಡಗಳನ್ನು ವೃದ್ಧಿಗೊಳಿಸುವದು.

# ಮಾರ್ಗದರ್ಶನಗಳು

**ಭಾಗವಹಿಸುವವರಿಗೆ ಮಾರ್ಗದರ್ಶನಗಳು**

(ನಿಮ್ಮ ಸತ್ಯವೇದ ಕಥೆಹೇಳುವ ಅಧಿವೇಶನವನ್ನು ಆರಂಭಿಸುವದಕ್ಕೆ ಮುಂಚಿತವಾಗಿ, ಈ ಮಾರ್ಗದರ್ಶನಗಳನ್ನು ಭಾಗವಹಿಸುವವರೊಂದಿಗೆ ಚರ್ಚಿಸಿರಿ).

- **ಪ್ರತಿಯೊಬ್ಬರಿಗೂ ಸ್ವಾಗತ:** ಭಾಗವಹಿಸಲು ಪ್ರತಿಯೊಬ್ಬರಿಗೂ ಸುರಕ್ಷಿತ ಸ್ಥಳ ಉಂಟುಮಾಡಲು ನಾವು ಬಯಸುತ್ತೇವೆ.
- **ಭಾಗವಹಿಸುವಿಕೆ:** ಪ್ರತಿಯೊಬ್ಬರೂ ಸಂಭಾಷಣೆಯಲ್ಲಿ ಸೇರಿಕೊಳ್ಳುತ್ತಾರೆಂಬ ನಿರೀಕ್ಷೆಯುಂಟು. ಒಂದು ವೇಳೆ ಪ್ರಶ್ನೆಯು ನಿಮ್ಮ ಬಳಿಗೆ ಬಂದಾಗ ಅದನ್ನು ಬೇರೆಯವರಿಗೆ ಸಾಗಿಸಬಹುದು ಅಥವಾ "ನನಗೆ ಗೊತ್ತಿಲ್ಲ" ಎಂದು ಹೇಳಬಹುದು.
    - **ಒಮ್ಮತವಲ್ಲದ:** ಹೆಚ್ಚಿನ ಭಾಗ ನಾವು ಸರಿಯಾದ ಒಂದು ಉತ್ತರವನ್ನು ಎದುರು ನೋಡುತ್ತಿಲ್ಲ. ವಿವಿಧ ಅಂಶಗಳನ್ನು ಆಧಾರಗೊಂಡು ಪವಿತ್ರಾತ್ಮನು ನಮಗೆ ವಿವಿಧ ಸಂಗತಿಗಳನ್ನು ಪ್ರಕಟಿಸುವನು. ನಮ್ಮ ಅನುಭವಗಳು, ನಾವು ಹೇಗೆ ಬೆಳೆದೆವು ಮತ್ತು ನಮಗೆ ಏನು ತಿಳಿದಿದೆ ಎಂಬ ಸಂಗತಿಗಳು ಅದೇ ಕಥೆಗೆ ಬೇರೆಬೇರೆ ದೃಷ್ಟಿಕೋನಗಳನ್ನು ಕೊಡುತ್ತದೆ.
- **ತೆರೆದವರಾಗಿ ಮತ್ತು ಪ್ರಮಾಣಿಕರಾಗಿರ್ರಿ:** ನಾವು ಪ್ರಮಾಣಿಕರಾಗಿದ್ದು ನಮಗೆ ಏನಾಗುತ್ತಿದೆ ಎಂದು ಹಂಚಿಕೊಳ್ಳುವಾಗ ಮಾತ್ರ ಕರ್ತನಿಗೆ ಮತ್ತು ಒಬ್ಬರಿಗೊಬ್ಬರು ಹತ್ತರವಾಗಿ ಬೆಳೆಯಲು ಸಾಧ್ಯ. ನಾವು ಮಾಡುವಂತೆಯೇ ಬೇರೆ ಮಕ್ಕಳು ಸಹ ಕಷ್ಟಪಡುವದನ್ನು ನಾವು ಅನೇಕ ಸಾರಿ ನೋಡುತ್ತೇವೆ.
- **"ನಾನು" ಎಂಬ ಹೇಳಿಕೆಗಳು:** "ಈ ಸಭೆ" ಅಥವಾ "ಅವರು ಅದನ್ನು" ಅಥವಾ "ನಾವು ಮಾಡಬಹುದಾಗಿತ್ತು" ಎಂಬ ಮಾತುಗಳನ್ನು ಆಡಬೇಡಿರಿ – ಆದರೆ ಅದನ್ನು "ನಾನು" ಮತ್ತು ದೇವರು ನಿಮಗೆ ಏನು ಹೇಳುತ್ತಿದ್ದಾನೆ ಎಂಬುದಕ್ಕೆ ಸೀಮಿತಗೊಳಿಸಿ.
- **ಪ್ರಸ್ತುತ ಮತ್ತು ಹಿಂದಿನ ಕಥೆಗಳು ಮಾತ್ರ:** ಇಂದಿನ ಮತ್ತು ನಾವು ಓದಿದ ಬೇರೆ ಕಥೆಗಳನ್ನು ವಿಮರ್ಶಿಸುವುದು ಹೇಳಲ್ಪಟ್ಟ ಕಥೆಗೆ ಪ್ರತಿಯೊಬ್ಬರನ್ನು ಸಮಾನ ತಿಳುವಳಿಕೆಯಿಂದ ಅದೇ ಸ್ಥಳದಲ್ಲಿ ಹಾಕುತ್ತದೆ. ಭಾಗವಹಿಸುವವರು ಈ ಹಿಂದೆ ಗುಂಪಿನವರು ವಿಮರ್ಶಿಸಿದವುಗಳನ್ನು ಬಿಟ್ಟು ಬೇರೆ ಸತ್ಯವೇದಾನುಸಾರ ತಿಳುವಳಿಕೆ ಅಥವಾ ಕಥೆಗಳನ್ನು ತರಬಾರದು.
- **ಕಾಲ್ಪನಿಕವಾಗಿ ಕೇಳುವದು:** ಕಥೆ ಹೇಳಲ್ಪಡುತ್ತಿರುವಾಗ ಅದರಲ್ಲಿ ನಿಮ್ಮನ್ನೇ ಹಾಕಿಕೊಳ್ಳಲು ಪ್ರಯತ್ನಿಸಿರಿ. ನೀವು ಏನನ್ನು ನೋಡುವಿರಿ, ಕೇಳಿಸಿಕೊಳ್ಳುವಿರಿ ಮತ್ತು ಯಾವ ವಾಸನೆ ಬರುತ್ತದೆ? ಬೇರೆ ಪಾತ್ರಗಳು ಏನು ಮಾಡುತ್ತಿವೆ? ನಿಮಗೆ ಯಾವ ಮನೋಭಾವನೆಗಳನ್ನು ಉಂಟಾಗುತ್ತಿವೆ?

**ನಾಯಕರಿಗೆ ಮಾರ್ಗದರ್ಶನಗಳು:**

- **ಪ್ರಾರ್ಥನೆ:** ಕರ್ತನ ಮುಂದೆ ಶಾಂತವಾಗಿರುವುದು ಪ್ರಾಮುಖ್ಯವಾಗಿದೆ, ಇದರಿಂದ ನೀವು ಪವಿತ್ರಾತ್ಮನ ಪಿಸುಮಾತಿಗೆ ಕಿವಿಗೊಡಬಹುದು. ಇದು ನಾಯಕರ ಕಾರ್ಯ ನಿರ್ವಹಣೆ ಮತ್ತು ಫಲಿತಾಂಶಗಳಲ್ಲ, ಆದರೆ ಪವಿತ್ರಾತ್ಮನು ಜನರ ಜೀವಿಗಳಲ್ಲಿ ಮತ್ತು ಅವರ ಮೂಲಕ ಕಾರ್ಯಮಾಡಲು ಶಕ್ತನಾಗಿದ್ದಾನೆ.

- **ಸಹ–ಕಲಿಗರು:** ನಾಯಕರಾಗಿ, ನಿಮಲ್ಲಿ ಎಲ್ಲಾ ಉತ್ತರಗಳು ಇರುವ ಅಗತ್ಯವಿಲ್ಲ – ಮಾಹಿತಿ ಒದಗಿಸಲು ಇದನ್ನು ಸತ್ಯವೇದ ಭಾಗಕ್ಕೆ ಮತ್ತು ಬೇರೆಯವರಿಗೆ ಹಿಂದಿರುಗಿಸುತ್ತಿರಿ. ನೀವು ಭಾಗವಹಿಸುವವರಿಂದ ಸಹ ಕಲಿಯಲು ಹೋಗುತ್ತಿದ್ದೀರಿ ಎಂದು ನಂಬಿ ನೀವು ಕಥೆ ಹೇಳುವ ಅಧಿವೇಶಕ್ಕೆ ಹೋಗಬೇಕಾಗುತ್ತದೆ.

- **ಸುರಕ್ಷಿತ ವಾತಾವರಣ:** ಕಲಿಯುವ ಕಾರ್ಯವು ನಡೆಯಬೇಕಾದರೆ, ಜನರು ಸುರಕ್ಷಿತವಾಗಿರಬೇಕು, ಅದನ್ನು ಇವುಗಳಿಂದ ಉಂಟುಮಾಡಬಹುದು:
  - **ನಿಮ್ಮ ಪ್ರೇಕ್ಷಕನ್ನು ತಿಳಿದುಕೊಳ್ಳುವದು:** ಆತ್ಮೀಕವಾಗಿ, ಭಾವನಾತ್ಮಕವಾಗಿ, ವೈಯಕ್ತಿಕ ಸಮಸ್ಯೆಗಳನ್ನು
  - **ದೈಹಿಕವಾಗಿ:** ಕೋಣೆಯ ತಾಪಮಾನ; ಕೋಣೆಯ ಹೊರಾಂಗಣ ಮತ್ತು ಸಾಧನಗಳು
  - **ಮಾನಸಿಕ:** ತಗ್ಗಿಸುವುದು ಅಥವಾ ಚುಚ್ಚುಮಾತು ಇರಬಾರದು; ಸತ್ಯವಾಕ್ಯಗಳನ್ನು ಹೆಚ್ಚಾಗಿ ಉಪಯೋಗಿಸುವದು
  - **ಆತ್ಮೀಕವಾಗಿ:** ಒಬ್ಬನು ಮತ್ತೊಬ್ಬರಿಗಿಂತ ಹೆಚ್ಚಾಗಿ ಸತ್ಯವೇದ ಪಂಡಿತನಲ್ಲಾ; ಯೇಸುವಿನ ಅತಿಮಹತ್ವದ ಜನರಿಲ್ಲ

- **ದೇವರ ಸಂಧಿಸುವಿಕೆಯನ್ನು ನಿರೀಕ್ಷಿಸಿರಿ:** ನಮ್ಮ ಕಥೆಗಳಿಂದ ದೇವರು ತನ್ನ ಕಥೆಯಿಂದ ಸಂಧಿಸುತ್ತಾನೆಂಬ ನಿರೀಕ್ಷೆಯಿಂದ ಕಥೆಯನ್ನು ಪ್ರವೇಶಿಸಿರಿ. ಸಾಮಾನ್ಯವಾಗಿ ನಾವು ಮಾಹಿತಿಯನ್ನು ವರ್ಗಾಯಿಸುವ ಅಥವಾ ಸುರಿದು ಹಾಕುವ ವಿಧಾನಕ್ಕೆ ಒಳಗಾಗುತ್ತೇವೆ.

- **ಪಾರದರ್ಶಕತೆ:** ಸರಿಯಾದ ಸಮಯದಲ್ಲಿ, ಗುಂಪಿನೊಂದಿಗೆ ಒಂದಾಗಿರುವುದು ಒಳ್ಳೆಯದು ಮತ್ತು ನಿಮ್ಮನ್ನು ನೀವು ದುರ್ಬಲರಾಗಿರಲು ಮತ್ತು ಪಾರದರ್ಶಕರಾಗಿರಲು ಬಿಡಿರಿ.

- **ಕಿವಿಗೊಡಿರಿ:**
  - **ಪವಿತ್ರಾತ್ಮನು:** ಒಬ್ಬ ವ್ಯಕ್ತಿಯ ಪ್ರತಿಕ್ರಿಯೆಗೆ ನೀವು ಆಳವಾಗಿ ಪರಿಶೋಧಿಸಲು ಮತ್ತು ಹೆಚ್ಚಿನ ಪ್ರಶ್ನೆಗಳನ್ನು ಕೇಳಬೇಕೆಂದು ಪವಿತ್ರಾತ್ಮನು ನಿಮಗೆ ಹೇಳುವ ಸಮಯಗಳಿರುತ್ತವೆ; ಹೀಗೆ ಪ್ರತಿಯೊಬ್ಬರೊಂದಿಗೆ ಆಗಬೇಕೆಂಬ ಅಗತ್ಯವಿರುವದಿಲ್ಲ. ಜನರು ಸಾಮಾನ್ಯವಾಗಿ "ಯೇಸು, ಸತ್ಯವೇದ, ಪ್ರೀತಿ, ದೇವರು" ಎಂಬ ಪ್ರತಿಕ್ರಿಯೆಗಳನ್ನು ಕೊಡುವುದರಲ್ಲಿ ರೂಢಿಯಾಗಿರುತ್ತಾರೆ – ಯುಕ್ತವಾಗಿರುವಾಗ ಅವರಿಗೆ ಹೆಚ್ಚು ನಿರ್ಧಿಷ್ಟವಾದ ಪ್ರತಿಕ್ರಿಯೆಗಳನ್ನು ಕೇಳುವುದು ಒಳ್ಳೆಯದಾಗಿರುತ್ತದೆ.
  - **ಭಾಗವಹಿಸುವವರು:** ನಿಮ್ಮ ಉತ್ತರಗಳಿಂದ ಬೇಗನೆ ಆತುರವಾಗಿರಬೇಡಿರಿ ಅಥವಾ "ನಾನು ಇದನ್ನೇ ಮಾಡುತ್ತೇನೆ", ಅಥವಾ "ನೀವು ಮಾಡಬೇಕಾದದ್ದು ಏನೆಂದರೆ...." ಜನರು ಏನನ್ನು ತಿಳಿಯಪಡಿಸುತ್ತಿದ್ದಾರೆಂದು ಹೃದಯಕ್ಕೆ ಕಿವಿಗೊಡಿರಿ: ಭಾಗವಹಿಸುವವರ ಮತ್ತು ಹಿಂದಿನ ಕಥೆಗಳ ಆಲೋಚನೆಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ಜೋಡಿಸಿರಿ. ಮೌನತೆಗೆ ಭಯಪಡಬೇಡಿರಿ. ನಾವು ಶಾಂತವಾಗಿರುವಾಗ ಅನೇಕವೇಳೆ ಪವಿತ್ರಾತ್ಮನು ಮಾತನಾಡುವನು.
  - **ನಿಮ್ಮಷ್ಟಕ್ಕೆ ನೀವೇ:** ಇದು ನಿಮ್ಮನ್ನಾಗಲಿ ಅಥವಾ ನೀವು ಏನನ್ನು ತಿಳಿದಿದ್ದೀರಿ ಎಂಬುದನ್ನು ಕುರಿತಲ್ಲ. ನಿಮ್ಮ ತಲೆಯಲ್ಲಿ ಅಲೆದಾಡುತ್ತಿರುವ ವಿಷಯಗಳಿಗೆ ಕಿವಿಗೊಟ್ಟು ಅವುಗಳನ್ನೆಲ್ಲಾ ಬದಿಗಿಡಿರಿ ಮತ್ತು ವ್ಯಕ್ತಿಗಳಿಗೆ ಮತ್ತು ಅವರ ಪ್ರತಿಕ್ರಿಯೆಗಳಿಗೆ ಕಿವಿಗೊಡಿರಿ. ನಿಮ್ಮಲ್ಲಿ ಉತ್ತರವಿರಬೇಕೆಂಬ ಅಗತ್ಯವಿಲ್ಲ – ದೇವರೇ ಒದಗಿಸುವನು.

# ಬಹುವಿಧ ಬುದ್ಧಿವಂತಿಕೆಗಳು

| ಬುದ್ಧಿವಂತಿಕೆ | ಸಾಮರ್ಥ್ಯಗಳು | ಬೋಧನೆ |
|---|---|---|
| ಪದಚತುರ | • ಪದಗಳ ಉಪಯೋಗ<br>• ಆಲಿಸುವುದು<br>• ಓದುವುದು ಮತ್ತು ಬರೆಯುವುದು<br>• ಮಾತನಾಡುವುದು<br>• ಬಾಯಿಪಾಠ ಮಾಡುವುದು | • ಕಥೆಗಳನ್ನು ಹೇಳಿ ಅಥವಾ ಓದಿರಿ<br>• ದಿನಚರಿಯನ್ನು ಬಳಸಿ<br>• ವಿದ್ಯಾರ್ಥಿಗಳನ್ನು ಚರ್ಚೆಯಲ್ಲಿ ತೊಡಗಿಸಿ |
| ಸಂಗೀತಚತುರ | • ಸಂಗೀತ<br>• ತಾಳ<br>• ಸ್ವರ | • ಹಾಡುಗಳ ಮೂಲಕ ಸತ್ಯಗಳನ್ನು ಕಲಿಯಿರಿ<br>• ಹಾಡುಗಳನ್ನು ಬರೆಯಲು ಉತ್ತೇಜಿಸಿ<br>• ಮನಸ್ಥಿತಿ ವ್ಯವಸ್ಥಿತಗೊಳಿಸಲು ಸಂಗೀತ ಉಪಯೋಗಿಸಿ |
| ವಿಚಾರಚತುರ: ಗಣಿತ ಮತ್ತು ಸಂಖ್ಯೆಗಳು | • ಸಂಖ್ಯೆಗಳು<br>• ವಿಚಾರ ತರ್ಕಶಕ್ತಿ<br>• ವ್ಯವಸ್ಥೆಗಳಿಸುವುದು<br>• ಸಮಸ್ಯೆ ಪರಿಹರಿಸುವುದು | • ಅಧ್ಯಯನ ಮಾಡಿದ್ದನ್ನು ವಿಶ್ಲೇಷಿಸಿ<br>• ಶೋಧಿಸುವ, ಆಲೋಚಿಸುವ ಪ್ರಶ್ನೆಗಳನ್ನು ಕೇಳಿರಿ<br>• ಸಮಸ್ಯೆ ಪರಿಹರಿಸಲು ವಿದ್ಯಾರ್ಥಿಗಳನ್ನು ತೊಡಗಿಸಿ |
| ಚಿತ್ರಚತುರ | • ಕಲೆ<br>• ಚಿತ್ರಕಲೆ<br>• ಕಲ್ಪನೆ<br>• ಚಿತ್ರಗಳ ಉಪಯೋಗ | • ಚಿತ್ರಗಳನ್ನು, ಭಿತ್ತಿಪತ್ರಗಳು, ಭೂಪಟಗಳು ಮತ್ತು ವಿಡಿಯೋಗಳು<br>• ವಿದ್ಯಾರ್ಥಿಗಳು ತಮ್ಮ ತಿಳುವಳಿಕೆಯನ್ನು ಸೆಳೆಯಲಿ<br>• ಕಲೆ ಮತ್ತು ಕರಕೌಶಲ್ಯ ಚಟುವಟಿಕೆಗಳನ್ನು ಯೋಜಿಸಿ |
| ದೇಹಚತುರ: ದೈಹಿಕ ಅನುಭವ | • ಕ್ರೀಡಾಪಟು<br>• ನೃತ್ಯ<br>• ಕರಕೌಶಲ್ಯಗಳು<br>• ನಟನೆ | • ನಾಕಟ ಮತ್ತು ಪಾತ್ರದ–ಆಟವನ್ನು ನಡೆಸಿರಿ<br>• ದೈಹಿಕ ಚಲನೆ, ಆಟಗಳು, ನೃತ್ಯವನ್ನು ಉಪಯೋಗಿಸಿ<br>• ವಿದ್ಯಾರ್ಥಿಗಳು ಮಾಡುವ ಅಧ್ಯಯನದ ಮಾದರಿಗಳನ್ನು ಕಟ್ಟಲಿ |
| ಜನಚತುರ: ಬೇರೆಯವರೊಂದಿಗೆ ಪರಸ್ಪರ ಸಂಭಾಷಿಸುವುದು | • ಬೇರೆಯವರೊಂದಿಗೆ ಕೆಲಸಮಾಡುವುದು<br>• ಚರ್ಚೆಗಳು<br>• ಬೇರೆಯವರ ಅಗತ್ಯತೆಗಳ ಅರಿವು | • ಪರಸ್ಪರ ಕಾರ್ಯನಡೆಸುವ ಕಲಿಕೆಯನ್ನು ಉಪಯೋಗಿಸಿ (ಚಿಕ್ಕ ಗುಂಪುಗಳು ಇತ್ಯಾದಿ)<br>• ಸೇವಾ ಯೋಜನೆಗಳನ್ನು ಮಾಡಿರಿ<br>• ಬೆರೆಯುವಿಕೆ ಮತ್ತು ಹೊಂದಿಕೆಗೆ ಸಮಯ ಕೊಡಿರಿ |
| ಸ್ವಚತುರ/ ಪರ್ಯಾಲೋಚನೆ | • ತನ್ನನ್ನೇ ಅರ್ಥಮಾಡಿಕೊಳ್ಳುವುದು<br>• ಆತ್ಮಾವಲೋಕನ<br>• ಸ್ವ–ಪ್ರೇರಣೆ<br>• ಧ್ಯಾನ | • ಮೌನ ಅವಲೋಕನಕ್ಕಾಗಿ ಸಮಯವಕಾಶ ಮಾಡಿರಿ.<br>• ವ್ಯಕ್ತಿಗತ ಅಧ್ಯಯನದ ಸಮಯಗಳನ್ನು ಯೋಜಿಸಿರಿ.<br>• ಒಬ್ಬರಿಗೊಬ್ಬರು ಕಲಿಯುವದನ್ನು ಪ್ರಶ್ನಿಸಿರಿ (ಕೇಳಿರಿ).<br>• ದಿನಚರಿ, ಚಿತ್ರ |
| ಪ್ರಕೃತಿಚತುರ | • ತೆರೆದ ಜಾಗಗಳು<br>• ಪ್ರಾಕೃತಿಕ ವಸ್ತುಗಳು | • ಪ್ರಕೃತಿಯೊಂದಿಗೆ ಜೋಡಿಸುವ ಚಟುವಟಿಕೆಗಳು<br>• ಕಥೆಗಳನ್ನು ಹೇಳಲು ಪ್ರಾಕೃತಿಕ ಸ್ಥಳಗಳನ್ನು ಉಪಯೋಗಿಸಿ<br>• ಚರ್ಚೆ ಆರಂಭಿಸಲು ಅಥವಾ ರೂಪಕವಾಗಿ ಪ್ರಕೃತಿಯ ವಸ್ತುಗಳನ್ನು ಉಪಯೋಗಿಸಿ |

**ಸತ್ಯವೇದ ಕಥೆಯ ಉಪಯೋಗದಿಂದ ದೃಷ್ಟಿಕೋನದ ಬದಲಾವಣೆ** (ಸಿಂಪ್ಲಿ ದ ಸ್ಟೋರಿ ವೆಬ್‌ಸೈಟ್ ನಿಂದ ಪ್ರತಿಮಾಡಲಾಗಿದೆ)

ಸತ್ಯವೇದ ಕಥೆಯನ್ನು ಕಲಿಯುವಾಗ ಮತ್ತು ಉಪಯೋಗಿಸುವಾಗ ಕೆಲವು ಜನರು ಎದುರುಗೊಳ್ಳಬಹುದಾದ ದೃಷ್ಟಿಕೋನ ಬದಲಾವಣೆಯ ಕೆಲವು ಮಾದರಿಗಳು ಈ ಕೆಳಗೆ ಕೊಡಲ್ಪಟ್ಟಿವೆ, ವಿಶೇಷವಾಗಿ ಸಾಹಿತ್ಯದ ಶೈಲಿಯಲ್ಲಿ ವಾಕ್ಯಗಳ ಸಿದ್ಧತೆ ಮತ್ತು ಸೇವೆಯಲ್ಲಿ ತರಬೇತಿಗೊಂಡು ಅನುಭವವಿರುವ ಜನರು. ವಿಷಯದ ನಿಮಿತ್ತ ಕೆಲವು ಮತ್ತು ಬೇರೆ ಕೆಲವು ತರಬೇತಿಕೊಡಲು ನಾವು ಉಪಯೋಗಿಸುವ ವಿಧಾನಗಳ ನಿಮಿತ ಸವಾಲುಗಳಿರುತ್ತವೆ. ಈ ಎಲ್ಲಾ ಬದಲಾವಣೆಗಳನ್ನು ಎಲ್ಲರೂ ಎದುರಿಸುವದಿಲ್ಲ, ಆದರೆ ನಮ್ಮಲ್ಲಿ ಬಹಳಷ್ಟು ಜನರು ಕೆಲವನ್ನು ಎದುರಿಸುವರು:

1. ಮಾಹಿತಿಯನ್ನು ಕೊಡಲು ಉಪನ್ಯಾಸಕ್ಕೆ ಬದಲಾಗಿ ಪ್ರಶ್ನೆಗಳನ್ನು ಉಪಯೋಗಿಸುವದು.
2. ಪ್ರಶ್ನೆಗಳಿಂದಲೇ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವದು.
3. ಶಿಕ್ಷಕರು ಮುಖ್ಯ ವಿಷಯಕ್ಕೆ ಕೇಂದ್ರಿಕರಿಸದಿರುವುದು; ದೇವರ ವಾಕ್ಯವು ಕೇಂದ್ರವಾಗಿದೆ.
4. ಪೂರ್ವದಲ್ಲಿ ಬೊಧಿಸಲು ಆಗುವುದಿಲ್ಲವೆಂದು ತಿರಸ್ಕರಿಸಿದವುಗಳನ್ನು ಆಳವಾಗಿ ಬೋಧಿಸಲು ಬಾಗಿಲುಗಳನ್ನು ತೆರೆಯುವುದು.
5. ಆಲೋಚಿಸಲು ನಡೆಸುವಂತ ಪ್ರಶ್ನೆಗಳನ್ನು ಉಪಯೋಗಿಸುವುದರ ಮೂಲಕ, ಪವಿತ್ರಾತ್ಮನು ಪ್ರತಿಯೊಬ್ಬರಿಗೂ ಅವಕಾಶ ಕೊಡುವನು.
6. ಸಾಂಪ್ರದಾಯಿಕವಲ್ಲದ ಬೋಧನೆಗಳ ರಚನೆಯ ಮೂಲಕ ಫಲಿತಾಂಶಗಳನ್ನು ಸಾಧಿಸುವನು.
7. ಸತ್ಯವೇದ ಕಥೆಹೇಳುವ ಮುಖ್ಯಭಾಗವು ಜನರು ಬೇರೆಯವರಿಗೆ ಬೊಧಿಸುವಂತೆ ತರಬೇತಿಗೊಳಿಸುತ್ತದೆ.
8. ಗುರಿಗಳಿಗಾಗಿ ಶ್ರಮಿಸಲ್ಪಟ್ಟವು ಸ್ವಾಭಾವಿಕ ಫಲಗಳಾಗಿರುತ್ತವೆ.
9. ಕಲಿಸಲ್ಪಟ್ಟವರ ಮೂಲಕ ಪ್ರಭಾವಬೀರಲು ಶಿಕ್ಷಕರಿಗೆ ಅವಕಾಶಕೊಡುತ್ತದೆ.
10. ಬರೆಯಲ್ಪಟ್ಟ ಪುಸ್ತಕಗಳು ಅಥವಾ ಭೌತಿಕ ಸಾಧನಗಳನ್ನು ಹೊರತುಪಡಿಸಿ ಬೊಧಿಸುವುದು ಸ್ವತಂತ್ರವಾಗಿರುತ್ತದೆ.
11. ಕ್ರೈಸ್ತೀಯ ವಾತಾವರಣದ ಒಳಗೂ ಹೊರಗೂ ಸೇವೆ ಮಾಡಲು ಜನರನ್ನು ಸಿದ್ಧಪಡಿಸುತ್ತದೆ.
12. ಜನರು ಕಂಡುಹಿಡಿಯಲು ಶಕ್ತರಾಗಿರುವಾಗ ಶಿಕ್ಷಕರು ಮಾಹಿತಿಯನ್ನು ಒದಗಿಸಲು ಕಾದಿರುವರು.
13. ಮಾಹಿತಿಯನ್ನು ಕೊಡದೆ ಇರುವಾಗ; ತಮಗಾಗಿ ಕಂಡುಕೊಳ್ಳಲು ಬೇರೆಯವರಿಗೆ ಪ್ರಶ್ನೆಗಳು ಸಹಾಯಮಾಡುತ್ತವೆ.
14. ರೋಮಾಂಚಕ ಚರ್ಚೆಯು ನಡೆಯುತ್ತದೆ, ಆದರೆ ವಿಷಯ ಮತ್ತು ಸಭ್ಯತೆಯು ನಿಯಂತ್ರಣದಲ್ಲಿರುತ್ತದೆ.
15. ಭಾಗವಹಿಸುವವರಲ್ಲಿ ಬುದ್ಧಿಯುಳ್ಳವರು ಎಲ್ಲವನ್ನು ಕಂಡುಹಿಡಿಯಲು ಅನುಮತಿಸುವದರ ಮೂಲಕ, ಹಿಡಿದಿಡುವುದರ ಬೆಲೆಯನ್ನು ಕಲಿಯುವರು.
16. ನಡೆಸುವವರಿಂದ ಬರುವ ಮಾಹಿತಿಗೆ ಶಿಕ್ಷಕರು ಚೆನ್ನಾಗಿ ಕಿವಿಗೊಡಲು ಮತ್ತು ಪ್ರತಿಕ್ರಿಯಿಸಲು ಕಲಿಯುವರು.
17. ಸತ್ಯವೇದದ ಹೊರಗಿನ ಕಥೆಯ ಮಾಹಿತಿಯನ್ನಾಗಲಿ ಅಥವಾ ಪುಸ್ತಕಗಳನ್ನಾಗಲಿ ಉಪಯೋಗಿಸದೆ ಇರುವುದು.
18. ಸಾಹಿತ್ಯಕಾರರು ಬಾಯಿಮಾತಿನಿಂದ ಸಂಪರ್ಕ ಕಲ್ಪಿಸುವವರ ಲೋಕದೊಳಗೆ ಕಾರ್ಯನಿರ್ವಹಿಸಲು ಕಲಿಯುವರು.
19. ಬರೆದ ಟಿಪ್ಪಣಿಗಳಿಲ್ಲದೆ ವಾಕ್ಯಗಳನ್ನು ಸಿದ್ಧಪಡಿಸಿಕೊಳ್ಳುವ ಮತ್ತು ಹಂಚಿಕೊಳ್ಳುವ ಕೌಶಲ್ಯಗಳನ್ನು ಪಡೆದುಕೊಳ್ಳಬೇಕು.
20. ಜೀವಿತಗಳನ್ನು ಮಾರ್ಪಡಿಸುವ ಕಾರ್ಯವನ್ನು ಮಾಡಲು ವಾಕ್ಯದಲ್ಲಿ ಮತ್ತು ಪವಿತ್ರಾತ್ಮನಲ್ಲಿ ಭರವಸೆಯಿಡಿರಿ.
21. ಒಂದೇ ವಾಕ್ಯಭಾಗದಲ್ಲಿ ಉಳಿದುಕೊಳ್ಳುವ ಸಾಮಾನ್ಯ ಕಾರಣದಿಂದ ದೇಹದ ಐಕ್ಯತೆ ಉಂಟಾಗುತ್ತದೆ.
22. ಮಾನಸಿಕವಾಗಿ ಸಿದ್ಧಪಡಿಸಿದ ಪಟ್ಟಿಯಿಂದಲ್ಲದೆ ಕಥೆಯ ಆಲೋಚನೆಗಳನ್ನು ಚರ್ಚಿಸುವದರಲ್ಲಿ ಅನುಕೂಲವಾಗಿರುವುದು.
23. ಬೇರೆಯವರಿಗೆ ಬೆಲೆಯುಳ್ಳ ಆತ್ಮೀಕ ಮಾಹಿತಿಯನ್ನು ಯೌವನಸ್ಥರು ಕಂಡುಹಿಡಿಯಬಹುದು.
24. ವಿದ್ಯೆಯಿಲ್ಲದವರು ದೇವರ ವಾಕ್ಯದಿಂದ ಆಳವಾದ ಆತ್ಮೀಕ ಸತ್ಯವನ್ನು ಕೂಡಿಸಬಹುದು.
25. ಕಥೆಯಲ್ಲಿ ಆಯ್ಕಲ್ಪಟ್ಟ ಮತ್ತು ಆಂತರಿಕಗೊಳಿಸಿದ ಸತ್ಯವು, ಕಲಿಗರಿಗೆ ಅನ್ವಯಿಸುವಂತೆ ಪ್ರೇರಿಸುತ್ತದೆ.
26. ವಾಕ್ಯಕ್ಕೆ ಹೊಸಬರು ಹಾಗೂ ಪರಿಚಿತರು ಈ ಇಬ್ಬರೂ ಸಹ ಜೊತೆಗೆ ಒಬ್ಬರಿಂದೊಬ್ಬರು ಕಲಿಯುವರು.
27. ಸಮಾಜಿಕ–ಆರ್ಥಿಕ ಮತ್ತು ಜನಾಂಗೀಯ ಪೂರ್ವಾಗ್ರಹ ಮಹತ್ವವನ್ನು ಕಳೆದುಕೊಳ್ಳುತ್ತದೆ.
28. ಉನ್ನತರೆಂದು ಭಾವಿಸುವ ಜನರು ದೇವರು ಮಾಡುವಂತೆ ಬೇರೆಯವರಲ್ಲಿ ಮೌಲ್ಯಗಳನ್ನು ನೋಡಲು ಆರಂಭಿಸುವರು.
29. ಶ್ರಮಿಸಿದ ಧ್ಯಾನವು ಸ್ವಾಭಾವಿಕವಾಗಿ ಸಂಭವಿಸಲು ಆರಂಭಿಸುತ್ತದೆ.
30. ಚಿಕ್ಕ ವಾಕ್ಯಭಾಗದಲ್ಲಿ ಕಂಡು ಬಂದ ಆಳವು ಎಲ್ಲರನ್ನು ದಿಗ್ಭ್ರಮೆಗೊಳಿಸುತ್ತದೆ.
31. ಅನಕ್ಷರಸ್ಥರು ಮತ್ತು ವಿದ್ಯೆಯಿಲ್ಲದವರು ವಿಮರ್ಶಾತ್ಮಕವಾಗಿ ಆಲೋಚಿಸಬಹುದು.
32. ಕಥೆ ಹೇಳುವುದು ಶಿಕ್ಷಕರಿಗೆ ಮತ್ತು ಕೇಳುಗರಿಗೆ ಹೆಚ್ಚು ಆಳವಾಗಿ ಆಲೋಚಿಸಲು ಪ್ರೇರಣೆ ಕೊಡುತ್ತದೆ.
33. ವಾಕ್ಯದ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಬಾಯಿಪಾಠ ಮಾಡುವಷ್ಟೇ ಸಮನಾಗಿರುತ್ತದೆ, ಮತ್ತು ಸುಲಭವಾಗಿರುತ್ತದೆ!
34. ಅಕ್ಷರಸ್ಥರು ಮುದರಿಸಲ್ಪಟ್ಟ ಪುಟವನ್ನು ನೋಡದೆ ಸತ್ಯವೇದ ಭಾಗಗಳನ್ನು ಕಲಿಯಲು ಶಕ್ತರಾಗಿದ್ದಾರೆ.
35. ಸತ್ಯವೇದ ಕಥೆಯನ್ನು ಉಪಯೋಗಿಸಿ ಜನರು ಸುಲಭವಾಗಿ ಸಹ ಪ್ರಮುಖರಾಗಬಹುದು.
36. ಪಾಲ್ಗೊಳ್ಳುವವರ ಅಗತ್ಯತೆಗಳಿಗೆ ಸುಲಭವಾಗುವಂತೆ ತರಬೇತಿ ವೇಳಾಪಟ್ಟಿಯನ್ನು ಸಿದ್ಧಪಡಿಸಿರಿ.
37. ಎಲ್ಲವನ್ನು ತಿಳಿದ ಶ್ರೇಷ್ಠರಂತೆ ಇರದೆ, ಶಿಕ್ಷಕರು ಆಸಕ್ತಿಕರ ಕಲಿಗರಂತೆ ವರ್ತಿಸುವರು.
38. ಕಥೆಯಿಂದ ಕಲಿಸಲ್ಪಟ್ಟ ಜನರು ವಿಷಯವನ್ನು ನೆನಪಿನಲ್ಲಿಟ್ಟುಕೊಂಡು ಬೇರೆಯವರಿಗೆ ಹಂಚಿಕೊಳ್ಳುವರು.

# ಮಕ್ಕಳ ಕಥಾಫಲಕ ತರಬೇತಿ

**ಚಿತ್ರಗಳನ್ನು ಕತ್ತರಿಸುವದು:**

- ಅಂತಿಮ ಸೂಕ್ಷ್ಮವಾಗಿ ಕತ್ತರಿಸುವುದಕ್ಕೆ ಬದಲಾಗಿ, ಮೊದಲು ಚಿತ್ರಗಳ ಸುತ್ತಲು ಕತ್ತರಿಸಿರಿ.
- ನಂತರ ಹೊರರೇಖೆಯ ಮೇಲೆ ಅಂತಿಮವಾಗಿ ಕತ್ತರಿಸಿರಿ.
- ನೀವು ಚಿತ್ರಗಳನ್ನು ಒಂದು ಸಾರಿ ಒಂದು ಕಥೆಯನ್ನು ಅಥವಾ ಎಲ್ಲವನ್ನು ಒಂದೇ ಸಾರಿ ಕತ್ತರಿಸಬಹುದು.
- ಚಿತ್ರಗಳನ್ನು ಸ್ವಚ್ಛವಾಗಿಡಲು ಕಥಾಫಲಕವನ್ನು ಉಪಯೋಗಿಸುವುದಕ್ಕೆ ಮೊದಲು ನಿಮ್ಮ ಕೈಗಳನ್ನು ತೊಳೆದುಕೊಳ್ಳಿರಿ.

**ಚಿತ್ರಗಳನ್ನು ಶೇಖರಿಸುವುದು:**

- ಜಾಗ್ರತೆ ವಹಿಸಿದೆ ಈ ವಸ್ತುಗಳು ಜೀವನಪರ್ಯಂತ ಉಳಿಯುತ್ತವೆ.
- ಎಲ್ಲಾ ಚಿತ್ರಗಳನ್ನು ಒಂದು ಚೀಲದಲ್ಲಿ ಹಾಕಿ.
- ನೀವು ಚೀಲದಿಂದ ಚಿತ್ರಗಳನ್ನು ತೆಗೆದುಕೊಳ್ಳಬೇಕಾದರೆ, ಅವುಗಳನ್ನು ಆದಷ್ಟು ಬೇಗನೆ ಹಿಂದಿರುಗಿಸಿರಿ.
- ಪ್ಲಾಸ್ಟಿಕ್ ಚೀಲದಲ್ಲಿ ಅಥವಾ ಹಾಳೆಯ ಹೊದಿಕೆಯಲ್ಲಿ ಶೇಕರಿಸಿ.
- ಸಂಖ್ಯೆ ಅಥವಾ ವಿಧದ ಪ್ರಕಾರ ಜೋಡಿಸಿಡಿ.

**ಸಿದ್ಧತೆ:**

- ಚಿತ್ರಗಳಿಂದ ನಿಮ್ಮ ಸ್ವಂತವಾಗಿ ಅಭ್ಯಾಸಿಸಿರಿ, ಮಕ್ಕಳ ಮುಂದೆ ಎಂದಿಗೂ ಮಾಡಬೇಡಿರಿ. ನೀವು ಇವುಗಳಿಂದ ಆಶ್ಚರ್ಯಪಡಿಸಬಹುದು.
- ಕಥಾ ಪುಸ್ತಿಕೆಯನ್ನು ತೆಗೆದುಕೊಂಡು ಫಲಕದಲ್ಲಿ ಎಲ್ಲಿ ಚಿತ್ರಗಳನ್ನು ಇಡಬೇಕೆಂದು ತಿಳಿದುಕೊಳ್ಳಲು ಚಿತ್ರಗಳನ್ನು ನೋಡಿರಿ.
- ನೀವು ಒಮ್ಮೆ ಚಿತ್ರಗಳನ್ನು ಫಲಕದ ಮೇಲೆ ಇಟ್ಟ ನಂತರ, ಕೊನೆಯಿಂದ ಆರಂಭದವರೆಗೆ ಅವುಗಳನ್ನು ತೆಗೆದಿಡಿರಿ. ನಿಮ್ಮ ಸತ್ಯವೇದದಲ್ಲಿ ಮತ್ತೊಂದರ ಮೇಲೆ ಇಡುವುದಾದರೆ, ನಿಮಗೆ ಮೊದಲು ಬೇಕಾದದ್ದನ್ನು ಮೇಲಿಡಿರಿ.
  *ಯೇಸು ಮಕ್ಕಳನ್ನು ಆಶೀರ್ವದಿಸುವ* ಕಥೆಯನ್ನು ಪ್ರದರ್ಶಿಸಿರಿ.
- ಮಕ್ಕಳು ಬರುವಾಗ ಫಲಕದ ಮೇಲೆ ಹಿನ್ನಲೆಗಳು ಮತ್ತು ನೈಸರ್ಗಿಕ ದೃಶ್ಯಾವಳಿಗಳನ್ನು ಇಡಿರಿ. ಇದು ಸಂತೋಷವನ್ನುಂಟುಮಾಡುತ್ತದೆ!
  *ಯೇಸು ಮಕ್ಕಳನ್ನು ಆಶೀರ್ವದಿಸುವ* ಕಥೆಯನ್ನು ಪ್ರದರ್ಶಿಸಿರಿ.
- ಮಕ್ಕಳು ತರಗತಿಯ ಒಳಗೆ ಬಂದಾಗ ಕೆಲವೊಮ್ಮೆ ಚಿತ್ರಗಳಲ್ಲಿ ಒಂದೊಂದನ್ನು ತೆಗೆದುಕೊಡುವುದರ ಮೂಲಕ ನಿಮಗೆ ಸಹಾಯಮಾಡಲಿ. ಫಲಕದ ಮೇಲೆ ಹಚ್ಚಲು ನೀವು ಅವರನ್ನು ಕರೆದಾಗ ಅವರು ಸಿದ್ಧರಾಗಿ ಬರುವಂತೆ ಹೇಳಿರಿ. ಇದು ಅಡ್ಡಿಪಡಿಸುವ ವಿದ್ಯಾರ್ಥಿಗಳಿಂದ ಪರಿಣಾಮಕಾರಿಯಾಗಿರುತ್ತದೆ – ಅವರು ಅದನ್ನು ಸರಿಯಾಗಿ ಮಾಡಲು ಹತ್ತಿರದಿಂದ ಕೇಳಿಸಿಕೊಳ್ಳುವರು!

**ಸುಳಿವುಗಳು:**

- ಫಲಕದ ಮೇಲೆ ನಿಮ್ಮ ದೃಷ್ಟಿಕೋನವನ್ನು ಗಮನಿಸಿರಿ. ಫಲಕದ ಮೇಲ್ಭಾಗದಲ್ಲಿ ಚಿಕ್ಕ ಚಿತ್ರಗಳನ್ನು ಹಾಕುವುದರ ಮೂಲಕ, ಅವು ಇನ್ನು ದೂರವಿದ್ದ ಹಾಗೆ ಕಾಣುವಂತೆ ಮಾಡುತ್ತಿದ್ದೀರಿ.
  *ಕಳೆದುಹೋದ* ಕುರಿಯಿಂದ ಪ್ರದರ್ಶಿಸಿರಿ.
- ಚಿತ್ರಗಳನ್ನು ಬಹಳ ಮೇಲೆ ಅಂಟಿಸಬೇಡಿರಿ. ಅವುಗಳನ್ನು ನೇರವಾಗಿ ಮತ್ತು ಮಟ್ಟದಲ್ಲಿಡಿರಿ.
  *ಜನರ ಚಿತ್ರಗಳಿಂದ* ತೋರಿಸಿರಿ.
- ಕಥೆಯು ವಾಸ್ತವಾಗಿ ಕಾಣುವಂತೆ ಮಾಡಲು ಪ್ರಯತ್ನಿಸಿರಿ.
- ನಿಮ್ಮ ಕಲ್ಪನೆಗಳನ್ನು ಉಪಯೋಗಿಸಿರಿ, ಸೃಜನಾತ್ಮಕವಾಗಿರ್ರಿ.

# ಸತ್ಯವೇದ ಕಥೆ ಪುಸ್ತಕಗಳು

ಇಂಟರ್ ನ್ಯಾಷನಲ್ ಮಿಷನ್‌ಬೋರ್ಡ್ (ಐ.ಎಂ.ಬಿ) www.imb.org
- ಹುಡುಕುವ ಸಾಲಿನಲ್ಲಿ *ಕಥೆ* ಎಂಬ ಪದವನ್ನು ಹಾಕಿರಿ

ಇಂಟರ್‌ನ್ಯಾಷನಲ್ ಒರಾಲಿಟಿ ನೆಟ್‌ವರ್ಕ್ www.internationaloralitynetwork.com
- ಪುಸ್ತಕಗಳು
- ಫೇಸ್‌ಬುಕ್: ಇಂಟರ್‌ನ್ಯಾಷನಲ್ ಒರಾಲಿಟಿ ನೆಟ್‌ವರ್ಕ್

ಸ್ಟಿವನ್ ಜೇಮ್ಸ್ www.stevenjames.net
- ಪುಸ್ತಕಗಳು ಮತ್ತು ಡ್‌ನ್‌ಲೋಡ್ ಮಾಡಬಹುದಾದ ಟಿಪ್ಪಣಿಗಳು (ಪುಸ್ತಕ: ಕ್ರಿಯೇಟಿವ್ ಸ್ಟೋರಿಟೆಲ್ಲಿಂಗ್ ಗೈಡ್. ಸ್ಟ್ಯಾಂಡರ್ಡ್ ಪ್ರಕಾಶನ. 2002).

ಕಿಡ್ಸ್ ಅರ್‌ಂಡ್ ದ ವರಲ್ಡ್ www.kidsaroundtheworld.com
- ಮಕ್ಕಳ ಕಥಾಫಲಕ ಜೋಡಿಗಳು, ಪಾಠ್ಯಕ್ರಮ, ತರಬೇತಿ ಸಲಕರಣೆಗಳು
- ಫೇಸ್‌ಬುಕ್: ಕಿಡ್ಸ್ ಅರ್‌ಂಡ್ ದ ವರಲ್ಡ್; ಕಿಡ್ಸ್‌ಸ್ಟೋರಿ

ಮಿಕಾಯೆಲ್ ನೋವೆಲ್ಲಿ
- ಪುಸ್ತಕ: ಶೇಪ್ ಬೈದ ಸ್ಟೋರಿ. ಜೋಂಡರ್‌ವಾನ್. 2008

ಒರಾಲಿಟಿ ಸ್ಟ್ರಾಟಜಿಸ್ www.oralitystrategies.org
- ಕಥೆ ಜೋಡಿಗಳು, ವಿಡಿಯೋ, ಲೇಖನಗಳು
- ಫೇಸ್‌ಬುಕ್: ಒರಾಲಿಟಿ ಸ್ಟ್ರಾಟಜಿಸ್

ರಿಯಲ್ ಲೈಫ್ ಮಿನಿಸ್ಟ್ರೀಸ್/ನಾವ್ ಪ್ರೆಸ್ www.rlmchurchtraininganddevelopment.com
- ಪುಸ್ತಕಗಳು ಮತ್ತು ಪಾಠ್ಯಕ್ರಮ
- ವಾಕ್ ತ್ರೂದ ಬೈಬಲ್. ಸ್ಟೋರಿ ತ್ರೂದ ಬೈಬಲ್. 2011

ಸಿಂಪ್ಲಿ ದ ಸ್ಟೋರಿ ಮತ್ತು ಗಾಡ್ಸ್ ಸ್ಟೋರಿ ಪ್ರಾಜೆಕ್ಟ್ www.SimplytheStory.com www.gods-story.org
- ತರಬೇತಿ, ಪುಸ್ತಕಗಳು ಮತ್ತು ಡ್‌ನ್‌ಲೋಡ್ ಮಾಡಬಹುದಾದ ಕೈಪಿಡಿ

ಮಾರ್ಕ್ ಸ್ನವ್‌ಡೆನ್ www.truthsticks.com
- ಪುಸ್ತಕ: ಟ್ರುತ್ ದಟ್ ಸ್ಟಿಕ್ಸ್ ವಿತ್ ಅವೆರಿ ವಿಲ್ಲಿಸ್. ನವಿಪ್ರೆಸ್. 2010
- ಫೇಸ್‌ಬುಕ್: ಟ್ರುತ್‌ಸ್ಟಿಕ್ಸ್

ಬಳಕೆಯಲ್ಲಿರುವ ವಾಕ್ಯಗಳು www.siutraining.org
- *ಮೇಕಿಂಗ್ ಡಿಸೈಪಲ್ಸ್ ಆಫ್ ಒರಲ್ ಲರ್‌ನರ್ಸ್ ಡೌನ್‌ಲೋಡ್ ಮಾಡಿ;* ಆನ್‌ಲೈನ್ ಟ್ರೇನಿಂಗ್, ಪುಸ್ತಕಗಳು, ಲೇಖನಗಳು

ಸೋಮಾ ಸಮುದಾಯಗಳು www.somacommunities.org/soma-school
- ತರಬೇತಿ, ಪಾಠ್ಯಕ್ರಮ

ಎಸ್‌ಟಿ4ಟಿ: www.storyingt4t.ning.com
- ನಿರ್ಧಿಷ್ಟವಾಗಿ ಮಕ್ಕಳನ್ನು ಶಿಸ್ತುಪಡಿಸಲು ತರಬೇತಿ ಕೈಪಿಡಿ ಮತ್ತು ಕಥೆಗಳು (ಎಸ್‌ಟಿ4ಕಿಡ್ಸ್)

ಸ್ಟೋರಿ4ಆಲ್ www.story4all.com
- ವಾರ ಸಂಗೀತ ಪ್ರಸಾರಣ: ಐಟ್ಯೂನ್‌ಗಳಲ್ಲಿ ಸ್ಟೋರಿ4ಆಲ್

ಜಾನ್ ವಾಲ್ಶ್ www.bibletelling.com
- ತರಬೇತಿ, ಪಠ್ಯಾಕ್ರಮ (ಪುಸ್ತಕ: *ಆರ್ಟ್ ಆಫ್ ಸ್ಟೋರಿಟೆಲ್ಲಿಂಗ್.* ಮೂಡಿ ಪ್ರಕಾಶಕರು. 2003)
- ಫೆಸ್‌ಬುಕ್: ಬೈಬಲ್‌ಟೆಲಿಂಗ್

kids around the world

www.kidsaroundtheworld.com